# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

KENDHOOLI *Kannada Weekly*


kendhooli.com/e-paper/

**ಈಶ X ಶಿವ+ಸಿದ್ದ = ೦**
**ಕಾಂಗ್ರೆಸ್ ಸಾಧಿಸಿದ್ದು ಸೊನ್ನೆ**



ಸಂಪುಟ - 02 | ಸಂಚಿಕೆ - 67 | ಪುಟ - 16 | ರೂ. 16/- | ಫೆಬ್ರವರಿ 24 ರಿಂದ ಮಾರ್ಚ್ 02, 2022 KARKAN/2018/76310





## ಕೆಟ್ಟ ರಾಜಕಾರಣಕ್ಕೆ ಇನ್ನೆಷ್ಟು ಮುಗ್ಧರ

# ಬಲಿ ಬೇಕು?


**ಕುತೂಹಲದ**
## ಕದನ ಕಾರಣ
ಭಾಸ್ಕರ ರಾವ್ ಅವರ ಅಂಕಣದಲ್ಲಿ...

**ತೃತೀಯ ರಂಗ**
## ಸದೃಢತೆಗೆ ಸಿದ್ಧತೆ

**ಚಾಮರಾಜನಗರದಲ್ಲಿ**
## ಖಾತೆ ತೆರೆಯಲು ಜೆಡಿಎಸ್ ತಂತ್ರ

# ಕನ್ನಡ ಭಾಷಾ ಕಲಿಕೆಗೆ ಹೊಸ ಮಾನದಂಡ ಮುಖ್ಯ






'ದೇಶ ಭಕ್ತಿಯಂತೆ ಭಾಷಾ ಪ್ರೇಮವೂ ಬೆಳೆಯಲಿ' ಎಂದು ಮೊನ್ನೆ ಅಂತರಾಷ್ಟ್ರೀಯ ಮಾತೃಭಾಷಾ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಏರ್ಪಡಿಸಿದ್ದ ಸಮಾರಂಭದಲ್ಲಿ ರಂಗಾಯಣ ನಿರ್ದೇಶಕ ಅಡ್ಡಂಡ ಸಿ ಕಾರ್ಯಪ್ಪ ಅವರ ಈ ಮಾತು ಒಪ್ಪುವಂತದ್ದೆ, 'ಭಾಷಾ ಪ್ರೇಮ ರಕ್ತದಲ್ಲೂ ಇರಬೇಕು ಮನೆಯಲ್ಲಿ ಕನ್ನಡ ಮಾತನಾಡದೆ ಹೊರಗಡೆ ಅಬ್ಬರಿಸುವುದರಿಂದ ಭಾಷೆ ಉಳಿಯುವುದಿಲ್ಲ' ಎಂದಿದ್ದಾರೆ. ನಿಜ ಭಾಷೆ ಬಗ್ಗೆ ಕೇವಲ ಅಭಿಮಾನ ಇದ್ದರೆ ಸಾಲದು ಭಾಷೆ ಮಾತನಾಡಬೇಕು ಹೊರಗಡೆಯಿಂದ ಬಂದವರಿಗೂ ಭಾಷೆ ಮಾತನಾಡಿಸಲು ಪ್ರಯತ್ನಗಳು ನಡೆಯಬೇಕು ಆಗ ಭಾಷೆ ಉಳಿಯುತ್ತದೆ ಬೆಳೆಯುತ್ತದೆ.

ಕಾಲ ಕಾಲಕ್ಕೆ ಸರ್ಕಾರವೂ ಅನುಧಾನ ನೀಡುವ ಮೂಲಕ ಭಾಷೆ ಬೆಳವಣಿಗೆಗೆ ಕಾರಣವಾಗಬೇಕು ಆದರೆ ಸರ್ಕಾರವೂ ಕೂಡ ಕೆಲವೊಮ್ಮೆ ನಿರ್ಲಕ್ಷ್ಯ ವಹಿಸುವುದರಿಂದ ಅನುಧಾನ ಕಡಿತಗೊಂಡು ಭಾಷೆ ಅಭಿವೃದ್ಧಿಗೆ ಕುಂಠಿತವೂ ಆಗುತ್ತಿದೆ. ಈ ಬಗ್ಗೆ ಸರ್ಕಾರಗಳು ಎಚ್ಚೆತ್ತುಕೊಳ್ಳಬೇಕು.

ಹೊರರಾಜ್ಯಗಳಿಂದ ಬಂದ ವ್ಯಕ್ತಿಗಳಿಗೆ ಕನ್ನಡ ಕಲಿಸುತ್ತೀರಾ ? ಎಂದಾಗ ನಮ್ಮಲ್ಲಿ ಯಾವ ತಯಾರಿ ಇದೆ ಎನ್ನುವ ಪ್ರಶ್ನೆಗಳು ಉದ್ಭವವಾಗುತ್ತವೆ. ಶಿಕ್ಷಣ ಕ್ಷೇತ್ರ ಈ ತಯಾರಿಗೆ ಸಿದ್ದವಿದೆಯೇ ? ಇಲ್ಲ ನಿಜಕ್ಕೂ ಅಂತ ಯಾವ ತಯಾರಿಯೂ ಇಲ್ಲ ಈ ನಡುವೆಯೇ ಭಾಷೆ ಬೆಳೆಯಬೇಕು ಎಂದು ಕೇವಲ ಭಾಷಣ ಬಿಗಿದರೆ ಸಾಲದು ಭಾಷೆ ಮಾತನಾಡಬೇಕು ಮಾತನಾಡಿಸಬೇಕು. ಈ ಕುರಿತು ಆಂದೋಲನಗಳು ನಡೆಯಬೇಕು. ಆಂದೋಲನ ಎಂದರೆ ಕೇವಲ ಕಾವೇರಿ, ಮೇಕೆ ದಾಟು, ಹಿಂದಿ ಹೇರಿಕೆ ಇಂತ ವಿವಾದಗಳಿಗೆ ಮಾತ್ರ ಧ್ವನಿಯಾದರೆ ಸಾಲದು ಸದಾ ಭಾಷೆ ಬೆಳವಣಿಗೆ ಬಗ್ಗೆ ಆಂದೋಲನಗಳು ನಡೆಯಬೇಕು. ಈ ಬಗ್ಗೆ ಯಾರಾದಾರೂ ಕನ್ನಡ ಸಂಘಟನೆಗಳು ಎಚ್ಚೆತ್ತುಕೊಂಡು ಭಾಷಾ ಬೆಳವಣಿಗೆಗೆ ಹೋರಾಟ ನಡೆಸಿವೆಯೇ ಎನ್ನುವ ಪ್ರಶ್ನೆಗೆ ಉತ್ತರ ಸಿಗುವುದು. ಒಂದು ಡಾ. ಚಿದಾನಂದಮೂರ್ತಿ ಮತ್ತೊಬ್ಬರು ವಾಟಾಳ್ ನಾಗರಾಜ್ ಇವರಿಬ್ಬರನ್ನು ಬಿಟ್ಟರೆ ಉಳಿದಂತೆ ಕೇವಲ ಸಂದರ್ಭದ ವಿವಾದಗಳಿಗೆ ಮಾತ್ರ ಧ್ವನಿಯಾಗುತ್ತಿದ್ದಾರೆ . ಆದರೆ ಭಾಷಾ ಬೆಳವಣಿಗೆ ಬಗ್ಗೆ ಭಾಷೆ ಮಾನಾಡಿಸುವ ಕಲಿಸುವ ಕುರಿತ ಬಗ್ಗೆ ಯಾರಾದರೂ ಆಂದೋಲನ ನಡೆಸಿದ್ದಾರೆಯೇ? ಎನ್ನುವ ಪ್ರಶ್ನೆಗೆ ಯಾರಿಂದಲೂ ಉತ್ತರವಿಲ್ಲ.

ಇನ್ನೂ ಶಿಕ್ಷಣ ಮತ್ತು ಶಿಕ್ಷಣ ನೀತಿಯ ಕುರಿತು ಹೇಳುತ್ತಾ ಹೋದರೆ ಎಲ್ಲೋ ಒಂದು ಕಡೆ ಶಿಕ್ಷಣ ನೀತಿಯಲ್ಲಿಯೂ ಎಡವಟ್ಟುಗಳೇ ಹೆಚ್ಚಾಗಿವೆ. ಈಗ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಗೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಭಾಷಾ ಕಲಿಕೆ ಕುರಿತು ಯೋಚಿಸದಿದ್ದರೆ ಮುಂದೊಂದು ದಿನ ಅದು ದೊಡ್ಡ ಸವಾಲಾಗಿ ಪರಿಣಮಿಸಬೇಕಾಗುತ್ತದೆ. ಇಂತಹ ಯೋಚನೆಗಳನ್ನೇ ಸರ್ಕಾರ ಮಾಡುವುದಿಲ್ಲ ಇದರ ಬದಲಾಗಿ ಧಾರ್ಮಿಕತೆಯ ಬಗ್ಗೆ ಶಾಲೆಗಳಲ್ಲಿ ಸಮವಸ್ತ್ರದ ಕುರಿತು ಅನಾವಶ್ಯಕ ವಿವಾದಗಳಿಗೆ ಎಡೆಮಾಡಿಕೊಡುತ್ತದೆ. ಇಲ್ಲಿ ಸಮವಸ್ತ್ರ ಮುಖ್ಯವಲ್ಲ ಬದಲಾಗಿ ಭಾಷೆ ಕಲಿಕೆ ಬಗ್ಗೆ ಗಂಭೀರವಾಗಿ ಪರಣಿಮಿಸಬೇಕಿದೆ. ಆ ಮೂಲಕ ಶಿಕ್ಷಣದಲ್ಲಿ ಭಾಷೆ ಕಲಿಕೆಯ ಕುರಿತು ಸರ್ಕಾರ ಹೊಸ ಸವಾಲುಗಳನ್ನು ಒಡ್ಡಿಕೊಂಡು ಅದಕ್ಕೊಂದು ನೀತಿಯನ್ನು ತರುವ ಅಗತ್ಯವಿದೆ , ಇದನ್ನು ಬಿಟ್ಟು ಕಲಿಕೆಯ ಹಂತದ ಮಕ್ಕಳಲ್ಲಿ ಧಾರ್ಮಿತೆಯ ವಿಷ ಬೀಜ ಬಿತ್ತುವುದಲ್ಲ. ಈ ಬಗ್ಗೆ ಸರ್ಕಾರ ಗಂಭೀರ ಚಿಂತನೆ ಮಾಡುವ ಅಗತ್ಯವಿದೆ.

ನಮ್ಮ ನಾಡಿನ ನೂರಾರು ಶಾಲೆಗಳಿಗೆ ನೂರು ವರ್ಷಗಳ ಇತಿಹಾಸವಿದೆ. ಆದರೆ ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಯೇ ಹೆಚ್ಚಿನ ಮಕ್ಕಳಿಗೆ ಕಷ್ಟದ ವಿಷಯವಾಗಿ ಪರಿಣಮಿಸಿದೆ ಎನ್ನುವುದು ನೋವಿನ ಸಂಗತಿ. ಮಕ್ಕಳಿಗೆ ಕನ್ನಡ ಪರೀಕ್ಷೆಯ ದಿನ ಬಂತೆಂದರೆ ಹೆತ್ತವರು ಕಂಗಾಲಾಗಿ ಬಿಡುತ್ತಾರೆ. ಇದಕ್ಕೆ ಕಾರಣವೇನು? ಬಾಲ್ಯದಲ್ಲಿಯೇ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವುದರಿಂದ ಕನ್ನಡ ಕಷ್ಟವಾಗಬಹುದು ಎಂದು ಹೇಳಬಹುದಾದರೂ 'ಕನ್ನಡ ಬೋಧನೆ'ಯಲ್ಲಿ ಏನಾದರೂ ಸಮಸ್ಯೆಯಿದೆಯೇ? ಎಂಬ ಪ್ರಶ್ನೆಯನ್ನು ಯಾಕೆ ಕೇಳಿಕೊಳ್ಳಬಾರದು? ಇಂಥದ್ದೊಂದು ಪ್ರಶ್ನೆ ಇವತ್ತು ಶಿಕ್ಷಣದಲ್ಲಿ ಕನ್ನಡ ಕಲಿಸುವಿಕೆ ಮತ್ತು ಕಲಿಯುವಿಕೆಯ ಸ್ಥಿತಿಗತಿಯನ್ನು ತೆರೆದಿಡಬಹುದು. ಸುಮ್ಮನೆ ಗೂಗಲ್‌ನಲ್ಲಿ

ಹೋದರೆ ಇಂಗ್ಲಿಷ್ ಕಲಿಕೆ ಕುರಿತು ಸಾಕಷ್ಟು ಮಾಹಿತಿಗಳು ದೊರಕುತ್ತವೆ. ಆದರೆ ಅದೇ ಕನ್ನಡ ಭಾಷೆ ಕುರಿತು ಯಾವ ಮಾಹಿತಿಗಳು ಸಿಗುವುದಿಲ್ಲ. ಕೇವಲ ಪೇಪರ್ ಕಟ್ಟಿಂಗ ಮಣ್ಣು ಮಸಿ ಸಿಗುತ್ತದೆ ಇದು ಎಂಥಾ ದುರಂತವಲ್ಲವೆ? ಸರ್ಕಾರ ಈ ಕಡೆ ಯಾಕೆ ಗಮನ ಹರಿಸಿಲ್ಲ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯಾಕೆ ಕಣ್ಣು ಮುಚ್ಚಿ ಕುಂತಿದೆಯೇ? ಭಾಷಾ ಕಲಿಕೆಯೇ ಪ್ರದಾನವಾಗಬೇಕು ಅಂತದ್ದರಲ್ಲಿ ಕೇವಲ ವಿವಿಧ ಸಂಘಟನೆಗಳಿಗೆ ಅನುದಾನಗಳನ್ನು ನೀಡಿ ಕಮಿಷನ್ ಪಡೆಯುವದಷ್ಟೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳಿಗೆ ಗೊತ್ತಿರುವ ಸಂಗತಿ ಎನಿಸುತ್ತದೆ. ಇದರ ಬದಲಿಗೆ ಯಾಕೆ ಭಾಷಾ ಬೋದನೆ ಕುರಿತು ಗೂಗಲ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗಿಲ್ಲ ಈ ಕುರಿತು ಯಾರೊಬ್ಬರು ಆ ಇಲಾಖೆಯ ವಿರುದ್ಧ ಧ್ವನಿ ಎತ್ತಿಲ್ಲ ಎನ್ನುವುದೇ ದೊಡ್ಡ ಪ್ರಶ್ನೆಯಾಗಿ ಉಳಿದಿದೆ.

ಒಂದು ಬಗೆಯಲ್ಲಿ ಭಾರತದಲ್ಲಿ 'ಶಿಕ್ಷಣದಲ್ಲಿ ಯಾವ ಭಾಷೆಯನ್ನು ಬಳಸಬೇಕು' ಎಂಬ ವಿಷಯದ ಕುರಿತ ದೀರ್ಘಕಾಲೀನ ಚರ್ಚೆಗೆ 'ತ್ರಿಭಾಷಾ ಸೂತ್ರ'ದ ಮೂಲಕ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನ ನಡೆಯಿತು. ಈ ಮೂಲಕವೇ ದೇಶದಲ್ಲೆಡೆ ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಬೇಡಿಕೆ ಹೆಚ್ಚಾಗಿದೆ. ಆದರೆ ಪಕ್ಕದ ರಾಜ್ಯಗಳಾದ ತಮಿಳು ನಾಡಿನಲ್ಲಿ ತಮಿಳನ್ನೇ ಪ್ರಧಾನ ಭಾಷೆಯನ್ನಾಗಿ ಇಂಗ್ಲಿಷ್ ಮಾಧ್ಯಮಕ್ಕಿಂತ ತಮಿಳು ಮಾಧ್ಯಮಕ್ಕೆ ಹೆಚ್ಚು ಪ್ರಧಾನ್ಯತೆ ಕೊಡಲಾಗಿದೆ. ಅಂತ ಮಾಧ್ಯಮಗಳ ಬಗ್ಗೆ ಅಲ್ಲಿ ಪಕ್ಷಗಳ ಬೇದ ಮರೆತು ಭಾಷೆ ವಿಷಯದಲ್ಲಿ ಒಗ್ಗಟ್ಟಿನ ಧ್ವನಿ ಎತ್ತುತ್ತಾರೆ ಆದರೆ ದುರಂತ ಎಂದರೆ ನಮ್ಮ ರಾಜ್ಯದಲ್ಲಿ ಒಂದೊಂದು ಪಕ್ಷಗಳದ್ದೆ ಒಂದೊಂದು ನಿಲುವು ಹಾಗಾಗಿಯೇ ಇಲ್ಲಿ ಕನ್ನಡ ಮಾಧ್ಯಮಕ್ಕಿಂತಲೂ ಹೆಚ್ಚಾಗಿ ಇಂಗ್ಲಿಷ್ ಮಾಧ್ಯಮಗಳೇ ಹೆಚ್ಚಾಗಿವೆ. ಯಾವ ರಾಜಕಾರಣಿಯೂ ಯವ ಅಧಿಕಾರಿ ಮಕ್ಕಳು ಅಪ್ಪಿ ತಪ್ಪಿಯೂ ಕನ್ನಡ ಮಾಧ್ಯಮದ ಶಾಲೆಗಳಿಗೆ ಸೇರಿಸುವುದಿಲ್ಲ ಬದಲಾಗಿ ಇಂಗ್ಲಿಷ್ ಮಾಧ್ಯಮಗಳೇ ಆಗಬೇಕು ಅಲ್ಲದೆ ಮನೆಯಲ್ಲಿ ಕನ್ನಡಕ್ಕಿಂತ ಹೆಚ್ಚಾಗಿ ಇಂಗ್ಲಿಷ್‌ನಲ್ಲೆ ಮಕ್ಕಳನ್ನು ಮಾತನಾಡಿಸುವ ಮೂಲಕ ಕನ್ನಡ ಭಾಷೆಗೆ ಒಂದು ರೀತಿ ಮಲತಾಯಿ ದೋರಣೆ ಅನುಸಿರಸುತ್ತಾರೆ. ಆದರೆ ದುರಂತ ಎಂದರೆ ಹೊರಗಡೆ ಬಂದು ಕನ್ನಡ ಭಾಷೆಯ ಬಗ್ಗೆ ಭಾಷಣ ಬಿಗಿಯುತ್ತಾರೆ. ಕೇವಲ ರಾಜಕಾರಣಿಗಳು ಮಾತ್ರವಲ್ಲ ಕನ್ನಡ ಸಂಘಟನೆಗಳ ಮಕ್ಕಳು ಕೂಡ ಕನ್ನಡ ಮಾಧ್ಯಮ ಶಾಲೆಗಳಿಗೆ ಸೇರಿಸುವುದಿಲ್ಲ. ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತು ಉನ್ನತ ಶಿಕ್ಷಣ ಪಡೆಯಬೇಕು ಹೊರದೇಶಗಳಿಗೆ ಹೋಗಬೇಕು ಎನ್ನುವ ವಾಂಚಲ್ಯ ಅವರದ್ದು ಇಂತಹ ದುರಾಭಿಮಾನಿಗಳಿಂದ ಕನ್ನಡದ ಹೋರಾಟಗಳನ್ನು ಮಾಡುತ್ತಾರೆ ಮಕ್ಕಳು ಇಂಗ್ಲಿಷ್‌ನಲ್ಲಿ ಮನೆಯಲ್ಲಿ ಮಾತನಾಡುತ್ತಿದ್ದರೆ ಹೊರಗಡೆ ಯಾರೋ ಆಂಗ್ಲ ಭಾಷೆಯಲ್ಲಿ ಬೋರ್ಡ್ ಬರೆದ ಎನ್ನುವ ಕಾರಣಕ್ಕೆ ಅವರನ್ನು ಒಡೆದು ಬಡಿದು ಹಾಕಿ ಕನ್ನಡ ಪ್ರೇಮ ತೋರಿಸುತ್ತಾರೆ. ಒಂದು ರೀತಿ ಅವರನ್ನು ಬ್ಲಾಕ್ ಮೇಲ್ ಮಾಡುತ್ತಾರೆ. ಇದೆಂಥ ಕನ್ನಡ ಪ್ರೀತಿ ಹೇಳಿ? ಮೊದಲು ಮನೆಯಲ್ಲಿ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಸೇರಿಸಿ ಕನ್ನಡ ಭಾಷೆಯನ್ನು ಸ್ಪಷ್ಟವಾಗಿ ಮಾತನಾಡಿದರೆ ಅದು ಮುನ್ನಡಿಯಾಗುತ್ತದೆ ಆದರೆ ಆಗಿರುವುದು ಏನು?

ಇರಲಿ ಶಿಕ್ಷಣ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಾ ಹೋದರೆ. ಭಾರತೀಯ ಭಾಷೆಗಳ ಸಂದರ್ಭದಲ್ಲಿ ಗೊಂದಲದ ಮತ್ತೊಂದು ವಿಚಾರವಿದೆ. ಇಲ್ಲಿ ಮಾತೃಭಾಷೆ ಒಂದಿದೆ. ವ್ಯವಹಾರ ಮಾಧ್ಯಮವಾಗಿ ಮತ್ತೊಂದು ಭಾಷೆ ಇದೆ. ಅಧಿಕೃತ ಸ್ಥಾನದಲ್ಲಿ, ಅಂದರೆ ರಾಜಕೀಯವಾಗಿ, ಆಡಳಿತಾತ್ಮಕವಾಗಿ, ಶೈಕ್ಷಣಿಕವಾಗಿ ಬೇರೊಂದೇ ಭಾಷೆ ಇದೆ. ಕೆಲವೊಮ್ಮೆ ಈ ಮೂರು ಭಾಷೆಗಳನ್ನು ಸುಲಭವಾಗಿ ಪ್ರಥಮ, ದ್ವಿತೀಯ ಮತ್ತು ಕೆಲವೊಮ್ಮೆ ತೃತೀಯ ಎಂದು ವಿಭಾಗಿಸುವ ಕುರಿತು ಯೋಚಿಸುತ್ತೇವೆ. ಪ್ರಸ್ತುತ ವಿಭಾಗೀಕರಣವೇ ಅವೈಜ್ಞಾನಿಕವಾದುದು. ಭಾಷೆಯ ವಿಭಾಗೀಕರಣವು ತಾತ್ವಿಕವಾಗಿ ಕಲಿಯುವಿಕೆಯ ಪ್ರಕ್ರಿಯೆ ಮತ್ತು ಇತರ ವಿಚಾರಗಳಾದ ಹರೆಯ, ಕಲಿಯುವ ವೇಗ, ಕಲಿಯುವ ಪ್ರಕ್ರಿಯೆ ಮತ್ತು ಪ್ರಾವೀಣ್ಯವನ್ನು ಅವಲಂಬಿಸಿರುತ್ತದೆ. ಇದನ್ನು ಇನ್ನಷ್ಟು ಸ್ಪಷ್ಟಗೊಳಿಸಿ ಹೇಳುವುದಾದರೆ, ಈ ವಿಭಾಗೀಕರಣವು ಭಾಷೆಯ ಕುರಿತ ಭಾಷಾ ವೈಜ್ಞಾನಿಕ ವಿಧಾನವನ್ನು ಪರಿಗಣಿಸಿ ರೂಪುಗೊಂಡದ್ದಲ್ಲ. ಭಾಷಾ ಪ್ರಾವೀಣ್ಯ ಎಂಬುದು ಕಲಿಯುವವನ ಕೇಳ್ಮೆ, ಓದು, ಮಾತು ಮತ್ತು ಬರಹಗಳ ಮೇಲೆ ಅವಲಂಬಿತವಾಗಿರುತ್ತದೆ. ಕಲಿಕೆ ಎಂಬುದು 'ಬೋಧಕ ಕೇಂದ್ರಿತ'ವಾಗಿಯಷ್ಟೇ ಇದ್ದರೆ ಸಾಲದು 'ವಿದ್ಯಾರ್ಥಿ ಕೇಂದ್ರಿತ'ವಾಗಿಯೂ ಇರಬೇಕು. ಅಂತರರಾಷ್ಟ್ರೀಯವಾಗಿಯೂ ಇದಕ್ಕೆ ಅನುಗುಣವಾದ ವೈಧಾನಿಕತೆಯಲ್ಲಿಯೇ ಭಾಷೆಯನ್ನು ಕಲಿಸಲಾಗುತ್ತದೆ. ಕನ್ನಡಕ್ಕೆ ಕೂಡ ನವೀನ ರೀತಿಯ ಬೋಧನಾ ವಿಧಾನವನ್ನು ಶೋಧಿಸುವುದು ಇಂದಿನ ಅವಶ್ಯಕತೆಯಾಗಿದೆ. ಅಂದರೆ ಒಂದು ರೀತಿಯ ಭಾಷಾ ವೈಜ್ಞಾನಿಕ ವಿಧಾನವನ್ನು ರೂಪಿಸಬೇಕಾಗಿದೆ. ಅದಕ್ಕನುಗುಣವಾದ ಪಠ್ಯಗಳನ್ನು ಸಿದ್ಧಗೊಳಿಸಬೇಕಾಗಿದೆ. ಸಮಾಜದ ಬಹು ಆಸಕ್ತಿಗಳಿಗೆ, ವೈವಿಧ್ಯಮಯ ಅಗತ್ಯಗಳಿಗೆ ಸ್ಪಂದಿಸುವ ಭಾಷೆಯ ಆಕರಗಳನ್ನು ಒದಗಿಸಬೇಕಾಗಿದೆ. ಜಪಾನಿ, ಚೀನಿ, ಕೊರಿಯಾಗಳಂಥ ಭಾಷೆಗಳು ಭಾಷಾಪ್ರಾವೀಣ್ಯವನ್ನು ಅಳೆಯುವ ಅಂತರರಾಷ್ಟ್ರೀಯ ಮಾನದಂಡಕ್ಕೆ ತಮ್ಮನ್ನು ತಾವು ಹೊಂದಿಸಿಕೊಂಡಿರುವುದನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ.

ಈ ಕುರಿತು ನನ್ನ ಸ್ನೇಹಿತ ಶಿಕ್ಷಕರೊಬ್ಬರಲ್ಲಿ ಮಾತನಾಡುತ್ತಿರುವಾಗ ಕನ್ನಡವಲ್ಲದೆ ಬೇರೆ ಭಾಷೆಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ನೀಡುವ ಒಂದು ಕಾರಣವೆಂದರೆ ಕನ್ನಡ ಕಷ್ಟ! ಮನೆಯಲ್ಲಿ ಕನ್ನಡ ಮಾತನಾಡುವವರೇ ತಮ್ಮ ಮಕ್ಕಳಿಗೆ ಕನ್ನಡದಲ್ಲಿ ಕಲಿಸಲು ಅಥವಾ ಕನ್ನಡದಲ್ಲಿ ಕಲಿಯಲು ಹಿಂದೇಟು ಹಾಕುತ್ತಿರುವುದಕ್ಕೆ ಏನೆನ್ನಬೇಕು?! 'ಇದಕ್ಕೆ ಅವರು ನೀಡುವ ಒಂದು ಕಾರಣ– 'ಕನ್ನಡದಲ್ಲಿ ಒಳ್ಳೆಯ ಅಂಕಗಳು ತೆಗೆಯಲು ಆಗುವುದಿಲ್ಲ' ಎಂಬ ಕಾರಣ ಕೊಡುತ್ತಾರೆ ಎನ್ನುವುದು.

ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಕನ್ನಡ ಭಾಷೆಯನ್ನು ಕಲಿಸುವ ವಿಧಾನವು ಪಠ್ಯಕೇಂದ್ರಿತವಾಗಿದೆ. ಸಾಹಿತ್ಯ ಕಲಿಕೆಯನ್ನೇ ಭಾಷೆಯ ಕಲಿಕೆ ಎಂಬುದಾಗಿ ನಾವು ಭಾವಿಸಿದ್ದೇವೆ. ಭಾಷಾಪ್ರಾವೀಣ್ಯವನ್ನು ಅಳೆಯುವುದಕ್ಕೆ ನಾವು ಬರಹದ ಮಾರ್ಗವನ್ನು ಅನುಸರಿಸುತ್ತೇವೆ. ಭಾಷೆಯ ಪರಿಣಾಮಕಾರಿಯಾದ ಮತ್ತು ಪ್ರಾಯೋಗಿಕವಾದ ಬಳಕೆಯ ಕುರಿತು ನಾವು ಗಮನಹರಿಸುತ್ತಿಲ್ಲ. ಸಾಮಾಜಿಕ ಸಂದರ್ಭದಲ್ಲಿ ಕನ್ನಡದ ಬಳಕೆಯ ಕುರಿತ ಬಹುನೆಲೆಯ ಸಾಧ್ಯತೆಗಳ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿಲ್ಲ. ಭಾಷೆಯ ಕಲಿಕೆ ಎಂದರೆ ಕೇವಲ ಸಾಹಿತ್ಯದ ಓದುವಿಕೆ ಮಾತ್ರವಲ್ಲ, ಕೇಳುವ, ಓದುವ, ಮಾತನಾಡುವ ಮತ್ತು ಬರವಣಿಗೆಯ ಪ್ರಾವೀಣ್ಯವನ್ನು ಹೊಂದುವಂತೆ ಮಾಡುವುದು ಕೂಡ ಭಾಷೆಯ ಕಲಿಕೆಯೇ.ಹಾಗಾಗಿ, ಕನ್ನಡವನ್ನು ಯಾರಿಗಾದರೂ ಕಲಿಸುತ್ತಿದ್ದೀರಿ ಎಂದರೆ ನೀವು ಎಷ್ಟು ಕಲಿಸಿದ್ದೀರಿ ಮತ್ತು ಏನನ್ನು ಕಲಿಸುತ್ತಿದ್ದೀರಿ ಎಂಬಷ್ಟೇ, ಕಲಿಯುವ ವಿದ್ಯಾರ್ಥಿಯು ಎಷ್ಟನ್ನು ಮತ್ತು ಏನನ್ನು ಕಲಿತಿದ್ದಾನೆ ಎಂಬುದು ಕೂಡ ಮುಖ್ಯ. ಒಬ್ಬ ವಿದ್ಯಾರ್ಥಿಯು ತಾನು ಕಲಿತಿದ್ದೇನೆ ಎಂಬ ಪುಳಕವನ್ನುಂಟು ಮಾಡದಂಥ ಪಾಠಗಳು ನಿರರ್ಥಕವೆನಿಸುತ್ತವೆ. ಕರ್ನಾಟಕದಲ್ಲಿ ಕನ್ನಡ ಕಷ್ಟವಾಗುವಂಥ ಸ್ಥಿತಿಯ ಹಿಂದೆ ಇಂಥ ಕಾರಣವಿರಬಹುದೇ? ಎನ್ನುವ ಪ್ರಶ್ನೆಗಳು ಉದ್ಭವವಾಗಿವೇ ಹೀಗಾಗಿಯೆ ಇಂದು ಕರ್ನಾಟಕದಲ್ಲಿ ಕನ್ನಡ ಭಾಷೆ ಕಲಿಕೆಗೆ ಪೂರಕವಾದ ವೈಜ್ಞಾನಿಕ ವಿಧಾನಗಳಿಲ್ಲದೆ ಹೋಗಿರುವುದು ಕಾರಣವಾಗಿದೆ ಸರ್ಕಾರ ಈ ನಿಟ್ಟಿನಲ್ಲಿ ಗಮನ ಹರಿಸದೇ ಹೋದರೆ ಮುಂದೊಂದು ದಿನ ದೊಡ್ಡ ಅನಾಹುತವೇ ಅಗುವದರಲ್ಲಿ ಎರಡು ಮಾತಿಲ್ಲ.

# ವಿಶ್ವವೇ ಗಮನ ಸೆಳೆದ ಪ್ರಜ್ಞಾನಂದ್

ಇಂಥವರು



ನೋಡಿ ಈ ಬಾಲಕ ವಿಶ್ವವನ್ನೇ ಬೆರಗಾಗುವಂತೆ ಮಾಡಿದ್ದಾನೆ.ಚೆಸ್ ಆಟ ಅದೊಂದು ಪ್ರಜ್ಞಾವಂತಿಕೆಯ ಆಟ ಈ ಆಟದಲ್ಲಿ ಹಲವಾರು ದಾಖಲೆಗಳನ್ನು ಮುರಿದಿದ್ದಾನೆ. ಇನ್ನು ಮೊನ್ನೆ ನಡೆದ ಚೆಸ್ ವಿಶ್ವ ಚಾಂಪಿಯನ್ ಶಿಪ್‌ನಲ್ಲಿ ಭಾರತದ ಅಟಲ್ ಗ್ರಾಂಡ್ ಮಾಸ್ಟರ್ ಪ್ರಜ್ಞಾನಂದ್ ವಿಶ್ವ ಚಾಂಪಿಯನ್ ಮ್ಯಾನಸ್ ಕಾರ್ಲ್‌ಸನ್ ಅವರನ್ನೇ ಸೋಲಿಸಿ ಇಡೀ ವಿಶ್ವವೇ ಈತನತ್ತ ತಿರುಗಿನೋಡವಂತ ಸಾಧನೆ ಮಾಡಿದ್ದಾನೆ.

16 ರ ಹರೆಯದ ಭಾರತೀಯ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅಚೆನ್ನೈನಲ್ಲಿ ನಡೆಯುತ್ತಿರುವ ಆನ್ ಲೈನ್ ರ್ಯಾಪಿಡ್ ಚೆಸ್ ಸ್ಪರ್ಧೆಯಾಗಿರುವ ಏರ್ಥಿಂಗ್ಸ್ ಮಾಸ್ಟರ್ಸ್ 8ನೇ ಸುತ್ತಿನಲ್ಲಿ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸೆನ್ ಅವರನ್ನು ಸೋಲಿಸಿ ಇದೀಗ ಜಾಗತಿಕ ಚೆಸ್ ಕ್ರೀಡಾವಲಯದಲ್ಲಿ ಪ್ರಗ್ನಾನಂದ್ ಸುದ್ದಿಗೆ ಗ್ರಾಸವಾಗಿದ್ದಾರೆ.

ಮೂಲತಃ ತಮಿಳುನಾಡಿನ ಚೆನ್ನೈ ಮೂಲದ ಪ್ರಗ್ನಾನಂದ ಆಗಸ್ಟ್ 10 2005ರಲ್ಲಿ ಜನಿಸಿದರು. 2016 ರಲ್ಲಿ 10 ವರ್ಷಗಳು, 10 ತಿಂಗಳುಗಳು ಮತ್ತು 19 ದಿನಗಳ ವಯಸ್ಸಿನಲ್ಲಿ ಕಿರಿಯ ಅಂತರರಾಷ್ಟ್ರೀಯ ಮಾಸ್ಟರ್ ಆಗುವ ಮೂಲಕ ವಿಶ್ವ ಮಟ್ಟದಲ್ಲಿ ದಾಖಲೆಯನ್ನು ನಿರ್ಮಿಸಿದ ಕೀರ್ತಿ ಇವರದ್ದು. ನಂತರದಲ್ಲಿ 2018ರಲ್ಲಿ ಗ್ರ್ಯಾಂಡ್ಮಾಸ್ಟರ್ ಆಗಿ ಹೊರ ಹೊಮ್ಮಿದ್ದರು. ಇವರ ಫೈಡ್ ರೇಟಿಂಗ್ 2612 ಇದ್ದು, ಜುಲೈ 2019 ರಲ್ಲಿ ಡೆನ್ಮಾರ್ಕ್‌ನಲ್ಲಿ ನಡೆದ ಎಕ್ಸ್ಟ್ರಾಕಾನ್ ಚೆಸ್ ಓಪನ್‌ನಲ್ಲೂ ಪರಾಕ್ರಮ ಮೆರೆದಿದ್ದರು. ಇಲ್ಲಿ 8ಳಿ/10 ಅಂಕಗಳನ್ನು (+7–0=3) ಗಳಿಸಿದರು. ಅಲ್ಲದೇ 18 ವರ್ಷದೊಳಗಿನವರ ವಿಭಾಗದಲ್ಲಿ ವಿಶ್ವ ಯುವ ಚಾಂಪಿಯನ್ ಶಿಪ್ ಗಳನ್ನು 9/11 ಅಂಕಗಳೊಂದಿಗೆ ಜಯಿಸಿದ ಸಾಧನೆ ಮಾಡಿದ್ದಾರೆ. ಪ್ರಗ್ನಾನಂದ ಅವರ ಹಿರಿಯ ಸಹೋದರಿ ವೈಶಾಲಿ ಕೂಡ ಅತ್ಯಂತ ಶ್ರೇಷ್ಠ ಆಟಗಾರ್ತಿಯಾಗಿದ್ದು ಈಗಾಗಲೇ 12 ವರ್ಷದೊಳಗಿನ ಮತ್ತು 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಶಿಪ್ ಪದಕಗಳನ್ನು ಗೆದ್ದಿದ್ದಾನೆ. ಪ್ರಸ್ತುತ 21 ವರ್ಷ ವಯಸ್ಸಿನ ಹಿರಿಯರಲ್ಲಿ ಭಾರತದ ನಂ. 4 ಆಟಗಾರ್ತಿ ಆಗಿದ್ದಾರೆ. ಕಳೆದ ವರ್ಷ 2021ರ ಚೆಸ್ ವಿಶ್ವಕಪ್‌ನಲ್ಲಿ ಪ್ರಗ್ನಾನಂದ 90ನೇ ಶ್ರೇಯಾಂಕವಾಗಿ ಪ್ರವೇಶಿಸಿದ್ದ. 2ನೇ ಸುತ್ತಿನಲ್ಲಿ ಉಬ ಗೇಬ್ರಿಯಲ್ ಸರ್ಗಿಸ್ಸಿಯನ್ ಅವರನ್ನು 2–0 ಅಂತರದಲ್ಲಿ ಸೋಲಿಸಿದ ಸಾಧನೆ ಕೂಡ ಮಾಡಿದ್ದರು. 3ನೇ ಸುತ್ತಿನಲ್ಲಿ ರ್ಯಾಪಿಡ್ ಟೈಬ್ರೇಕ್‌ಗಳಲ್ಲಿ ಉಬ ಮೈಕಾಲ್ ಕ್ರಾಸೆಂಕೋವ್ ಅವರನ್ನು ಸೋಲಿಸಿದ ನಂತರ 4ನೇ ಸುತ್ತಿಗೆ ಮುನ್ನಡೆದರು. ಆದರೆ ಮ್ಯಾಕ್ಸಿಮ್ ವಾಚಿಯರ್–ಲಾಗ್ರೇವ್ ಅವರಿಂದ ನಾಲ್ಕನೇ ಸುತ್ತಿನಲ್ಲಿ ಸೋಲು ಅನುಭವಿಸಿದರು. ಟಾಟಾ ಸ್ಟೀಲ್ ಚೆಸ್ ಟೂರ್ನಮೆಂಟ್ 2022 ರ ಮಾಸ್ಟರ್ಸ್ ವಿಭಾಗದಲ್ಲಿ ಆಟವಾಡಿದ್ದ ಪ್ರಗ್ನಾನಂದ, ಆಂಡ್ರೆ ಎಸಿಪೆಂಕೊ, ವಿದಿತ್ ಗುಜರಾತಿ ಮತ್ತು ನಿಲ್ಸ್ ಗ್ರಾಂಡೆಲಿಯಸ್ ವಿರುದ್ಧ ಜಯಿಸುವ ಮೂಲಕ ಅಂತಿಮವಾಗಿ 12ನೇ ಸ್ಥಾನ ಪಡೆದುಕೊಂಡಿದ್ದಾರೆ. ಈ ಮೂಲಕ ವಿಶ್ವವೇ ಬೆರಗುಗೊಳಿಸುವ ಸಾಧನೆ ಮಾಡುವ ಮೂಲಕ ಭಾರತದ ಚೆಸ್ ಆಟದ ದಾಖಲೆ ಮುರಿದು ಎಲ್ಲರ ಗಮನ ಸೆಳೆಯುತ್ತಿದ್ದಾನೆ.



ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.

ಅಗ್ರಲೇಖ

**ಪತ್ರಿಕೆಗೆ ಚಂದಾದಾರರಾಗಿ ಮತ್ತಷ್ಟು ಬೆಳೆಯಲು ತಾವೂ ಬಾಗಿಯಾಗಿ ಚಂದಾದಾರರ ವಿವರ**

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

# ಸಾಮಾನ್ಯ ಕಾಳಜಿ ಎನ್ನುವುದು ಇದೆ ಅಲ್ಲವೇ?

ಮೊನ್ನೆ ಫೆಬ್ರುವರಿ 19 ನೇ ತಾರೀಖು ದಲಿತ ಸಂಘಟನೆಗಳು ಸಂವಿಧಾನ ಶಿಲ್ಪಿ ಡಾ ಅಂಬೇಡ್ಕರ್ ಅವರ

ಭಾವಚಿತ್ರ ತೆರವುಗೊಳಿಸುವಂತೆ ಹೇಳಿ ಅಪಮಾನಿಸಿದ್ದ ರಾಯಚೂರು ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್‌ನ ನ್ಯಾಯಮೂರ್ತಿ ಮಲ್ಲಿಕಾರ್ಜುನ ಗೌಡ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿ ಬೆಂಗಳೂರಿನಲ್ಲಿ ಬೃಹತ್ ಜಾಥಾ ನಡೆಯಿತು ಈ ಜಾಥಾದಲ್ಲಿ ರಾಜ್ಯದ ವಿವಿಧೆಡೆಯಿಂದ ಸಾವಿರಾರು ಸಂಖ್ಯೆಯಲ್ಲಿ ಬಂದ್ದದ್ದು ನೋಡಿದರೆ ಭೀಮ ಬಲವೇ ಅಲ್ಲಿತ್ತು.

ಅಂದು ಮುಖ್ಯರಸ್ತೆಗಳೆಲ್ಲೆಲ್ಲ ಸಾವಿರಾರು ಸಂಖ್ಯೆಯಲ್ಲಿ ಇದ್ದ ಭೀಮಾಭಿಮಾನಿಗಳ ಆ ನೀಲಿ ಬಾವುಟ ಎಲ್ಲಡೆ ರಾರಾಜಿಸುತ್ತಿತ್ತು. ಮೆರವಣಿಗೆಯುದ್ದಕ್ಕೂ ಜೈಭೀಮ್ ಘೋಷಣೆಗಳೊಂದಿಗೆ ನೀಲಿ ಭಾವುಟ ಹಾರಾಡಿದವು, ನೀಲಿ ಶಾಲುಗಳು, ನೀಲಿ ಟೋಪಿಗಳು ಹಾಕಿದ್ದ ಪ್ರತಿಭಟನಾಕಾರರು ಜಾಥಾ ಹೋಗುವ ರಸ್ತೆ ಸಂಪೂರ್ಣ ನೀಲಿಮಯ ಮಾಡಿದ್ದರು. ವಾದ್ಯ ನುಡಿಸುತ್ತಾ ಪ್ರತಿಭಟನಾಕಾರರನ್ನು ಹುರಿದುಂಬಿಸುತ್ತಾ ವಾದ್ಯ ಕಲಾವಿದರು ಗಮನ ಸೆಳೆದಿದ್ದಾರೆ.

ದೊಡ್ಡ ಸಂಖ್ಯೆಯಲ್ಲಿ ಬೃಹದಾಕಾರವಾಗಿ ಸೇರಿದ್ದರು ಆದರೆ ದುರದೃಷ್ಟ ಎಂದರೆ ಯಾವ ಎಲೆಕ್ಟ್ರಾನಿಕ್ ಮಾಧ್ಯಮಗಳು ಈ ಸುದ್ದಿಯನ್ನು ಪ್ರಸಾರ ಮಾಡಲೇ ಇಲ್ಲ. ಎಲ್ಲಾ ಎಲೆಕ್ಟ್ರಾನಿಕ್ ಮಾಧ್ಯಮಗಳು ಹಿಜಾಬ್ ಹಿಂದೆ ಬಿದ್ದಿದ್ದ ಕಾರಣ ಅವರಿಗೆ ಸಾಮಾಜಿಕ ಕಳಕಳಿಗಿಂತಲೂ ಧಾರ್ಮಿಕ ಭಾವನೆಗಳನ್ನು ಕೆರಳಿಸುವುದೇ ಪ್ರಮುಖವಾಗಿತ್ತು ಹೀಗಾಗಿ ಎಲ್ಲಿಯೂ ಅಂತ ಸುದ್ದಿಯಾಗಲಿಲ್ಲ. ಇನ್ನೂ ಕೆಲವು ಪತ್ರಿಕೆಗಳು ಬೇಕೋ ಬೇಡೋ ಎನ್ನುವ ರೀತಿಯಲ್ಲಿ ಒಳ ಪುಟಗಳಲ್ಲಿ ಪ್ರಕಟಿಸಿ ಕೈ ತೊಳೆದುಕೊಂಡಿದ್ದವು.

ಇದು ಸಾಮಾನ್ಯ ಸುದ್ದಿಯಂತೂ ಅಲ್ಲ ಯಾವಾಗಲೂ ಸಾಮಾಜಿಕ ಕಳಕಳಿಯಲ್ಲಿ ನಮ್ಮ ಚಾನಲ್ ಮುನ್ನಡೆಯುತ್ತದೆ ಎಂದು ಅರಚಾಡುವ ಚಾನೆಲ್ ಮುಖ್ಯಸ್ಥರುಗಳು ಅಂದು ಎಲ್ಲಿಗೆ ಹೋಗಿದ್ದರು ಇಂಥ ಸುದ್ದಿಗಳನ್ನು ಕೇವಲವಾಗಿ ಕಾಣುವ ಮಾಧ್ಯಮಗಳು ಇನ್ನೆಲ್ಲಿಯ ಕಳಕಳಿ ನಿಮಗಿದೆ ಹೇಳಿ?

ಇರಲಿ ಆದರೆ ಇಂಥ ದೊಡ್ಡ ಜಾತವನ್ನು ಕಂಡ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮನಸ್ಸು ಕರಗಿತ್ತು ಪ್ರತಿಭಟನಾ ಕಾರರ ಒತ್ತಡಕ್ಕೆ ಪ್ರತಿಭಟನಾ





ಸ್ಥಳಕ್ಕೆ ಭೇಟಿ ನೀಡಿದ್ದರು.

ವಿಶೇಷ ಎಂದರೆ ಇತ್ತೀಚಿನ ದಿನಗಳಲ್ಲಿ ಪ್ರತಿಭಟನಾ ಕಾರರ ಸ್ಥಳಕ್ಕೆ ಯಾವ ಮುಖ್ಯಮಂತ್ರಿಗಳೂ ಭೇಟಿ ನೀಡಿ ಮನವಿ ಪಡೆದ ಉದಾಹರಣೆಗಳು ಇಲ್ಲ ಬೊಮ್ಮಾಯಿ ಅವರು ಭೇಟಿ ನೀಡುವ ಮೂಲಕ ಪ್ರತಿಭಟನಾ ಕಾರರಿಂದ ಮನವಿ ಸಲ್ಲಿಸಿದರು.

ನಾನು ಕಾಮನ್ ಮ್ಯಾನ್ ಎಂದು ಹೇಳಿದ್ದರು ಅದರಂತೆ ಅವರು ನಡೆದಕೊಂಡಿದ್ದು ಅದಕ್ಕೆ ಸಾರ್ಥಕದಂತಿತ್ತು. ಈ ವೇಳೆ

ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು. ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರ ನಡೆಯನ್ನು ಖಂಡಿಸಿದರು

"ಅಂಬೇಡ್ಕರ್ ಫೋಟೋ ತೆರವು ಮಾಡಿಸಿ ಅವಮಾನ ಮಾಡಿದ ಘಟನೆಯು ನಮಗೂ ಕಣ್ಣು ತೆರೆಸಿದೆ. ಘಟನೆ ಸಂಬಂಧ ದಲಿತ ಸಮುದಾಯಗಳ ಮುಖಂಡರು ನನಗೆ ವಿವರಿಸಿದ್ದಾರೆ. ಶೀಘ್ರದಲ್ಲಿಯೇ ಸಂಬಂಧಪಟ್ಟವರಿಗೆ ಪತ್ರ ಬರೆಯಲಾಗುವುದು" ಎಂದು ಸಿಎಂ ಭರವಸೆ ನೀಡಿದರು.

ಜನರ ಬಳಿ ಆಡಳಿತ ತಲುಪಬೇಕೆನ್ನುವುದು ಅವರ ಧೃಢ ಸಂಕಲ್ಪ. ಇದನ್ನು ಅವರು ತಮ್ಮೆಲ್ಲ ಕಾರ್ಯಕ್ರಮ,ಯೋಜನೆ ಹಾಗೂ ಆಡಳಿತ ವೈಖರಿಯಲ್ಲಿ ಜಾರಿಗೆ ತರುತ್ತಿದ್ದಾರೆ. ಜನಸಾಮಾನ್ಯರ ಅಹವಾಲು, ಸಮಸ್ಯೆಗಳಿಗೆ ಸ್ಪಂದಿಸುವುದು ಸರ್ಕಾರದ ಧ್ಯೇಯ ಎನ್ನುವುದನ್ನು ನಿರೂಪಿಸುವ ಘಟನೆಯೊಂದು ಈ ಮೂಲಕ ಸಾಕ್ಷಿಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಮುಖ್ಯಮಂತ್ರಿಯೊಬ್ಬರು ಫ್ರೀಡಮ್ ಪಾರ್ಕ್ ಗೆ ತೆರಳಿ ಮನವಿ ಸ್ವೀಕರಿಸಿದ್ದ ಉದಾಹರಣೆ ಇಲ್ಲ. ಆದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಾವು ಜನಸಾಮಾನ್ಯರಲ್ಲಿ ಸಾಮಾನ್ಯರಂತೆ ನಡೆದುಕೊಂಡಿದ್ದನ್ನು ದಲಿತ ಸಂಘಟನೆಗಳು ಕೂಡ ಮೆಚ್ಚಿಕೊಂಡಿದ್ದು ವಿಶೇಷವಾಗಿತ್ತು. ಯಾಕೆಂದರೆ ಒಬ್ಬ ಸಚಿವರು ಇಂತ ಪ್ರತಿಭಟನಾ ಸ್ಥಳಕ್ಕೆಬರಬೇಕಾದರೆ ಹಲವಾರು ರೀತಿಯಲ್ಲಿ ಯೋಚನೆ ಮಾಡುತ್ತಾರೆ ಇಂತದ್ದರಲ್ಲಿ ಒಬ್ಬ ಸಿಎಂ ಬಂದಿದ್ದು ಅವರಿಗೆ ಒಂದಿಷ್ಟು ನ್ಯಾಯ ದೊರಕಿದಂತಾಗಿತ್ತು.

ದಲಿತ ಸಂಘಟನೆಗಳ ಈ ಹೋರಾಟಕ್ಕೆ ಮಾಧ್ಯಮಗಳಂತೂ ನ್ಯಾಯ ನೀಡಲಿಲ್ಲ ಆದರೆ ಒಬ್ಬ ಸಿಎಂ ಸ್ಥಳಕ್ಕೆ ಆಗಮಿಸಿ ಕೊಟ್ಟ ಭರವಸೆ ಇತ್ತಲ್ಲ ಅದು ಈ ಸಂಘಟನೆಗಳ ಪಾಲಿಗೆ ಒಂದಿಷ್ಟು ಯಶಸ್ಸು ದೊರಕಿದಂತಾಗಿತ್ತು. ಸಾಗರೋಪಾದಿಯಲ್ಲಿ ಬಂದ ದಲಿತ ಸಂಘಟನೆಗ ಕಾರ್ಯಕರ್ತರ ಒತ್ತಾಯಗಳನ್ನು ವಿನಯಪೂರ್ವಕವಾಗಿ ಸ್ವೀಕರಿಸುವುದು ಒಬ್ಬ ಮುಖ್ಯಮಂತ್ರಿಯಾದವರಿಗೆ ಅಷ್ಟೆ ಮುಖ್ಯವಾಗುತ್ತದೆ ಅದನ್ನು ಬೊಮ್ಮಾಯಿ ಮಾಡುವ ಮೂಲಕ ದಲಿತ ಪರ ಮತ್ತು ಒಬ್ಬ ಸಾಮಾನ್ಯ ಮನುಷ್ಯ ಎನ್ನುವುದನ್ನು ಸಾಭೀತು ಮಾಡಿದರು.

ತಮ್ಮ ಅವಧಿಯಲ್ಲಿ ಹಲವಾರು ಜನಸಾಮಾನ್ಯ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ, ಆಡಳಿತದಲ್ಲಿ ಸುಧಾರಣೆಗಳನ್ನು ತಂದಿರುವದು ವಿಶೇಷವಾಗಿದೆ ಆದರೆ ಅವರ ಮುಂದಿರುವುದು ಈಗ ಬಜೆಟ್ . ಅವರು ಜನ ಸಾಮಾನ್ಯ ಎನ್ನುವುದನ್ನು ಸಾಭೀತು ಪಡಿಸಲು ಬಜೆಟ್ ಕೂಡ ಸಾಕ್ಷಿಯಾಬೇಕಿದೆ ಆ ನಿಟ್ಟಿನಲ್ಲಿ ಯಾವೆಲ್ಲಾ ಯೋಜನೆಗಳನ್ನು ಜಾರಿಗೊಳಿಸುತ್ತಾರೆ ಎನ್ನುವುದರ ಮೇಲೆ ಮುಖ್ಯಮಂತ್ರಿಗಳ ಜನಪರ ಕಾಳಜಿ ವ್ಯಕ್ತವಾಗಲಿದೆ.

# ಮಾಧ್ಯಮಗಳಿಗೆ ಸಾಮಾಜಿಕ ಕಳಕಳಿ ಎಂದರೆ ಇದೇನಾ?

**ಹಿಟ್ & ರನ್**

ಯಾಕೆ ಮಾಧ್ಯಮಗಳು ದಿಕ್ಕು ತಪ್ಪುತ್ತಿವೆ ಎನ್ನುವುದೇ ಗೊತ್ತಾಗುತ್ತಿಲ್ಲ..ಕೇವಲ ಟಿಆರ್‌ಪಿ ರೇಟಿಗಾಗಿ ಎನ್ನುವುದು ಈಗ ಬದಲಾಗಿದೆ ರೇಟಿಂಗ್‌ನಲ್ಲಿ ಈಗಾಗಲಾ ಮಹಾಕುಸಿತ ಕಂಡಿದೆ ಹೀಗಿದ್ದರೂ ಜನರನ್ನು ಕೆರಳಿಸುವ ಪವೃತ್ತಿ ಈ ಮಾಧ್ಯಮಗಳಿಗೇಕೆ ಬೇಕು ಗೊತ್ತಾಗುತ್ತಿಲ್ಲ. ಎಲ್ಲಾ ಮಾಧ್ಯಮಗಳು ನಾವು ಸಾಮಾಜಿಕ ಕಳಕಳಿ ನಮ್ಮ ಟಿವಿ ಎನ್ನುವ ಬೋರ್ಡ್ ಹಾಕಿಕೊಂಡಿವೆ ಜೊತೆಗೆ ಉತ್ತಮ ಸಮಾಜಕ್ಕಾಗಿ, ನೇರ ದಿಟ್ಟ ನಿರಂತರ. ಸಮಾಜದ ಒಳತಿಗಾಗಿ ಇದು ನಿಮ್ಮ ಚಾನಲ್ ಹೀಗೆ ಒದೊಂದು ಟಿವಿ ಚಾನಲ್‌ಗಳು ಸಮಾಜದ ಉದ್ದಾರಕ್ಕೆ ಇದ್ದಾವೆ ಎನ್ನುವ ರೀತಿಯಲ್ಲಿ ಘೋಷ ವಾಕ್ಯಗಳನ್ನು ಹಾಕಿಕೊಂಡಿವೆ ಆದರೆ ಮಾಡುವ ಕೆಲಸ ಮಾತ್ರ ಜನರನ್ನು ಉದ್ರಿಕ್ತಗೊಳಿಸುವ ಕೆಲಸ.

ಇದಕ್ಕೆ ಉದಾಹರಣೆ ಎಂದರೆ ಸದ್ಯ ನಡೆಯುತ್ತಿರುವ ಹಿಜಾಬ್ ವಿವಾದವೇ ಸಾಕ್ಷಿಯಾಗಿದೆ,ಅಪ್ರಾಪ್ತ ಶಾಲಾ ಬಾಲಕಿಯೊಬ್ಬಳು ಶಾಲೆಗೆ ಹೋಗುತ್ತಿರುವ ಸಂದರ್ಭದಲ್ಲಿ ಆಕೆಯನ್ನು ಹಿಂಬಾಲಿಸಿ ಅಟ್ಟಿಸಿಕೊಂಡು ಹೋಗಿ ವಿಡಿಯೋ ಚಿತ್ರೀಕರಣ ಮಾಡುವ ದೃಶ್ಯವೊಂದು ಎಲ್ಲೆಡೆ ಹರಿದಾಡುತ್ತಿದೆ. ಮತ್ತೊಂದು ದೃಶ್ಯದಲ್ಲಿ ಶಿವಮೊಗ್ಗದಲ್ಲಿ ಹತ್ತನೆ ತರಗತಿ ವಿದ್ಯಾರ್ಥಿನಿಯೊಬ್ಬರು ತಮಗೆ ಮಾತನಾಡಲು ಇಷ್ಟವಿಲ್ಲ ಎಂದರೂ ಕನ್ನಡ ಸುದ್ದಿಮನೆಗಳು ಆಕೆಯನ್ನು ಪೀಡಿಸುತ್ತಿರುವುದು ಕಂಡುಬರುತ್ತಿದೆ. ಮಾಧ್ಯಮವನ್ನು ಪ್ರತಿನಿಧಿಸುವ ಆ ಛಾಯಾಗ್ರಾಹಕನಿಗೆ ಆಸಕ್ತಿ ಇದ್ದುದು ಆ ಅಮಾಯಕ, ಅಸಹಾಯಕ ಬಾಲಕಿಯ ಕುಂದುಕೊರತೆಗಳ ಬಗ್ಗೆ ಅಲ್ಲ ಅಥವಾ ಆಕೆಯನ್ನು ಕಾಡಬಹುದಾದ ನಿತ್ಯ ಜೀವನದ ಜಂಜಾಟಗಳೂ ಅಲ್ಲ. ಆ ಬಾಲಕಿ ಬಡಕುಟುಂಬದಿಂದ ಬಂದಿದೆಯೋ ಅಥವಾ ಶ್ರೀಮಂತಿಕೆಯಲ್ಲಿ ಮೆರೆಯುತ್ತಿದೆಯೋ ಎನ್ನುವುದು ಮಾಧ್ಯಮ ಪ್ರತಿನಿಧಿಗೆ ಪ್ರಶ್ನೆಯಾಗಲೇ ಇಲ್ಲ. ಅಥವಾ ಆ ಹುಡುಗಿ ಏನು ಸಾಧನೆ ಮಾಡಿರಬಹುದು ಎಂಬ ಕುತೂಹಲವೂ ಆತನನ್ನು ಕಾಡಿರಲಿಕ್ಕಿಲ್ಲ. ಅಟ್ಟಿಸಿಕೊಂಡು ಹೋಗಿ ವಿಡಿಯೋ ಚಿತ್ರೀಕರಣ ಮಾಡಲು ಆ ಮಾಧ್ಯಮ ಛಾಯಾಗ್ರಾಹಕನನ್ನು ಪ್ರಚೋದಿಸಿದ್ದು, ಆ ಎಳೆಯ ಹುಡುಗಿ ಧರಿಸಿದ್ದ ಹಿಜಾಬ್. ಏಕೆಂದರೆ ಹಿಜಾಬ್ ಈಗ ಕೇವಲ ಮತೀಯ ಅಸ್ಮಿತೆಗಳನ್ನು ಗಟ್ಟಿಗೊಳಿಸುವ ಸಾಧನವಾಗಿ ಉಳಿದಿಲ್ಲ. ಅದು ಮಾಧ್ಯಮಗಳ ಟಿಆರ್ಪಿ ಏರಿಕೆಗೂ, ರಾಜಕೀಯ ಪಕ್ಷಗಳ ಮತಬ್ಯಾಂಕುಗಳ ಧೃವೀಕರಣಕ್ಕೂ, ರಾಜಕೀಯ ನಾಯಕರ ಜನಪ್ರಿಯತೆ ಯ ಹೆಚ್ಚಳಕ್ಕೂ, ಧಾರ್ಮಿಕ ಸಂಸ್ಥೆಗಳ ಕ್ರೋಢೀಕರಣಕ್ಕೂ ಮೂಲ ಬಂಡವಾಳವಾಗಿ




ಪರಿಣಮಿಸಿದೆ.

ಪ್ರಾಪಂಚಿಕ ಬದುಕಿನ ಪರಿವೆಯೇ ಇಲ್ಲದ ಒಬ್ಬ ಪುಟ್ಟ ಬಾಲಕಿಯನ್ನು ಅಟ್ಟಿಸಿಕೊಂಡು ಹೋದ ಮಾಧ್ಯಮ ಮಿತ್ರನಿಗೆ ತನ್ನ ಕ್ಯಾಮರಾದ ಮಸೂರಗಳ ಹಿಂದಿರುವ ಒಂದು ಮೌಲ್ಯಯುತ ನೆಲೆಯೂ ಅರ್ಥವಾಗಬೇಕಿತ್ತಲ್ಲವೇ ? ಶಾಲಾ ಶಿಕ್ಷಣದಿಂದಲೂ ವಂಚಿತರಾಗಿ ತಮ್ಮ ಕುಟುಂಬಗಳು ಉಸಿರಾಡುವುದಕ್ಕೆ ನೆರವಾಗುವ ಬಾಲ ಕಾರ್ಮಿಕರು, ಬೀಡಿ ಉದ್ದಿಮೆಗಳಲ್ಲಿ, ಪಟಾಕಿ ಕಾರ್ಖಾನೆಗಳಲ್ಲಿ, ಹೋಟೆಲುಗಳಲ್ಲಿ, ಇಟ್ಟಿಗೆ ಗೂಡುಗಳಲ್ಲಿ, ಕಲ್ಲು ಗಣಿಗಳಲ್ಲಿ ತಮ್ಮ ಬದುಕಿನ ಅಮೂಲ್ಯ ಕ್ಷಣಗಳನ್ನು ಕಳೆಯುತ್ತಲೇ ಜೀವನ ಸಾಗಿಸುವ ಲಕ್ಷಾಂತರ ಹಸುಳೆಗಳು, ಹೀಗೆ "ಅಮೃತಕಾಲ"ದತ್ತ ದಾಪುಗಾಲು ಹಾಕುತ್ತಿರುವ "ಆತ್ಮನಿರ್ಭರ" ಭಾರತದಲ್ಲಿ ಒಪ್ಪೊತ್ತಿನ ಕೂಳಿಗಾಗಿ ಬೆವರು ಸುರಿಸುವ ಲಕ್ಷಾಂತರ ಹಸುಳೆಗಳು ನಮ್ಮ ನಡುವೆ ಇವೆ. ಮಾಧ್ಯಮಗಳು ಸುದ್ದಿ ಕುತೂಹಲಿಗಳಾದಷ್ಟೂ ತಮ್ಮ ವಿವೇಚನೆಯನ್ನು ಕಳೆದುಕೊಳ್ಳುತ್ತವೆ. ಕದನ ಕುತೂಹಲಿಗಳಾದರೆ ವಿವೇಕವನ್ನೂ ಕಳೆದುಕೊಳ್ಳುತ್ತವೆ. ಕೋವಿಡ್ 19ರ ಮೊದಲ ಅಲೆಯ ಸಂದರ್ಭದಲ್ಲೇ ಕನ್ನಡದ ಸುದ್ದಿಮನೆಗಳು ತಮ್ಮ ಈ ವಿಕೃತ ಮನೋಭಾವವನ್ನು ಪ್ರದರ್ಶಿಸಿವೆ. ರೋಚಕತೆ ಮತ್ತು ರೋಮಾಂಚಕಾರಿ ಸುದ್ದಿಯಿಂದ ಹೆಚ್ಚಿನ ಜಾಹೀರಾತು ಗಳಿಸಿ, ಟಿಆರ್‌ಪಿ ಹೆಚ್ಚಿಸಿಕೊಳ್ಳುವ ವಿದ್ಯುನ್ಮಾನ ಮಾಧ್ಯಮಗಳ ಈ ಬೌದ್ಧಿಕ ದಾರಿದ್ರ್ಯ ಮತ್ತು ಲಾಭಕೋರತನವೇ ಸಮಾಜದ ದಿಕ್ಕುತಪ್ಪಿಸುತ್ತಿವೆ.

# ಈಶ X ಶಿವ+ಸಿದ್ದ = 0
# ಕಾಂಗ್ರೆಸ್ ಸಾಧಿಸಿದ್ದು ಸೊನ್ನೆ

● ಡಾ. ಮೈಸಿ ಪಾಟೀಲ್
ಹಿರಿಯ ಪತ್ರಕರ್ತರು

22ನೇ ಇಸವಿಯ ಮೊದಲ ವಿಧಾನ ಮಂಡಳ ಅಧಿವೇಶನ ಕಾಂಗ್ರೆಸ್‌ನ ಜನ ವಿರೋಧಿ ಸ್ತರದಲ್ಲಿ ಮಲಗಿ ಬರಕಾಸ್ತುಗೊಂಡಿದೆ. ಕಲಾಪಗಳನ್ನು ಮಾ.4ಕ್ಕೆ ಮುಂದೂಡಲಾಗಿದೆ. ವೈಯಕ್ತಿಕ ನಿಲುವಿನ ಧ್ವಜ ವಿವಾದ ಕಾಂಗ್ರೆಸ್ ನ ಕೆಲ ನಾಯಕರ ಪ್ರತಿಷ್ಠೆಯಿಂದ ಎರಡೂ ಸದನಗಳ ಕಲಾಪವನ್ನು ಬಲಿ ತೆಗೆದುಕೊಂಡಿದೆ. ಅಷ್ಟೇ ಅಲ್ಲ, ಪ್ರಮುಖ ವಿಚಾರಗಳ ಚರ್ಚೆ ಮಾಡುವ ಅವಕಾಶವನ್ನು ಕಳೆದುಕೊಂಡು ವಿರೋಧ ಪಕ್ಷವಾಗಿ ಜನರ ಸಮಸ್ಯೆಗಳತ್ತ ಗಮನ ಸೆಳೆಯುವ ಬದಲು ಹಗಲೂ ರಾತ್ರಿ ವಾರ ಪೂರ್ತಿ ಧರಣಿಮಾಡಿ ಜನ ಸಾಮಾನ್ಯರ ಕಟು ಟೀಕೆಗೆ ಒಳಗಾಗಿದೆ. ಕಾಂಗ್ರೆಸ್ ಜನರ ಹಣವನ್ನು ವಿನಾಕಾರಣ ಪೋಲು ಮಾಡಿದೆ. ಸಚಿವ ಈಶ್ವರಪ್ಪನವರ ರಾಷ್ಟ್ರ ಧ್ವಜಕ್ಕೆ ಸಂಬಂಧಿಸಿದ ಹೇಳಿಕೆಯನ್ನೇ ದೊಡ್ಡದು ಮಾಡಿಕೊಂಡು ಗದ್ದಲವೆಬ್ಬಿಸಿ ಕಾಂಗ್ರೆಸ್ ಅಪಹಾಸ್ಯಕ್ಕೆ ಈಡಾಗಿದೆ.



## ಜನರ ಹಣ ಪೋಲು

ವಿಧಾನ ಮಂಡಳದ ಎರಡೂ ಸದನಗಳ ಒಂದು ದಿನದ ಕಲಾಪಕ್ಕಾಗಿ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಹಣ ವೆಚ್ಚವಾಗುತ್ತದೆ. ಇದರ ಜೊತೆಗೆ ವಿಧಾನ ಸಭಾಧ್ಯಕ್ಷರು ಧರಣಿ ನಿರತ ಕಾಂಗ್ರೆಸ್ ಸದಸ್ಯರಿಗೆ ಉಚಿತ ಊಟ, ಉಪಾಹಾರ ಮಲಗಲು ಹಾಸಿಗೆ, ದಿಂಬು ತರಿಸಿ ಕೊಟ್ಟು ಇನ್ನೂ ಒಂದಿಷ್ಟು ಧಾರಾಳತನವನ್ನೇ ಮೆರೆದಿದ್ದಾರೆ. ಇದು ಅವರ ಸೌಜನ್ಯವಾಗಬೇಕೇ ಹೊರತು ಜನರ ದುಡ್ಡನ್ನು ಪೋಲು ಮಾಡುವುದಾಗಬಾರದು. ವಿಧಾನ ಪರಿಷತ್ತಿನಲ್ಲಿ ಊಟತಿಂಡಿಯ ವ್ಯವಸ್ಥೆಯನ್ನು ಕಾಂಗ್ರೆಸಿನವರೇ ಮಾಡಿಕೊಂಡಿದ್ದಾರೆಂದು, ಹಾಸಿಗೆಗಳನ್ನು ಮಾತ್ರ ಸಭಾಪತಿಗಳು ತರಿಸಿಕೊಟ್ಟಿದ್ದಾರೆಂದು ತಿಳಿದುಬಂದಿದೆ. ಏನೇ ಆದರೂ ಇಂತಹ ನಡಾವಳಿಕೆಗಳನ್ನು ಎರಡೂ ಸದನಗಳ ಅಧ್ಯಕ್ಷರು ಪ್ರೋತ್ಸಾಹಿಸಬಾರದು.

## ವೈಯಕ್ತಿಕವಾದ ಪ್ರತಿಷ್ಠೆ:

ಎರಡೂ ಸದನಗಳ ಕಾರ್ಯಕಲಾಪಗಳಿಗೆ ತಡೆಯಾಗಿದ್ದ ದೆಹಲಿಯ ಕೆಂಪು ಕೋಟೆಯ ಮೇಲೆ ಈಗಲ್ಲವಾದರೂ ಮುಂದೆ ಕೇಸರಿ ಧ್ವಜ ಹಾರಬಹುದು ಎಂಬ ಈಶ್ವರಪ್ಪ ಹೇಳಿಕೆ ವಿರೋಧಿ ಕಾಂಗ್ರೆಸ್‌ಗೆ ದೊಡ್ಡ ಅಸ್ತ್ರವಾಯಿತು. ಈಶ್ವರಪ್ಪ ಸಂವಿಧಾನವನ್ನು ಅಗೌರವಿಸಿದ್ದಾರೆ, ಅವರನ್ನು ಸಚಿವ ಸಂಪುಟದಿಂದ ಕೈ ಬಿಡಬೇಕು,ಇಲ್ಲವೇ ರಾಜ್ಯಪಾಲರು ಮಧ್ಯೆ ಪ್ರವೇಶಿಸಿ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ರಾಜಿನಾಮೆಗೆ ಹಕ್ಕೊತ್ತಾಯಿಸಿ ಹಗಲೂ ರಾತ್ರಿಯ ಧರಣಿ ನಡೆಸಿತು. ಈಶ್ವರಪ್ಪ ಹೇಳಿಕೆ ಸಂವಿಧಾನ ಬಾಹಿರವಾಗಿದ್ದರೆ ವಿಧಾನಮಂಡಲದಲ್ಲಿ ಸಾಂಕೇತಿಕವಾಗಿ ಅದನ್ನು ಪ್ರತಿಭಟಿಸಿ, ತನ್ನ ಅಸಮಾಧಾನ ದಾಖಲಿಸಿ ಮುಂದಿನ ಕಲಾಪಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಅವಕಾಶ ಮಾಡಿ ಕೊಡಬೇಕಾಗಿತ್ತು. ಜೊತೆಗೆ ರಾಜ್ಯಪಾಲರಿಗೆ ದೂರು ನೀಡುವ ಕೆಲಸವನ್ನು ಕಾಂಗ್ರೆಸ್ ಮಾಡಬೇಕಿತ್ತು. ಅಲ್ಲದೆ, ವಿಧಾನ ಮಂಡಳದ ಹೊರಗೆ ಜನತಾ ನ್ಯಾಯಾಲಯಕ್ಕೂ ಈ ವಿಚಾರವನ್ನು ಒಯ್ಯುವ ಅವಕಾಶವಿತ್ತು. ಆದರೆ ಇದನ್ನು ಮಾಡದೇ ವಿಧಾನ ಮಂಡಳವನ್ನೇ ದುರ್ಬಳಕೆ ಮಾಡಿಕೊಂಡ ಕಾಂಗ್ರೆಸ್‌ಗೆ ಜನ ಬೆಂಬಲವಿರಲಿ ಪಕ್ಷದೊಳಗೇ ಅಪಸ್ವರವಿದೆ. ಅದರೆ ಆ ಶಾಸಕರು ಹೆದರಿಕೆಯಿಂದ ಬಹಿರಂಗವಾಗಿ ತಮ್ಮ ಅಸಮಾಧಾನ ತೋರಿಸಿಕೊಂಡಿಲ್ಲ. ವಾಸ್ತವವಾಗಿ ಈ ಹೋರಾಟ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ವಿರೋಧಿ ನಾಯಕ ಸಿದ್ದರಾಮಯ್ಯ ಅವರ ಪ್ರತಿಷ್ಠೆಯ ಹೋರಾಟವೇ ವಿನಹ ಬೇರೇನಲ್ಲ. ಈ ಸಂಬಂಧ ಪರಸ್ಪರ ಬೈದಾಡಿಕೊಂಡು ಆರೋಪ, ಪ್ರತ್ಯಾರೋಪ ಮಾಡಿಕೊಂಡ ಪ್ರಹಸನ ಇನ್ನೂ ಹಸಿರಾಗಿಯೇ ಇದೆ. ಈ ಮಧ್ಯೆ,

ಹಿಜಾಬ್ ವಿವಾದ ಭುಗಿಲೆದ್ದು ಈಗ ಅದು ಶಿವಮೊಗ್ಗದಲ್ಲಿ ಒಬ್ಬ ಬಜರಂಗದಳ ಕಾರ್ಯಕರ್ತನ ಕೊಲೆಯಲ್ಲಿ ಅವಸಾನಗೊಂಡಿದೆ. ಹೀಗೆ ಇವು ಒಂದರೊಳಗೊಂದು ಬೆಸೆದುಕೊಂಡಿವೆ. ಕಾಂಗ್ರೆಸ್ಸಿನವರು ಈ ಹತ್ಯೆಗೆ ಈಶ್ವರಪ್ಪ ಕಾರಣವೆಂದು ದೂರುತ್ತಿದ್ದಾರೆ. ಹಾಗೆಯೇ ಅವರ ವಿರುದ್ಧ ಈಶ್ವರಪ್ಪ ಪ್ರತಿದಾಳಿ ನಡೆಸುತ್ತಿದ್ದಾರೆ. ವಿರೋಧಿ ಕಾಂಗ್ರೆಸ್ ಈಶ್ವರಪ್ಪ ರಾಜಿನಾಮೆ ಬಿಟ್ಟು ಹಿಜಾಬ್ ವಿವಾದ ಪರಿಹರಿಸಲು ಪ್ರಯತ್ನಿಸಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರಲಿಲ್ಲ.

## ಅನಗತ್ಯ ಹಗಲೂ ರಾತ್ರಿ ಧರಣಿ

ಇಂತಹ ಧರಣಿಗಳು ವಿಧಾನ ಮಂಡಳಕ್ಕೆ ಹೊಸತೇನಲ್ಲ. ಆಕ್ರಮ ಗಣಿಗಾರಿಕೆಯ ವಿಷಯದಲ್ಲಿ ಕಾಂಗ್ರೆಸ್ ಈ ಹಿಂದೆ ಹಲವು ದಿನ ಇಂತಹ ಧರಣಿ ನಡೆಸಿತ್ತು. ಆದರೆ ಈಗಿರುವ ವಿಚಾರಕ್ಕಿಂತ ಅದು ಉದಾತ್ತವಾಗಿತ್ತು. ಹಗಲೂ ರಾತ್ರಿಯ ಧರಣಿ ಮಾಡುವಾಗ ಸಮಸ್ಯೆಯ ಗಾತ್ರವನ್ನು ಪಕ್ಷಗಳು ಅರ್ಥಮಾಡಿಕೊಳ್ಳಬೇಕು. ಜನಹಿತದ ಜವಾಬ್ದಾರಿಯಿಂದ ಅವು ವರ್ತಿಸಬೇಕೇ ವಿನಹ ಜನ ಪೀಡಕರಾಗಬಾರದು. ರೈತರ, ಬಡವರಿಗೆ ಅನ್ಯಾಯವಾದಾಗ, ಭ್ರಷ್ಟಾಚಾರದ, ಕಾನೂನು ವ್ಯವಸ್ಥೆಯಲ್ಲಿ ಭಾರಿ ಲೋಪಗಳಾದಾಗ ಸರ್ಕಾರ ಸರಿದಾರಿಗೆ ಬಾರದಿದ್ದರೆ ಅಂತಿಮವಾಗಿ ಇಂತಹ ಅಸ್ತ್ರಗಳನ್ನು ಬಳಸಬೇಕು. ಆಡಳಿತ ಮತ್ತು ವಿರೋಧ ಪಕ್ಷಗಳ ನಡುವಿನ ಈ ಹಗ್ಗ ಜಗ್ಗಾಟದಲ್ಲಿ ಸಾಮಾನ್ಯ ಜನ ಬಲಿಪಶುಗಳಾಗುತ್ತಿದ್ದಾರೆ. ಈ ರಾಜಕೀಯ ದೊಂಬರಾಟದಿಂದಾಗಿ ಬಿಜೆಪಿ ಮತ್ತು ಕಾಂಗ್ರೆಸ್ ನ ಹೊಡೆದಾಟ ಅನಿವಾರ್ಯವಾಗಿ ರಾಜಭವನದ ಅಂಗಳಕ್ಕೆ ತಲುಪಿದೆ. ಒಟ್ಟಾರೆಯಾಗಿ ಹೇಳುವುದಾದರೆ ಇದು ಎರಡೂ ತಂಡಗಳ ವೈಫಲ್ಯವೆಂದೇ ಅಂದಾಜಿಸಬೇಕಾಗುತ್ತದೆ.

## ಜನಹಿತ ಕಾಪಾಡಲಿ

ವಿಧಾನ ಮಂಡಳ ಜನಹಿತ ಕಾಯುವ ಶಾಸನ ರಚಿಸಲು, ವಿವಿಧ ಸಾಮಾಜಿಕ ಸಮಸ್ಯೆಗಳ ಮೇಲೆ ಆರೋಗ್ಯ ಪೂರ್ಣ ಚರ್ಚೆ ಮಾಡುವ ಸದನಗಳಾಗಬೇಕೇ ಹೊರತು ವೈಯಕ್ತಿಕವಾಗಿ ಬೈದಾಡುವ ಅಖಾಡಗಳಾಗಬಾರದು. ಹಿರಿಯ ಶಾಸಕರು ಕಿರಿಯರಿಗೆ ಮಾದರಿಯಾಗಿರಬೇಕೇ ವಿನಹ ಬೀದಿ ಕಾಳಗಕ್ಕೆ ಪ್ರಚೋದನೆ ನೀಡುವಂತಾಗಬಾರದು. ಅಹಿತಕರ ಘಟನೆಗಳು ನಡೆದಾಗ ಸಭಾಧ್ಯಕ್ಷರು ಲಗಾಮು ಹಾಕಬೇಕು. ಈ ವಿಚಾರದಲ್ಲಿ ಕಾಗೇರಿ ಎಡವಿದ್ದಾರೆ ಅನ್ನಿಸುತ್ತದೆ. ಪ್ರಜಾಪ್ರಭುತ್ವ ಮತ್ತು ಸಂಸದೀಯ ಪರಂಪರೆಯನ್ನು ಈ ಸದನಗಳ ಕಲಾಪ ಎತ್ತರಕ್ಕೆ ಕೊಂಡೊಯ್ಯಬೇಕಾಗಿದೆ. ರಾಜ್ಯದಲ್ಲಿ ಹತ್ತು ಹಲವು ಸಮಸ್ಯೆಗಳಿವೆ. ಜನರು ಎದುರಿಸುತ್ತಿರುವ ಈ ಸಮಸ್ಯೆಗಳನ್ನು ಪರಿಹರಿಸಲೆಂದೇ ಶಾಸನಸಭೆಯ ಅಧಿವೇಶನ ನಡೆಯುತ್ತದೆ. ಇದನ್ನು ಎಲ್ಲಾ ಪಕ್ಷದ ಸದಸ್ಯರು ಬಳಸಿಕೊಂಡು ತಮ್ಮನ್ನು ಆರಿಸಿ ಕಳಿಸಿದ ಜನರ ಕಷ್ಟ ಪರಿಹರಿಸಲು ಪ್ರಯತ್ನಿಸಬೇಕು. ಅದರ ಬದಲಿಗೆ ಇಂತಹ ನಿಂದನೆಗಳಲ್ಲಿ ತೊಡಗಬಾರದು.

## ಕರಾಳ ಅಧ್ಯಾಯ

ಕೋಲಾಹಲದ ನಡುವೆಯೆ, ಸೋಮವಾರ 4 ಪ್ರಮುಖ ವಿಧೇಯಕ ಗಳನ್ನು ವಿಧಾನಸಭೆ ಅಂಗೀಕರಿಸಿತು. 2011ರಲ್ಲಿ ಕೆ.ಪಿ.ಎಸ್ಸಿ. ಗೆಜಟೆಡ್ ಅಧಿಕಾರಿಗಳ ನೇಮಕ ಮಾಡಿದ, ಕೋರ್ಟ್9ಗಳು ತಿರಸ್ಕರಿಸಿದ ವಿವಾದಿತ ಪಟ್ಟಿಯನ್ನು, ಯಾವುದೇ



ಚರ್ಚೆಯಿಲ್ಲದೆ ಅಂಗೀಕರಿಸಲಾಯಿತು. ಕಾಂಗ್ರೆಸ್ ಈ ಅಕ್ರಮ–ಸಕ್ರಮದ ವಿರುದ್ಧ ದನಿ ಎತ್ತಲೇ ಇಲ್ಲ. ಅಂದರೆ ಸರ್ಕಾರ ತನ್ನ ಇಚ್ಚೆ ಬಂದಂತೆ ಶಾಸನ ರಚಿಸಲು ಸಾಧ್ಯವಾಯಿತು. ವಿರೋಧವೇ ಇಲ್ಲದಿದ್ದರೆ ಸರ್ಕಾರ ಸರ್ವಾಧಿಕಾರಿಯಾಗುವ ಅಪಾಯವೂ ಇದೆ . ಮಂಗಳವಾರವೂ ನಿಗದಿತ ಕಲಾಪಗಳನ್ನು ಸುಗಮವಾಗಿ ನಡೆಯುವಂತೆ ಕಾಂಗ್ರೆಸ್ ಸದಸ್ಯರು ಧರಣಿ ಕೈಬಿಡ ಬೇಕೆಂದು ಸಭಾಧ್ಯಕ್ಷರು ವಿಧಾನಸಭೆಯಲ್ಲಿ ಪದೇಪದೇ ಮನವಿ ಮಾಡಿದರು. ಆದರೆ ಶಿವಮೊಗ್ಗ ಹತ್ಯೆಯಲ್ಲಿ ಕಾಂಗ್ರೆಸ್ ಕೈವಾಡವಿದೆಯೆಂದು ಬಿಜೆಪಿಯ ಸದಸ್ಯರು ಆಪಾದನೆ ಮಾಡಿದರು. ಕಾಂಗ್ರೆಸ್ ಶಾಸಕರು ಈ ಆರೋಪವನ್ನು ತೀವ್ರವಾಗಿ ಪ್ರತಿಭಟಿಸಿ ಧರಣಿ ಮುಂದುವರಿಸಿದರು. ಆಗ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯಕ್ಕೆ ಸದನದ ಒಪ್ಪಿಗೆ ಪಡೆದು ಮಾ.4ರಂದು ಬಜೆಟ್ ಮಂಡಿಸಲು ಅನುಮತಿ ಪಡೆದರು. ಕಾಂಗ್ರೆಸ್ ಅತ್ಯಂತ ಬೇಜವಾಬ್ದರಿ ಪಕ್ಷ, ಜನರಿಗೆ ದ್ರೋಹ ಬಗೆಯುತ್ತಿದೆ ಎಂದು ಖಂಡಿಸಿದರು.



● 6ನೇ ಪುಟಕ್ಕೆ...

# ತೃತೀಯ ರಂಗ ಸದೃಢತೆಗೆ ಸಿದ್ಧತೆ

● ಎಂ.ಡಿ.ದಿನೇಶ್ ರಾವ್

ಪಂಚ ರಾಜ್ಯಗಳ ವಿಧಾನ ಸಭಾ ಚುನಾವಣೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಬಿಜೆಪಿ ನಾಲ್ಕು ರಾಜ್ಯಗಳ ಪೈಕಿ ಒಂದು ರಾಜ್ಯದಲ್ಲಿ ಅಧಿಕಾರ ಉಳಿಸಿಕೊಳ್ಳವುದು ಅನುಮಾನವಾಗಿದೆ ಹೀಗಿರುವಾಗ ಇದರ ಸುಳಿವು ಅರಿತ ಪ್ರಾದೇಶಿಕ ಪಕ್ಷಗಳು ಸಕ್ರಿಯವಾಗಿವೆ ಇದರ ಫಲವಾಗಿ ಈಗ ತೃತೀಯ ರಂಗ ರಚನೆಗೆ ಸಿದ್ದವಾಗುತ್ತಿವೆ.

ಉತ್ತರ ಖಂಡಾ,ಗೋವಾ, ಮಣಿಪುರ ಮತ್ತು ಪಂಜಾಬ್ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ ಆದರೆ ಈ ನಾಲ್ಕು ರಾಜ್ಯಗಲ್ಲಿ ಮತ್ತೇ ಅಧಿಕಾರ ಹಿಡಿಯುವುದು ಕಷ್ಟಸಾಧ್ಯವಾಗಿದೆ ಇದನ್ನು ಅರಿತ ಬಿಜೆಪಿ ಸಕಲ ವಿದ್ಯೆಯನ್ನು ದಾರೆಯೆರಿಯುತ್ತಿದೆ ಆದರೆ ಬಿಜೆಪಿ ಗೆಲುವು ಅಷ್ಟು ಸುಲಭದಲ್ಲ ಎನ್ನುವ ಅಂಶ ಬಿಜೆಪಿ ನಾಯಕರಿಗೆ ಅರಿವಾಗಿದೆ. ಇನ್ನೂ ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಇನ್ನಿಲ್ಲದ ಪ್ರಯತ್ನಗಳನ್ನು ಮಾಡುತ್ತಿದೆ ಇಂತ ಪ್ರಯತ್ನಗಳಲ್ಲೇ ಬಿಜೆಪಿ ಮುಳುಗಿರುವಾಗ ಪ್ರಾದೇಶಿಕ ಪಕ್ಷಗಳು ತೃತೀಯ ರಂಗ ರಚನೆಗೆ ಚಾಲನೆ ನೀಡಿವೆ.


ಪ್ರಾದೇಶಿಕ ಪಕ್ಷಗಳೆಲ್ಲ ತೃತೀಯ ರಂಗ ಎನ್ನುವ ಹೆಸರಿನಲ್ಲಿ ಒಂದೇ ಗೂಡಿನಲ್ಲಿ ಸೇರಲು ಪ್ರಯತ್ನವನ್ನು ಮತ್ತೆ ಆರಂಭಿಸಿದೆ. ರಾಷ್ಟ್ರ ರಾಜಕಾರಣದಲ್ಲಿ ಇದೇನು ಹೊಸದಲ್ಲ, ಕಳೆದ ಲೋಕಸಭಾ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ಮತ್ತು ಚಂದ್ರಬಾಬು ನಾಯ್ಡು ಈ ಪ್ರಯತ್ನಕ್ಕೆ ಮುನ್ನುಡಿಯನ್ನು ಬರೆದಿದ್ದರು.

ಎಲ್ಲಾ ಪ್ರಾದೇಶಿಕ ಪಕ್ಷಗಳ ನಿರೀಕ್ಷಿತ ಬೆಂಬಲ, ಬಿಜೆಪಿ ಮತ್ತು ಕಾಂಗ್ರೆಸ್ ಜೊತೆಗೆಯೇ ರಾಜಕಾರಣ ನಡೆಸೋಣ ಎನ್ನುವ ನಿಲುವಿಗೆ ಕೆಲವು ಪಕ್ಷಗಳು ಅಂಟಿಕೊಂಡಿದ್ದರಿಂದ, ಕಳೆದ ಬಾರಿ ಆ ಪ್ರಯತ್ನಕ್ಕೆ ಫಲ ಸಿಕ್ಕಿರಲಿಲ್ಲ. ದೇಶದ ರಾಜಕೀಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪ್ರಭಲವಾಗಿದ್ದ ವೇಳೆ ಅದನ್ನು ವಿರೋಧಿಸಿ ಪರ್ಯಾಯ ಶಕ್ತಿಯ ಒಕ್ಕೂಟ ರಚನೆಗೆ ಹಿಂದೆ ಕೂಡಾ ಪ್ರಯತ್ನಗಳಾಗಿದ್ದವು.

2019ರ ಲೋಕಸಭಾ ಚುನಾವಣೆಯಲ್ಲಿ ತೆಲುಗುದೇಶಂ ಹೇಳ ಹೆಸರಿಲ್ಲದಂತೆ ಸೋಲುಂಡಿದ್ದು, ಮಮತಾ ಬ್ಯಾನರ್ಜಿಯ ತೃಣಮೂಲ ಕಾಂಗ್ರೆಸ್ ಪಕ್ಷ ನಿರೀಕ್ಷಿತ ರೀತಿಯಲ್ಲಿ ಸಫಲವಾಗದೇ ಇದ್ದದ್ದು, ಪರ್ಯಾಯ ರಂಗದ ಕನಸಿಗೆ ಹಿನ್ನಡೆಯನ್ನು ಉಂಟು ಮಾಡಿತ್ತು.

ಈಗ, ವಿಧಾನಸಭೆ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ನಂತರ ಮಮತಾ ಬ್ಯಾನರ್ಜಿ ಮುಂದಾಳತ್ವದಲ್ಲಿ ತೃತೀಯ ರಂಗದ ಕನಸು ಚಿಗುರೊಡೆಯಲಾರಂಭಿಸಿದೆ. ಇದಕ್ಕೆ ದಕ್ಷಿಣದ ರಾಜ್ಯದಿಂದ ಉತ್ತಮ ಬೆಂಬಲವೂ ಸಿಗುತ್ತಿದೆ. ಇದು ಬಿಜೆಪಿಯಿಂದ ಹೊರತಾದ ಒಕ್ಕೂಟ ರಚನೆಯ ಭಾಗ ಎನ್ನುವುದು ಗಮನಿಸಬೇಕಾದ ವಿಚಾರ.

ದೇಶದಲ್ಲಿರುವ ಹತ್ತು ಹಲವಾರು ಪ್ರಾದೇಶಿಕ ಪಕ್ಷಗಳ ಪೈಕಿ ಸದ್ಯದ ಮಟ್ಟಿಗೆ ಬಲಾಢ್ಯವಾಗಿರುವುದು ಮಮತಾ ನೇತೃತ್ವದ ತೃಣಮೂಲ ಕಾಂಗ್ರೆಸ್. ನಲವತ್ತು ಲೋಕಸಭಾ ಕ್ಷೇತ್ರವನ್ನು ಹೊಂದಿರುವ ಪಶ್ಚಿಮ ಬಂಗಾಳದಲ್ಲಿ



ಟಿಎಂಸಿ ಸಾಧನೆ ಏನಿರಲಿದೆ ಎನ್ನುವುದರ ಮೇಲೆ ತೃತೀಯ ರಂಗದ ಭವಿಷ್ಯ ನಿರ್ಧಾರವಾಗಲಿದೆ. ದಕ್ಷಿಣದಲ್ಲೂ ಪ್ರಾದೇಶಿಕ ಪಕ್ಷಗಳ ಪ್ರಭಾವ ಹೆಚ್ಚಾಗಿದ್ದರೂ, ಇಲ್ಲಿನ ಪಕ್ಷಗಳಿಗೆ ಒಂದಲ್ಲಾ ಒಂದು ರೀತಿಯಲ್ಲಿ ಬಿಜೆಪಿ ಅಥವಾ ಕಾಂಗ್ರೆಸ್ ಜೊತೆ ನಂಟು ಇದ್ದೇ ಇದೆ.

ತೆಲಂಗಾಣದಲ್ಲಿ ಕೆ.ಚಂದ್ರಶೇಖರ್ ರಾವ್ ನೇತೃತ್ವದ ಟಿಆರ್ಎಸ್

ತಮಿಳುನಾಡಿನಲ್ಲಿ ಸ್ಟಾಲಿನ್ ನೇತೃತ್ವದ ಡಿಎಂಕೆ, ತೆಲಂಗಾಣದಲ್ಲಿ ಕೆ.ಚಂದ್ರಶೇಖರ್ ರಾವ್ ನೇತೃತ್ವದ ಟಿಆರ್ಎಸ್, ಕರ್ನಾಟಕದಲ್ಲಿ ದೇವೇಗೌಡ್ರ ನೇತೃತ್ವದ ಜೆಡಿಎಸ್ ಪಕ್ಷದಿಂದ ಈಗಾಗಲೇ ಮಮತಾ ಬರೆಯಲು ಹೊರಟಿರುವ ಹೊಸ ರಾಜಕೀಯ ಶಕ್ತಿಗೆ ಬೆಂಬಲ ಸಿಕ್ಕಾಗಿದೆ. ಆದರೆ, ತಮಿಳುನಾಡಿನ ಇನ್ನೊಂದು ಪ್ರಭಲ ಪ್ರಾದೇಶಿಕ ಪಕ್ಷವಾದ ಎಐಎಡಿಎಂಕೆ ಮತ್ತು ಆಂಧ್ರ ಪ್ರದೇಶದ ಜಗನ್ ನೇತೃತ್ವದ ವೈಎಸ್ಆರ್ ಕಾಂಗ್ರೆಸ್ ಪಕ್ಷ, ಪ್ರತ್ಯಕ್ಷ/ಪರೋಕ್ಷವಾಗಿ ಬಿಜೆಪಿ ಜೊತೆಗಿರುವುದರಿಂದ, ದಕ್ಷಿಣದಲ್ಲಿ ಪ್ರಾದೇಶಿಕ ಪಕ್ಷಗಳ ಮಿಲನಕ್ಕೆ ಅಡ್ಡಿಯಾಗಬಹುದು.

ಈ ಹಿನ್ನೆಲೆಯಲ್ಲಿ ಪ್ರಾದೇಶಿಕ ಪಕ್ಷಗಳ ಮುಖಂಡರು ಈಗ ಚರ್ಚೆ ಮಾಡಲು ಆರಂಭಿಸಿದ್ದಾರೆ ಹೀಗಾಗಿಯೇ ತೆಲಂಗಾಣದ ಮುಖ್ಯಮಂತ್ರಿ ಕೆ.ಸಿ. ಚಂದ್ರಶೇಖರ್ ರಾವ್ ಅವರು ಎನ್‌ಸಿಪಿ ನಾಯಕ ಶರದ್ ಪವರ್ ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆಯನ್ನು ಭೇಟಿ ಮಾಡಿದ್ದಾರೆ. ಇನ್ನೊಂದೆಡೆ ಎರಡು ವರ್ಷದ ಬಳಿಕ ಚುನಾವಣಾ ತಂತ್ರಗಾರ ಪ್ರಶಾಂತ್ ಕಿಶೋರ್ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಭೇಟಿ ಮಾಡಿದ್ದಾರೆ.

ಹಲವು ವಿಷಯಗಳಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರತ್ಯಕ್ಷ–ಪರೋಕ್ಷ ಬೆಂಬಲ ನೀಡಿದ್ದ ತೆಲಂಗಾಣದ ಮುಖ್ಯಮಂತ್ರಿ ಕೆ.ಸಿ. ಚಂದ್ರಶೇಖರ್ ರಾವ್‌ಈಗ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಬಗ್ಗೆ ಕಿಡಿಕಾರತೊಡಗಿದ್ದಾರೆ. ನರೇಂದ್ರ ಮೋದಿ ಇತ್ತೀಚೆಗೆ ಹೈದರಾಬಾದಾದಿಗೆ ಬಂದಿದ್ದಾಗ ಚಂದ್ರಶೇಖರ್ ರಾವ್ ಮುಖ್ಯಮಂತ್ರಿಯಾಗಿ ಶಿಷ್ಟಾಚಾರದ ಪ್ರಕಾರ ಸ್ವಾಗತ ಕೋರಲೂ ಹೋಗಿರಲಿಲ್ಲ. ಅಲ್ಲದೆ ಕೇಂದ್ರ ಸರ್ಕಾರ ತೆಲಂಗಾಣಕ್ಕೆ ಅರ್ಹವಾಗಿ ಸಿಗಬೇಕಾದ ಅನುದಾನವನ್ನೂ ಕೊಟ್ಟಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು. ಈ ಎಲ್ಲಾ ಬೆಳವಣಿಗೆಗಳ ನಂತರ ಎನ್‌ಸಿಪಿ ನಾಯಕ ಶರದ್ ಪವರ್ ಹಾಗೂ ಶಿವಸೇನೆ ಮುಖಂಡ ಉದ್ಧವ್ ಠಾಕ್ರೆಯನ್ನು ಭೇಟಿ ಮಾಡಿದ್ದಾರೆ.

ಇದು ತೃತೀಯ ರಂಗ ಬಲಪಡಿಸುವ ಲೆಕ್ಕಾಚಾರ ಎಂದು ಹೇಳಲಾಗುತ್ತಿದೆ. ಆದರೆ ಒಂದು ಸಮಸ್ಯೆ ಇದೆ. ಚಂದ್ರಶೇಖರ್ ರಾವ್ ಕಾಂಗ್ರೇಸೇತರ ರಂಗ ರಚನೆ ಮಾಡಬೇಕು ಎಂಬ ಉದ್ದೇಶ ಹೊಂದಿದ್ದರೆ ಎನ್‌ಸಿಪಿ ನಾಯಕ ಶರದ್ ಪವರ್ ಹಾಗೂ ಶಿವಸೇನೆ ನಾಯಕ ಉದ್ಧವ್ ಠಾಕ್ರೆ ಸದ್ಯ ಕಾಂಗ್ರೆಸ್ ಬಿಟ್ಟು ಬಿಜೆಪಿ ವಿರುದ್ಧ ಹೋರಾಡಲು ಸಿದ್ದರಿಲ್ಲ. ದೇಶಾದ್ಯಂತ ಬಿಜೆಪಿಗೆ ಕಾಂಗ್ರೆಸ್ ಮಾತ್ರವೇ ಪರ್ಯಾಯವಾಗಲು ಸಾಧ್ಯ ಎಂದು ಎನ್‌ಸಿಪಿ ಮತ್ತು ಶಿವಸೇನೆಗಳು ನಂಬಿವೆ. ಚಂದ್ರಶೇಖರ್ ಮತ್ತು ಉದ್ಧವ್ ಠಾಕ್ರೆ ಭೇಟಿ ಬಳಿಕ ಮಾತನಾಡಿರುವ ಶಿವಸೇನೆಯ ವಕ್ತಾರ ಸಂಜಯ್ ರಾವತ್, ‘ನಾವು ಕಾಂಗ್ರೆಸ್ ಬಿಟ್ಟು ಹೊಸ ರಂಗ ಕಟ್ಟುವ ಬಗ್ಗೆ ಯಾವಾಗಲೂ ಹೇಳಿಲ್ಲ’ ಎಂದಿದ್ದಾರೆ. ಒಟ್ಟಿನಲ್ಲಿ ‘ವಿಪಕ್ಷಗಳು ಒಂದುಗೂಡಬೇಕೆಂಬ’ ಪ್ರಯತ್ನವಂತೂ ನಡೆಯುತ್ತಿದೆ.

ಇನ್ನೊಂದೆಡೆ ಜೆಡಿಯು ಉಪಾಧ್ಯಕ್ಷ ಸ್ಥಾನದಿಂದ ಕಿತ್ತುಹಾಕಿದ ಎರಡು ವರ್ಷಗಳ ನಂತರ ಶನಿವಾರ ದೆಹಲಿಯಲ್ಲಿ ರಾಜಕೀಯ ತಂತ್ರಜ್ಞ ಪ್ರಶಾಂತ್ ಕಿಶೋರ್ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಭೇಟಿ ಮಾಡಿದ್ದಾರೆ. ಇದು ರಾಷ್ಟ್ರ ರಾಜಕಾರಣದಲ್ಲಿ ಸಣ್ಣ ಸಂಚಲನ ಸೃಷ್ಟಿಸಿದೆ. ಭೇಟಿಯ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಪ್ರಶಾಂತ್ ಕಿಶೋರ್ ‘ಇದು ಸೌಜನ್ಯದ ಭೇಟಿ’ ಎಂದು ಹೇಳಿದ್ದಾರೆ. ನಿತೀಶ್ ಕುಮಾರ್ ಕೂಡ ಹಾಗೇ ಪ್ರತಿಕ್ರಿಯಿಸಿದ್ದಾರೆ. ಆದರೆ ಇದು ‘ಸೌಜನ್ಯದ ಭೇಟಿ’ ಮಾತ್ರವಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ.

ಈ ಭೇಟಿಯ ಬಗ್ಗೆ ಪ್ರತಿಕ್ರಿಯಿಸಿರುವ ಜೆಡಿಯು ನಾಯಕರು ‘ನಿತೀಶ್ ಕುಮಾರ್ ಈಗ ಬಿಜೆಪಿ ಜೊತೆಗೆ ಸುಮಧುರವಾದ ಮತ್ತು ಆಳವಾದ ಸಂಬಂಧ ಹೊಂದಿದ್ದಾರೆ. ಅವರನ್ನು ಬಿಜೆಪಿ ಸಖ್ಯ ಬಿಡಿಸುವುದು ಅಸಾಧ್ಯದ ಮಾತು’ ಎಂದು ಹೇಳಿದ್ದಾರೆ. ಅಲ್ಲದೆ ಪ್ರಶಾಂತ್ ಕಿಶೋರ್ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿಲ್ಲ ಎಂದು ದೂರಿದ್ದಾರೆ. ಇನ್ನೊಂದೆಡೆ ಪ್ರಶಾಂತ್ ಕಿಶೋರ್ ಆಪ್ತರು ಕೂಡ ‘ಬಿಜೆಪಿ ವಿರೋಧಿ ರಂಗದಲ್ಲಿ ಈಗ ನಿತೀಶ್ ಕುಮಾರ್ ಗೆ ಜಾಗ ಇಲ್ಲ. ಅವರು ಸಿಎಎ ಆಂದೋಲನದ ಬಗ್ಗೆ ಮೌನ ವಹಿಸಿದ ನಂತರ ಮುಸ್ಲಿಂ ಸಮುದಾಯದ ವಿಶ್ವಾಸ ಕಳೆದುಕೊಂಡಿದ್ದಾರೆ’ ಎಂದು ಹೇಳುತ್ತಾರೆ. ಹೀಗೆ ಸದ್ಯಕ್ಕೆ ಪರಸ್ಪರ ‘ಅಸಾಧ್ಯತೆಯ’ ಮಾತುಗಳು ಕೇಳಿಬರುತ್ತಿವೆ.

2015ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ನಿತೀಶ್ ಕುಮಾರ್ ಮತ್ತು ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಜೊತೆಯಾಗುವುದರ ಹಿಂದೆ ಪ್ರಶಾಂತ್ ಕಿಶೋರ್ ಶ್ರಮವಿತ್ತು. ನಂತರ ಪ್ರಶಾಂತ್ ಕಿಶೋರ್ ಎರಡೂ ಪಕ್ಷಗಳ ಸಮನ್ವಯ ಸಾಧಿಸಿ ಪ್ರಚಾರ ತಂತ್ರ ಎಣೆದಿದ್ದರು. ಮಹಾಮೈತ್ರಿಕೂಟದ ಸೀಟು ಹಂಚಿಕೆಯ ಜವಾಬ್ದಾರಿಯನ್ನೂ ನಿರ್ವಹಿಸಿದ್ದರು. ಆಗ ಪ್ರಶಾಂತ್ ಕಿಶೋರ್ ಅಸಾಧ್ಯವಾದುದನ್ನು ಸಾಧ್ಯ ಮಾಡಿದ್ದರು. ಈಗಲೂ ಅಂಥದ್ದೇ ಸಂಭವಿಸಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಮಾರ್ಚ್ 10ರಂದು ಐದು ರಾಜ್ಯಗಳ ಚುನಾವಣಾ ಫಲಿತಾಂಶ ಹೊರಬೀಳುತ್ತಿದ್ದಂತೆ ಇನ್ನಷ್ಟು ರಾಜಕೀಯ ಚಟುವಟಿಕೆಗಳು ನಡೆಯಲಿವೆ. ಸದ್ಯ ಕಾಂಗ್ರೆಸ್ ಪಕ್ಷದಿಂದ ಅಂತರ ಕಾಯ್ದುಕೊಳ್ಳುತ್ತಿರುವ ತೃಣಮೂಲ ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷಗಳ ನಿಲುವು ಬದಲಾಗಬಹುದು. ಇನ್ನೊಂದೆಡೆ ಕಾಂಗ್ರೆಸ್ ಪಕ್ಷ ರಾಹುಲ್ ಗಾಂಧಿ ಅವರಿಗೆ ಎಐಸಿಸಿ ಅಧ್ಯಕ್ಷರನ್ನಾಗಿ ಮಾಡುತ್ತದೆ. ಅದಾದ ಮೇಲೆ ಕಾಂಗ್ರೆಸ್ ಅನ್ನು ಒಳಗೊಂಡ ವಿಪಕ್ಷಗಳ ಮೈತ್ರಿಕೂಟ ಅಥವಾ ಕಾಂಗ್ರೆಸ್ ಹೊರತುಪಡಿಸಿದ ಪ್ರತಿಪಕ್ಷಗಳ ಪಾಳೆಯ, ಎರಡರಲ್ಲಿ ಯಾವುದು ಎನ್ನುವುದು ಗೊತ್ತಾಗಲಿದೆ.

ಗಾಣ ಸಿಎಂ ಜೊತೆ ಮಹಾ ಸಿಎಂ ಉದ್ಧವ್ ಠಾಕ್ರೆ ಭೇಟಿ, ಏನೇನು ಮಾತುಕತೆ?

ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ಕಿಡಿಕಾರುತ್ತಾ ಬಹಿರಂಗವಾಗಿ ಟೀಕಿಸುತ್ತಿರುವ ತೆಲಂಗಾಣದ ಮುಖ್ಯಮಂತ್ರಿ ಕೆ ಚಂದ್ರಶೇಖರ್ ರಾವ್ ಇಂದು ಶಿವಸೇನಾ ಮುಖಂಡ, ಮಹಾರಾಷ್ಟ್ರ ಸಿಎಂ ಉದ್ಧವ್ ಠಾಕ್ರೆ ಮನೆಗೆ ಭೇಟಿ ನೀಡಿದ್ದರು. "ಕೇಂದ್ರೀಯ ಸಂಸ್ಥೆಗಳನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದ್ದು, ಇದನ್ನು ಖಂಡಿಸುತ್ತೇವೆ. ಕೇಂದ್ರ ಸರ್ಕಾರ ತನ್ನ ನೀತಿಯನ್ನು ಬದಲಾಯಿಸಬೇಕು, ಇಲ್ಲದಿದ್ದರೆ ತೊಂದರೆ ಅನುಭವಿಸಬೇಕಾಗುತ್ತದೆ. ದೇಶವು ಇಂತಹ ಹಲವು ವಿಷಯಗಳನ್ನು ನೋಡಿದೆ," ಎಂದು ತೆಲಂಗಾಣ ಸಿಎಂ ಕೆ ಚಂದ್ರಶೇಖರ ರಾವ್, ಮುಂಬೈನಲ್ಲಿ ಮಹಾರಾಷ್ಟ್ರ ಸಿಎಂ ಉದ್ಧವ್ ಠಾಕ್ರೆ ಅವರನ್ನು ಭೇಟಿಯಾದ ನಂತರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ರಾಷ್ಟ್ರೀಯ ಮಟ್ಟದಲ್ಲಿ ಬಿಜೆಪಿ ವಿರುದ್ಧ ಸಮಾನ ಮನಸ್ಕ ಪಕ್ಷಗಳನ್ನು ಒಟ್ಟುಗೂಡಿಸುವ ಪ್ರಯತ್ನಗಳ ಭಾಗವಾಗಿ ತೆಲಂಗಾಣ ಮುಖ್ಯಮಂತ್ರಿ ಕೆ ಚಂದ್ರಶೇಖರ್ ರಾವ್ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರನ್ನು ಭಾನುವಾರದಂದು ಮಾಡಿದರು. ನಮ್ಮ ಸಭೆಯ ಉತ್ತಮ ಫಲಿತಾಂಶವನ್ನು ನೀವು ಶೀಘ್ರದಲ್ಲೇ ನೋಡುತ್ತೀರಿ. ನಾನು ಉದ್ಧವ್ ಜಿ ಅವರನ್ನು ತೆಲಂಗಾಣಕ್ಕೆ ಬರಲು ಆಹ್ವಾನಿಸುತ್ತೇನೆ: ತೆಲಂಗಾಣ ಸಿಎಂ ಕೆ ಚಂದ್ರಶೇಖರ್ ರಾವ್ ಅವರು ಹೇಳಿದರು.

● 11ನೇ ಪುಟಕ್ಕೆ...



# ಬಸವಣ್ಣ ಮತ್ತು ಸಂತ ರವಿದಾಸ



ಸನತ್‌ಕುಮಾರ ಬೆಳಗಲಿ
ಹಿರಿಯ ಪತ್ರಕರ್ತರು

ಶತಮಾನಗಳಿಂದ ಶ್ರೇಣೀಕೃತ ಜಾತಿ ವ್ಯವಸ್ಥೆಯ ಕು ವ್ಯವಸ್ಥೆ ಯಲ್ಲಿ ನಲುಗಿದ ಭಾರತದ ನೆಲದಲ್ಲಿ ಮನುಷ್ಯರ ನಡುವೆ ಪ್ರೀತಿಯ ಸೆಲೆ ಚಿಮ್ಮಿಸಿಲು ಆಗಾಗ ಮಹಾಪುರುಷರು ಆಗಿ ಹೋಗಿದ್ದಾರೆ.ಅವರ ಸಾಲಿನಲ್ಲಿ ಉತ್ತರ ಭಾರತದಲ್ಲಿ ಕೇಳಿ ಬರುವ ಹೆಸರು ಸಂತ ರವಿದಾಸ

ಐದು ಸಾವಿರ ವರ್ಷಗಳಿಂದ ಶ್ರೇಣೀಕೃತ ಜಾತಿ ವ್ಯವಸ್ಥೆಯ ಉಸಿರು ಗಟ್ಟಿಸುವ ವಾತಾವರಣದಲ್ಲಿ ನಲುಗಿದ ಭಾರತ ಮತ್ತೆ ಅಡ್ಡಹಾದಿ ಹಿಡಿದ ದಿನಗಳಿವು.ಧರ್ಮದ ಹೆಸರಿನಲ್ಲಿ ಮತ್ತೆ ವರ್ಣಾಶ್ರಮ ಪದ್ಧತಿಯನ್ನು ಹೇರುವ ಮಸಲತ್ತುಗಳು ನಡೆದಿರುವ ಈ ದಿನಗಳಲ್ಲಿ ಬಾಬಾಸಾಹೇಬರ ಸಂವಿಧಾನ ಮತ್ತು ತ್ರಿವರ್ಣ ರಾಷ್ಟ್ರ ಧ್ವಜಗಳ ಮೇಲೆ ಬಹಿರಂಗವಾಗಿ ಮತ್ತು ಅಂತರಂಗದಲ್ಲಿ ದಾಳಿದಳು ನಡೆದಿವೆ. ಇಂಥ ಸಂಕಟದ ಸನ್ನಿವೇಶದಲ್ಲಿ ಬಸವಣ್ಣ, ತುಕಾರಾಮ,ಜ್ಞಾನೇಶ್ವರ,ಕಬೀರರಂಥವರು ಮತ್ತೆ ಮತ್ತೆ ನೆನಪಿಗೆ ಬರುತ್ತಿದ್ದಾರೆ.ಈ ಸಾಲಿನಲ್ಲಿ ಹೆಚ್ಚು ಬೆಳಕಿಗೆ ಬಾರದ ಹೆಸರು ಸಂತ ಗುರು ರವಿದಾಸ ಅವರದು.

ಅಸಮಾನತೆಯ ಕೆಟ್ಟ ವ್ಯವಸ್ಥೆಯ ಜೊತೆ ಜೊತೆಗೆ ಮನುಷ್ಯರು ಮನುಷ್ಯರನ್ನು ಪ್ರೀತಿಸಬೇಕೆಂಬ ಸಂದೇಶ ಸಾರಿದ ಅದಕ್ಕಾಗಿ ಪ್ರಾಣಾರ್ಪಣೆ ಮಾಡಿದ ಮಹಾನ ಸುಧಾರಕರು ಕೂಡ ಈ ನೆಲದಲ್ಲಿ ಆಗಿ ಹೋಗಿದ್ದಾರೆ.ಬಸವಣ್ಣ ನವರಂತೆ ಶ್ರೇಣೀಕೃತ ವ್ಯವಸ್ಥೆಯ ಮೇಲ್ತುದಿಯಿಂದ ಕೆಳಗಿಳಿದು ಬಂದು ಮಾದಾರ ಚೆನ್ನಯ್ಯನ ಮಗ ಎಂದು ಹೇಳಿಕೊಂಡವರು ಒಂದೆಡೆಗಿದ್ದಾರೆ.ಅದೇ ರೀತಿ ಸಮಾಜದ ತಳ ಸಮುದಾಯಗಳಿಂದ ಮೇಲೆದ್ದು ಬಂದು ವಿವೇಕದ ಬೆಳಕನ್ನು ನೀಡಿದವರೂ ಇದ್ದಾರೆ.ಭಕ್ತಿಪಂಥದಲ್ಲಿ ಎಲ್ಲರೂ ಸಮಾನರಾಗಿದ್ದರೂ ತಳ ಸಮುದಾಯದಿಂದ ಬಂದ ಸಂತರಿಗೆ,ಶರಣರಿಗೆ,ಗುರು ಗಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರಕಿಲ್ಲ.ಇಂಥ ತುಳಿತಕ್ಕೊಳಗಾದ ಸಮುದಾಯ ದಿಂದ ಬಂದವರು ಗುರು ರವಿದಾಸ.

ಅದೇನೇ ಇರಲಿ ಬಸವಣ್ಣನವರಂತೆ ಜಾತಿಶ್ರೇಷ್ಠತೆಯ ತಾರತಮ್ಯವನ್ನು ವಿರೋಧಿಸಿದ ಗುರು ರವಿದಾಸರಂಥವರ ಬಗ್ಗೆ ಇನ್ನಷ್ಟು ಅಧ್ಯಯನ ಮತ್ತು ಸಂಶೋಧನೆ ಗಳು ನಡೆಯಬೇಕಾಗಿದೆ.

ಇತ್ತೀಚೆಗೆ ಉತ್ತರ ಭಾರತದಲ್ಲಿ ಸಂತ ರವಿದಾಸ ಜಯಂತಿಯನ್ನು ವ್ಯಾಪಕವಾಗಿ ಆಚರಿಸಲಾಯಿತು. ರಾಜಕಾರಣಿಗಳು ರವಿದಾಸರ ಜಯಂತಿ ಯ ಸಂದೇಶಗಳನ್ನು ನೀಡಿದರು.ಉತ್ತರ ಪ್ರದೇಶದ ವಿಧಾನ ಸಭಾ ಚುನಾವಣೆಯ ಹಿನ್ನೆಲೆಯಲ್ಲಿ ರವಿದಾಸರ ನೆನಪು ಮಾಡಿಕೊಳ್ಳುವದು ರಾಜಕಾರಣಿ ಗಳಿಗೆ ಅನಿವಾರ್ಯವಾಗಿತ್ತು.

ಕಬೀರ,ಸಂತ ತುಕಾರಾಮ,ನಾಮದೇವರಂತೆ ರವಿದಾಸ ಅವರು ಕೂಡ ತಳ ಸಮುದಾಯದಿಂದ ಬಂದು ಭಕ್ತಿ ಮಾರ್ಗದಲ್ಲಿ ಸಾಗಿ ಸಮಾಜ ಸುಧಾರಣೆಗೆ ಶ್ರಮಿಸಿದವರು. ಇವರ ಬಗ್ಗೆ ಕನ್ನಡದಲ್ಲಿ ಎಷ್ಟೇ ಹುಡುಕಿದರೂ ಹೆಚ್ಚಿನ ಮಾಹಿತಿ ಸಿಗುವದಿಲ್ಲ. ಈ ಕೊರತೆಯನ್ನು ನೀಗಿಸಿದವರು ಕಲಬುರಗಿಯ ಡಾ.ಸೂರ್ಯಕಾಂತ ಎಸ್ ,ಸುಜ್ಯಾತ ಅವರು. ಕೆಲ ತಿಂಗಳ ಹಿಂದೆ ಅವರು ಸಂತ ರವಿದಾಸರ ಕುರಿತು ತಾವೇ ಬರೆದ ಪುಸ್ತಕ ವನ್ನು ನನಗೆ ಓದಲು ಕೊಟ್ಟಿದ್ದರು.ಕಾರಣಾಂತರಗಳಿಂದ ನನಗೂ ಓದಲು ಆಗಿರಲಿಲ್ಲ. ಇತ್ತೀಚೆಗೆ ಅವರು ಕೊಟ್ಟ ರವಿದಾಸ ಪುಸ್ತಕ ಓದತೊಡಗಿದಾಗ ಅನೇಕ ಅಪರೂಪದ ಸಂಗತಿಗಳು ಗೊತ್ತಾದವು.

ಗುರು ರವಿದಾಸ ಅವರು ಕಾಶಿ ಹತ್ತಿರದ ಗೋವರ್ಧನಪುರಿ ಎಂಬಲ್ಲಿ 1368 ರ ಫೆಬ್ರವರಿ15 ರಂದು ಚಮ್ಮಾರ ಮನೆತನದಲ್ಲಿ ಜನಿಸಿದರು ಎಂದು ಹೇಳಲಾಗುತ್ತದೆ.ಇವರ ಜನನ ವರ್ಷದ ಬಗ್ಗೆ ವಿಭಿನ್ನ ಅಭಿಪ್ರಾಯ ಗಳಿದ್ದರೂ ರವಿದಾಸರ ಭಕ್ತರ ನಂಬಿಕೆ ಯ ಪ್ರಕಾರ ರವಿದಾಸ 1376 ರಲ್ಲಿ ಜನಿಸಿದರು ಎಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ.

ಕಬೀರರು ಜನಿಸಿದ ಕಾಶಿ ಸಮೀಪದ ಊರಿನಲ್ಲೇ ಚಮ್ಮಾರ ದಂಪತಿಗಳಿಗೆ ಜನಿಸಿದ ರವಿದಾಸರು ಬಾಲ್ಯದಲ್ಲೇ ಭಕ್ತಿಯ ಮಾರ್ಗ ಹಿಡಿದರು. ಜೊತೆಗೆ ಜಾತಿ ವ್ಯವಸ್ಥೆಯ ಕ್ರೌರ್ಯದ ವಿರುದ್ಧ ಧ್ವನಿಯೆತ್ತಿದರು. ಚಿಕ್ಕ ವಯಸ್ಸಿನಲ್ಲಿ ಭಾರತವನ್ನು ಸುತ್ತಿದರು. ಕಬೀರ ದಾಸ ಮತ್ತು ಗುರು ನಾನಕರು ರವಿದಾಸರ ಸಮಕಾಲೀನರಾಗಿದ್ದರು.





ಮೈತುಂಬ ಜಾತಿಯತೆಯನ್ನು ತುಂಬಿಕೊಂಡ ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಸರಿಪಡಿಸಲು ಕರ್ನಾಟಕದ ಶರಣರು ವಚನಗಳನ್ನು ರಚಿಸಿದಂತೆ ರವಿದಾಸರು ಜನ ಭಾಷೆಯಲ್ಲಿ ದೋಹಾಗಳನ್ನು ರಚಿಸಿದರು.ಅವರ ಎರಡು ಸಾಲಿನ ದೋಹಾಗಳು ಭಾರತದ ಅನೇಕ ಕಡೆ ಅತ್ಯಂತ ಜನಪ್ರಿಯ ವಾಗಿವೆ.

" ಮನುಷ್ಯ ದೇಹವು ಎಲುಬು,ರಕ್ತ, ಹಾಗೂ ಮಾಂಸದಿಂದ ರೂಪುಗೊಂಡಿದೆ.ಒಂದೇ ಬಿಂದುವಿನಿಂದ ಉತ್ಪತ್ತಿಯಾಗಿದೆ.ಹೀಗಿರುವಾಗ ಬ್ರಾಹ್ಮಣ, ಅಬ್ರಾಹ್ಮಣ,ಆ ಜಾತಿ,ಈ ಜಾತಿ ಎಂಬ ಭೇದವೇಕೆ!ಇದರಲ್ಲಿ ಜನ್ಮಾಧರಿತ ಶ್ರೇಷ್ಠತೆ ಎಲ್ಲಿ ಬರುತ್ತದೆ "ಎಂದು ರವಿದಾಸರು ಪ್ರಶ್ನಿಸುತ್ತಾರೆ.

"ಜನ್ಮದಿಂದ ಯಾವ ವ್ಯಕ್ತಿಯೂ ನೀಚನಾಗಲಾರ ಕೇವಲ ಕೆಟ್ಟ ಕೆಲಸಗಳಿಂದ ಮನುಷ್ಯ ನೀಚನಾಗುತ್ತಾನೆ " ಎಂದು ಸಂತ ರವಿದಾಸರು ಹೇಳುತ್ತಾರೆ. ಜಾತಿಯ ಗರ್ವವನ್ನು ಬಿಟ್ಟು ಮನುಷ್ಯ ರಾಗಲು ಯತ್ನಿಸಬೇಕೆಂದು ಅವರು ಹೇಳುತ್ತಾರೆ.

ಸಂತ ರವಿದಾಸರು ನಿಜ ಅರ್ಥದ ಧರ್ಮ ನಿರಪೇಕ್ಷ ವಾದಿಯಾಗಿದ್ದರು.ಹಿಂದು,ಮುಸಲ್ಮಾನ ರನ್ನು ಸಮಾನವಾಗಿ ಕಾಣುತ್ತಿದ್ದರು."ಹಿಂದು – ಮುಸಲ್ಮಾನರು ಸ್ನೇಹಿತರಾಗಿರಬೇಕು "ಎಂದು ತಮ್ಮ ಒಂದು ದೊಹಾದಲ್ಲಿ ಹೇಳುತ್ತಾರೆ.

ಸಂತ ರವಿದಾಸರು ತಮ್ಮ ಇನ್ನೊಂದು ದೊಹಾದಲ್ಲಿ "ಯಾರನ್ನು ರಾಮ ಎನ್ನುತ್ತೇವೆಯೋ ಅವನೇ ರಹಿಮನೂ ಆಗಿದ್ದಾನೆ .ಹಾಗೇ ರಾಮ ,ರಹಿಮರು ಒಂದೇ ಎಂದಾದರೆ ಕಾಬಾ ,ಕಾಶಿ ,ಮಂದಿರ, ಮಸೀದಿಗಳು ಒಂದೆ" ಎಂದು ರವಿದಾಸರು ಹೇಳಿದ್ದಾರೆ.

ಆ ಕಾಲದಲ್ಲಿ ಸಮತಾವಾದಿ ಸಂತರೆಂದೇ ಹೆಸರಾಗಿದ್ದ ಗುರು ರವಿದಾಸರು ಹಿಂದೂ_ ಮುಸಲ್ಮಾನ, ಬ್ರಾಹ್ಮಣ_ ಶೂದ್ರ ಎಂದು ಭೇದ ಮಾಡದೇ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದರು. ಮನುಷ್ಯ ಸಮಾನತೆಯ ಸಮಾಜ ಅವರ ಕನಸಾಗಿತ್ತು. ಅಸ್ಪ್ರಶ್ಯ ಸಮುದಾಯದಲ್ಲಿ ಜನಿಸಿದರೂ ಸಂತ ರವಿದಾಸರು ಜಾತಿಯ ಸಂಕುಚಿತ ಎಲ್ಲೆಗಳನ್ನು ಮೀರಿ ಬೆಳೆದರು.ಚಿತ್ತೋಡ ರಾಜಮನೆತನದ ರಾಣಿ ಝಾಲಿ,ರಾಣಿ ಮೀರಾಬಾಯಿ,ದಿಲ್ಲಿಯ ರಾಜ ಸಿಕಂದರ ಶಹಾ ಲೋಧಿ ಹೀಗೆ ಜಾತಿ ಮತ ವೆನ್ನದೇ ಆಸ್ತಿ,ಅಂತಸ್ತಿನ ಗೊಡವೆ ಇಲ್ಲದೇ ಸಾವಿರಾರು ಜನ ರವಿದಾಸ ರ ಶಿಷ್ಯತ್ವವನ್ನು ಸ್ವೀಕರಿಸಿದರು.

ಗುರು ರವಿದಾಸರು ಒಬ್ಬ ಸಮಾಜ ಸುಧಾರಕ ಸಂತರಾಗಿದ್ದರು.ಅವರಿಗೆ ಭಕ್ತಿಗಿಂತಲೂ ಸಮಾಜ ಸುಧಾರಣೆ ಮುಖ್ಯ ವೆನಿಸಿತ್ತು.ಭಕ್ತಿ ಮಾರ್ಗದ ಮೂಲಕ ಸಮಾಜ ಬದಲಾವಣೆ ಯ ಆಶಯವನ್ನು ಅವರು ಹೊಂದಿದ್ದರು.ಅಸ್ಪ್ರಶ್ಯ ಚಮ್ಮಾರ ಸಮುದಾಯದಿಂದ ಬಂದಿದ್ದ ರವಿದಾಸರಿಗೆ ದೇವಾಲಯದ ಒಳಗೆ ಹೋಗಿ ಪೂಜೆ ಸಲ್ಲಿಸುವದು ಸಾಧ್ಯವಿರಲಿಲ್ಲ. ಹೀಗಾಗಿ ರಾಮ ಸೀತೆಯರ ಮಣ್ಣಿನ ಮೂರ್ತಿಗಳನ್ನು ಮಾಡಿ ಅವುಗಳನ್ನೇ ಪೂಜಿಸಲು ಆರಂಭಿಸಿದರು.ನಿತ್ಯವೂ ಚಪ್ಪಲಿ ಹೊಲಿದು ಜೀವನ ಸಾಗಿಸುತ್ತಿದ್ದರು. ಮೂಢ ನಂಬಿಕೆ ,ಕಂದಾಚಾರಗಳನ್ನು ಅವರು ವಿರೋಧಿಸುತ್ತಿದ್ದರು.

ಈ ಬಾರಿ ಉತ್ತರ ಪ್ರದೇಶದ ವಿಧಾನ ಸಭಾ ಚುನಾವಣೆ ಇರುವದರಿಂದ ಬಿಜೆಪಿ ಗೆ ಮತ್ತೆ ಸಂತ ರವಿದಾಸರ ನೆನಪಾಗಿದೆ.ಜಾತಿ ಪದ್ದತಿ, ಅಸ್ಪ್ರಶ್ಯತೆ,ಲಿಂಗ ತಾರತಮ್ಯದ ವಿರುದ್ಧ ಬದುಕಿನುದ್ದಕ್ಕೂ ಹೋರಾಡಿದ ಸಂತ ರವಿದಾಸ ಅವರಿಗೆ ಉತ್ತರ ಪ್ರದೇಶ ಮತ್ತು ಪಂಜಾಬ ರಾಜ್ಯಗಳಲ್ಲಿ ಲಕ್ಷಾಂತರ ಅನುಯಾಯಿಗಳಿದ್ದಾರೆ.ಪ್ರತಿವರ್ಷ ಮಾಘ ಪೂರ್ಣಿಮೆಯ ದಿನದಂದು ಅವರೆಲ್ಲರೂ ರವಿದಾಸ ಜಯಂತಿ ದಿನ ಅವರ ಜನ್ಮಸ್ಥಳ ವಾರಣಾಸಿಗೆ ಬರುತ್ತಾರೆ.ಈ ಬಾರಿ ಓಟಿಗಾಗಿ ಆದಿತ್ಯನಾಥ ಸೇರಿದಂತೆ ಎಲ್ಲಾ ರಾಜಕಾರಣಿ ಗಳು ರವಿದಾಸರ ಜನ್ಮಸ್ಥಳಕ್ಕೆ ಬಂದು ಅವರ ನಾಮ ಸ್ಮರಣೆ ಮಾಡಿದರು.ಸಿಕಂದರ ಲೋದಿ ಕಟ್ಟಿಸಿದ ರವಿದಾಸರ ದೇವಾಲಯವನ್ನು ಕೆಡವಿದವರೂ ಅವರನ್ನು ಹಾಡಿ ಹೊಗಳಿದರು. 1511 ರಲ್ಲಿ ದಿಲ್ಲಿಯ ಮುಸ್ಲಿಂ ದೊರೆ ಸಿಕಂದರ ಶಹಾ ಲೋಧಿ ಗುರು ರವಿದಾಸರ ಭವ್ಯ ದೇವಾಲಯವನ್ನು ಕಟ್ಟಿಸಿದ.2019 ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಈ ದೇಗುಲವನ್ನು ನೆಲಸಮಗೊಳಿಸಿದರು.ಆಗ ಉತ್ತರ ಭಾರತದ ಲ್ಲಿ ಬಹುದೊಡ್ಡ ವಿವಾದ ಉಂಟಾಗಿತ್ತು.

ಕರ್ನಾಟಕದಲ್ಲಿ ಬಸವಣ್ಣನವರು,ಮಹಾರಾಷ್ಟ್ರದಲ್ಲಿ ಶಿವಾಜಿ, ಹೀಗೆ ಚುನಾವಣಾ ರಾಜಕೀಯಕ್ಕೆ ಇತಿಹಾಸದ ಮಹಾಪುರುಷರ ಹೆಸರನ್ನು ಬಳಸಿಕೊಳ್ಳುವದು ಸಾಮಾನ್ಯವಾಗಿದೆ.

ಬದುಕಿದಾಗ ಚಿತ್ರಹಿಂಸೆ ನೀಡಿ ಕೊಲ್ಲುವದು ಕೊಂದ ಮೇಲೆ ಪೂಜೆ,ಅರ್ಚನೆ ಮಾಡಿ ಅಲ್ಲೊಂದು ಮಂದಿರ ಕಟ್ಟಿ ದಂಧೆ ಆರಂಭಿಸುವದು ನಮ್ಮ ನೆಲದ ಸಂಪ್ರದಾಯ.ಸಂತ ರವಿದಾಸರಿಗೂ ಕೊನೆಗೆ ಎಲ್ಲ ಸಮಾಜ ಸುಧಾರಕರಿಗಾದ ದುರಂತ ಅಂತ್ಯವೇ ಆಯಿತು.ಪುರೋಹಿತಶಾಹಿಗಳು ರಜಪೂತ ಅರಸರಿಗೆ ಕುಮ್ಮಕ್ಕು ನೀಡಿ ಸಂತ ರವಿದಾಸ ರನ್ನು ಖಡ್ಗದಿಂದ ಕತ್ತರಿಸಿ ಹಾಕುವಂತೆ ಮಾಡಿದರು ಎಂಬುದು. ಇತಿಹಾಸಕಾರ ವಿಜಯಕುಮಾರ ತ್ರಿಶರಣ ಅಭಿಪ್ರಾಯ ವಾಗಿದೆ.ರಾಜ ಮಹಲಿನಲ್ಲಿ ಸಂತ ರವಿದಾಸರನ್ನು ಕೊಂದು ಹಾಕಿದ ನಂತರ ಝಾಲಿ ಬಾಯಿ ರಾಣಿ ಅವರ ಸ್ಮಾರಕ ಕಟ್ಟಿಸಿದರು .ಇದನ್ನು "ರವಿದಾಸ ಕಿ ಛತರಿ" ಎಂದು ಕರೆಯಲಾಗುತ್ತದೆ. ಬುದ್ಧ,ಬಸವಣ್ಣ,ಬಾಬಾಸಾಹೇಬರು ಬಯಸಿದ ಸಮಾನತೆಯ ಸಮಾಜವನ್ನು ಕಟ್ಟಲು ಶ್ರಮಿಸಬೇಕಾದ ಯುವ ಪೀಳಿಗೆಯ ದಾರಿ ಈಗ ಬೇರೆಯಾಗಿದೆ.ಭಾರತದ ಅನೇಕ ಸಾಮಾಜಿಕ ಸುಧಾರಣೆಗಳನ್ನು ವಿಫಲಗೊಳಿಸಿದವರು ಈ ಯುವಕರನ್ನು ದಾರಿ ತಪ್ಪಿಸಿದ್ದಾರೆ.ಆದರೆ ಪರಿಸ್ಥಿತಿ ಹೀಗೇ ಇರುವುದಿಲ್ಲ .ಮತ್ತೆ ಬದಲಾವಣೆಯ ಚಲನೆ ಆರಂಭವಾಗುತ್ತದೆ.ಅದಕ್ಕಾಗಿ ಕಾಯಬೇಕಷ್ಟೆ.

---

# ಈಶ X ಶಿವ+ಸಿದ್ದ = 0
## ಕಾಂಗ್ರೆಸ್ ಸಾಧಿಸಿದ್ದು ಶೂನ್ಯ





● 4ನೇ ಪುಟದಿಂದ...

ಹೀಗಾಗಿ ಕಲಾಪ ಕೋಲಾಹಲದಲ್ಲೇ ಮುಗಿದು ಮತ್ತೊಂದು ಕರಾಳ ಅಧ್ಯಾಯ ತೆರೆಯಿತು. ವಿಧಾನ ಪರಿಷತ್ತಿನಲ್ಲಿಯೂ ಇಂತಹ ಕೋಲಾಹಲದ ಪರಿಸ್ಥಿತಿ ಇತ್ತು. ಸೋಮವಾರ ವಿಧಾನ ಸಭೆಯಲ್ಲಿ ಅಂಗೀಕಾರವಾಗಿದ್ದ ಮಸೂದೆಗಳಿಗೆ ಗದ್ದಲದ ನಡುವೆಯೇ ಒಪ್ಪಿಗೆ ಪಡೆಯಲಾಯಿತು. ನಂತರ ಮುಂದಕ್ಕೆ ಹೋಗಿ ಹೊಸ ಕರಾಳ ಇತಿಹಾಸ ಬರೆಯಿತು. ಈ ಅಧಿವೇಶನದ ವಿಶೇಷವೆಂದರೆ ಯಾವುದೇ ಚರ್ಚೆ ಇಲ್ಲದೆ ಸಚಿವರು, ಶಾಸಕಕರ ಸಂಬಳ, ಭತ್ಯೆಯನ್ನು ಶೇಕಡಾ 50ರಷ್ಟು ಪ್ರಮಾಣದಲ್ಲಿ ಹೆಚ್ಚಿಸಿಕೊಂಡಿರುವುದು.

### ಅಧಿವೇಶನಕ್ಕೆ ಖರ್ಚಾಗಿದ್ದು ಎಷ್ಟು?

ಪ್ರತಿ ದಿನ ಅಧಿವೇಶನ ನಡೆಸಲು ತಗಲುವ ಒಟ್ಟು ವೆಚ್ಚ 82 ಲಕ್ಷ ರೂ.ಇದರಲ್ಲಿ ವಿಧಾನಸಭೆಯ 224 ಮತ್ತು ವಿಧಾನಪರಿಷತ್‌ನ 75 ಸದಸ್ಯರು ಮತ್ತು ಸಿಬ್ಬಂದಿಗಳು ಮಾರ್ಷಲ್‌ಗಳ ಭತ್ಯೆಯೇ ದಿನಕ್ಕೆ ಸುರಿ ಮುಮಾರು 29 ಲಕ್ಷ ರೂ ತಗಲುತ್ತದೆ ಇತರೆ ವೆಚ್ಚ ಒಟ್ಟು 10 ಲಕ್ಷ ರೂ ಖರ್ಚುಮಾಡಲಾಗುತ್ತದೆ ಒಟ್ಟಾರೆಯಾಗಿ ಪ್ರತಿ ದಿನ ಒಂದು ಕೋಟಿಯಷ್ಟು ಹಣ ವೆಚ್ಚವಾಗುತ್ತದೆ ಇದೆಲ್ಲವೂ ಸಾರ್ವಜನಿಕರ ತೆರಿಗೆ ಹಣ ಎನ್ನುವುದು ವಿಶೇಷ. ವಿಧಾನ ಮಂಡಲ ಅಧಿವೇಶನದಲ್ಲಿ ಸಾರ್ವಜನಿಕರ ಸಮಸ್ಯೆ ಕುರಿತು ಚರ್ಚೆ ಮಾಡಬೇಕಾದ ಈ ರಾಜಕೀಯ ನಾಯಕರು ಕೇವಲ ವ್ಯಯಕ್ತಿಕ ಮತ್ತು ಪ್ರತಿಷ್ಠೆಗೆ ಕಲಾಪಗಳನ್ನು ನುಂಗಿ ಹಾಕಿ ಸಾರ್ವಜನಿಕರ ಹಣವನ್ನು ಪೋಲು ಮಾಡುತ್ತಿದೆ . ಈಶ್ವರಪ್ಪ ಹೇಳಿಕೆ ಬಗ್ಗ ಪ್ರತಿಭಟನೆ ಮಾಡಲು ಕಾಂಗ್ರೆಸ್‌ಗೆ ಹೊರಗಡೆ ಸ್ಥಳವಕಾಶವಿದೆ . ಹೋರಾಟಗಳು ನಡೆಸಲಿ ಆದರೆ ಎರಡು ವಾರ ನಡೆಯಬೇಕಿದ್ದ ಈ ಸುಗಮ ಕಲಾಪಕ್ಕೆ ಈ ನೆಪ ಹೊಟ್ಟಿ ಪ್ರತಿಭಟನೆ ಮೂಲಕ ಇಡೀ ಕಲಾಪವನ್ನೇ ನುಂಗಿ ಹಾಕುವ ಮೂಲಕ ಜನಪ್ರತಿನಿಧಿಗಳು ಜನರಿಗೆ ದ್ರೋಹವನ್ನು ಬಗೆದಿದ್ದಾರೆ.

**ಇಬ್ಬರ ಜಗಳ ಮೂರನೆಯವರಿಗೆ ಲಾಭ ಎಂಬಂತಿದೆ ರಾಜ್ಯದ ಮುಂದಿನ ಸಿಎಂ ಯಾರೆಂಬ ಚರ್ಚೆಯ ನಿರೀಕ್ಷಿತ ಫಲಿತ. ಡಿಕೆ ಶಿವಕುಮಾರ್ ಶತಾಯಗತಾಯ ಸಿಎಂ ಆಗುವ ಓಟ ಶುರುಮಾಡಿದ್ದಾರೆ. ಅವರನ್ನು ತಡೆದು ತಾವು ಮತ್ತೆ ಪೀಠಾಧಿಕಾರಿಯಾಗುವ ಛಲದಲ್ಲಿ ಸಿದ್ದರಾಮಯ್ಯ ತಂತ್ರ ಹೆಣೆಯುತ್ತಿದ್ದಾರೆ. ಇದೀಗ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾಗಿರುವ ಬಿಕೆ ಹರಿಪ್ರಸಾದ್ ಹೆಸರೂ ಓಡುತ್ತಿದೆ. ದಿಲ್ಲಿ ಹೈಕಮಾಂಡ್‌ನ ಮನವೊಲಿಕೆ ಎಂಬ ಚಾಲಾಕಿ ರಾಜಕೀಯದಲ್ಲಿ ಹರಿಪ್ರಸಾದ್ ಈ ಇಬ್ಬರಿಗಿಂತ ಮುಂದಿರುವುದು ಭವಿಷ್ಯದ ರಾಜಕೀಯವನ್ನು ಉಲ್ಟಾಪಲ್ಟಾ ಮಾಡಬಹುದೇ...?**

# ಕುತೂಹಲದ ಕದನ ಕಾರಣ

ರಾಜಸೂತ್ರ

ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು



ಕೈಲಿರುವ ಅಧಿಕಾರವನ್ನು ಹಸ್ತಾಂತರಿಸಲು ರಾಜ್ಯ ಬಿಜೆಪಿ ಸಿದ್ಧವಾಗಿರುವುದನ್ನು ಅದರ ಕಾರ್ಯವೈಖರಿಯೇ ಹೇಳುತ್ತಿದೆ. ಬರಲಿರುವ ವಿಧಾನ ಸಭಾ ಚುನಾವಣೆಯಲ್ಲಿ 140– 150 ಸೀಟು ಗೆಲ್ಲುವ ಮಾತನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೊರತುಪಡಿಸಿ ಬೇರೆ ಯಾವೊಬ್ಬ ಬಿಜೆಪಿ ನಾಯಕರೂ ಆಡುತ್ತಿಲ್ಲ. ಇಳಿವಯಸ್ಸಿನಲ್ಲಿರುವ ಯಡಿಯೂರಪ್ಪನವರಿಗೆ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕೆಂಬ ಹಂಬಲದ ಒತ್ತಡ ಹೆಚ್ಚುವುದಕ್ಕೆ ಅವರದೆ ಆದ ಕಾರಣವಿದೆ. ಆದರೆ ಆ ಪಕ್ಷದ ಅನೇಕ ಮುಖಂಡರಿಗೆ ಬಿಜೆಪಿ ಅಕಸ್ಮಾತ್ ಅಧಿಕಾರಕ್ಕೆ ಬರುವಂತಾದರೆ ಅದರ ಶ್ರೇಯಸ್ಸು ಯಡ್ಡಿ ಕಿರೀಟದ ಭಾಗವಾಗುವುದು ಬೇಕಾಗಿಲ್ಲ. ಪಕ್ಷ ಅಧಿಕಾರಕ್ಕೆ ಬಾರದಿದ್ದರೂ ಚಿಂತಿಲ್ಲ ಯಡಿಯೂರಪ್ಪ ಕೈ ಮಾತ್ರ ಮತ್ತೆ ಮೇಲುಗೈ ಆಗಬಾರದು ಎಂಬ ಸಂಕಲ್ಪದಲ್ಲಿ ಹಲವು ನಾಯಕರುಳ್ಳ ಒಂದು ತಂಡ ಹಗಲಿರುಳೂ ಶ್ರಮಿಸುತ್ತಿದೆ. ಜನಕ್ಕೆ ಬಿಜೆಪಿ ಆಡಳಿತ ಸಾಕಾಗಿದೆ. ಹಾಗಂತ ಪರ್ಯಾಯವಾದರೂ ಕರ್ನಾಟಕದಲ್ಲಿ ಇದೆಯೆ ಎಂದರೆ ಸಮರ್ಪಕ ಉತ್ತರ ತೋಚುತ್ತಿಲ್ಲ. ಮುಖ್ಯ ವಿರೋಧ ಪಕ್ಷ ಕಾಂಗ್ರೆಸ್ ಒಳಜಗಳದ ಕೊಳಕು ಕೂಪದಿಂದ ಹೊರಬರುವ ಯಾವುದೆ ಸೂಚನೆ ತೋರುತ್ತಿಲ್ಲ. ಮತ್ತೆ ಅಧಿಕಾರಕ್ಕೆ ಬಿಜೆಪಿಯೇ ಮರಳುವುದಕ್ಕೆ ಇದು ನೆರವಾಗಬಹುದೆ? ಈಗಲೇ ಭವಿಷ್ಯ ನುಡಿಯುವುದು ಕಷ್ಟ.



ಹೇಳಬಹುದಾದ ಅಂಶವೆಂದರೆ ಕಾಂಗ್ರೆಸ್ ಮುಖಂಡರ ಜಗಳದ ಫಲ ಬಿಜೆಪಿಗೆ ವರವಾಗುವ ಎಲ್ಲ ಸಾಧ್ಯತೆಗಳೂ ಇವೆ ಎನ್ನುವುದನ್ನು ಮಾತ್ರ. ಇದಕ್ಕೆ ಪೂರಕವಾಗಿ ಕೆಲವು ಸಾಂದರ್ಭಿಕ ಸಾಕ್ಷ್ಯಗಳನ್ನು ನೋಡುತ್ತ ಸಾಗೋಣ. ಹತ್ತಾರು ಹಗರಣಗಳನ್ನು ನೆತ್ತಿಯ ಮೇಲೆ ಹೊತ್ತುಕೊಂಡು ತಿರುಗುತ್ತಿರುವ ಡಿ.ಕೆ. ಶಿವಕುಮಾರ್ ಅವರನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಅವರ ಹತ್ತಿರ ಹೇರಳ ಹಣವಿದೆ ಎನ್ನುವುದೇ ಹೈಕಮಾಂಡ್ ತೀರ್ಮಾನಕ್ಕೆ ಕಾರಣ ಎನ್ನುವುದು ಆ ಪಕ್ಷದ ಅನೇಕರ ಅಭಿಮತ. ತಮ್ಮ ತೋಳ್ಬಲ ಮತ್ತು ಧನ ಬಲದಿಂದ ಪಕ್ಷವನ್ನು ಡಿಕೆಶಿ ಅಧಿಕಾರಕ್ಕೆ ತರುತ್ತಾರೆ ಎನ್ನುವುದು ವರಿಷ್ಠರ ತೀರ್ಮಾನ ಎನ್ನುವುದು ಒಳ ವರ್ತಮಾನ. ಹೈಕಮಾಂಡು ಕೆಲವು ದಿವಸಗಳ ಹಿಂದೆ ಎಂ.ಬಿ. ಪಾಟೀಲರನ್ನು ಪ್ರಚಾರ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದು ಅವರಲ್ಲಿರುವ ಸಂಪತ್ತೇ ಅವರ ನೇಮಕಾತಿಗೆ ಕಾರಣ ಎನ್ನುವುದು ಕೂಡಾ ಒಳ ವರ್ತಮಾನವೇ. 2018ರಲ್ಲಿ ರಾಜ್ಯ ವಿಧಾನ ಸಭೆಗೆ ಚುನಾವಣೆ ನಡೆದಾಗ ಸೋನಿಯಾ ಗಾಂಧಿ ಕರ್ನಾಟಕದಲ್ಲಿ ಪ್ರಚಾರ ಮಾಡಿದ್ದು ಪಾಟೀಲರ ಕ್ಷೇತ್ರದಲ್ಲಿ ಮಾತ್ರ ಎನ್ನುವುದನ್ನು ಮರೆಯಬಾರದು. ಉಳಿದ ಅಭ್ಯರ್ಥಿಗಳು ಗೆಲ್ಲುತ್ತಾರೋ ಸೋಲುತ್ತಾರೋ ಎನ್ನುವುದು ಸೋನಿಯಾರಿಗೆ ಮುಖ್ಯವಾಗಿರಲಿಲ್ಲ; ಪಾಟೀಲರು ಗೆಲ್ಲುವುದು ಮಾತ್ರವೇ ಅವರಿಗೆ ಮುಖ್ಯವಾಗಿತ್ತು!



ಕೆಪಿಸಿಸಿ ಅಧ್ಯಕ್ಷರಾಗಿ ಡಿಕೆಶಿ ಅಧಿಕಾರಕ್ಕೆ ಬಂದು ಹತ್ತಿರ ಹತ್ತಿರ ಎರಡು ವರ್ಷ. ಐವರು ಕಾರ್ಯಾಧ್ಯಕ್ಷರು, ಒಬ್ಬರು ಪ್ರಚಾರ ಸಮಿತಿ ಅಧ್ಯಕ್ಷರನ್ನು ನೇಮಿಸಿರುವ ಹೈಕಮಾಂಡ್ ಜಿಲ್ಲಾ ಅಧ್ಯಕ್ಷರೂ ಸೇರಿದಂತೆ ಪದಾಧಿಕಾರಿಗಳ ನೇಮಕಕ್ಕೆ ಇನ್ನೂ ಹಸಿರು ನಿಶಾನೆ ತೋರಿಲ್ಲ. ಪದಾಧಿಕಾರಿಗಳನ್ನು ನೇಮಕ ಮಾಡುವುದು ಕಾರ್ಯಾಧ್ಯಕ್ಷರನ್ನು ನೇಮಿಸಿದಷ್ಟು ಸುಲಭವಲ್ಲ ಎನ್ನುವುದು ಹೈಕಮಾಂಡ್‌ಗೆ ಮನವರಿಕೆಯಾಗಿದೆ. ಈ ವಿಚಾರ ಹೈಕಮಾಂಡ್‌ನ ತಲೆಬಿಸಿಯನ್ನು ಕ್ಷಣಮಾತ್ರಕ್ಕೂ ತಂಪಾಗದ ರೀತಿಯಲ್ಲಿ ಹೆಚ್ಚಿಸುತ್ತಿದೆ. ಕೆಪಿಸಿಸಿ ಅಧ್ಯಕ್ಷರಾಗಿ ಡಿಕೆಶಿ ತಮ್ಮದೆ ಆದೊಂದು ಪದಾಧಿಕಾರಿಗಳ ಪಟ್ಟಿಯನ್ನು ವರಿಷ್ಠರ ಸಮ್ಮತಿ ಕೋರಿ ಕಳಿಸಿದ್ದಾರೆ. ಈ ಪಟ್ಟಿಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರೂ ಆಗಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸುತರಾಂ ಒಪ್ಪಿಲ್ಲ. ಪ್ರತಿಯಾಗಿ ತಮ್ಮದೇ ಆದೊಂದು ಪ್ರತ್ಯೇಕ ಪಟ್ಟಿಯನ್ನು ದೆಹಲಿಗೆ ರವಾನಿಸಿದ್ದಾರೆ. ಇಬ್ಬರೂ ಕುಳಿತು ಚರ್ಚಿಸಿ ಉಭಯ ಸಮ್ಮತ ಪಟ್ಟಿ ಕಳಿಸುವಂತೆ ಹೈಕಮಾಂಡ್ ಖಡಕ್ ಸೂಚನೆ ನೀಡಿದ್ದರೂ ಸಿದ್ದು ಮತ್ತು ಡಿಕೆಶಿ ನಡುವೆ ಗೋಡೆಯಂತೆ ನಿಂತಿರುವ ಅನುಮಾನದ ಕಾರಣವಾಗಿ ಫಲಿತಾಂಶ ಶುಭ ಸೂಚಕವಾಗಿಲ್ಲ.



ರಾಮಲಿಂಗಾರೆಡ್ಡಿ,ಈಶ್ವರ ಖಂಡ್ರೆ, ಸಲೀಂ ಅಹಮದ್, ಸತೀಶ ಜಾರಕಿಹೊಳಿ, ಧ್ರುವನಾರಾಯಣ... ಹೀಗೆ ಐವರನ್ನು ಕಾರ್ಯಾಧ್ಯಕ್ಷರನ್ನಾಗಿ ಮತ್ತು ಎಂ.ಬಿ.ಪಾಟೀಲರನ್ನು ಪ್ರಚಾರ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಿರುವ ಹೈಕಮಾಂಡ್ ಕೆಪಿಸಿಸಿ ಪದಾಧಿಕಾರಿಗಳನ್ನು ನೇಮಿಸುವುದಕ್ಕೆ ಮಾತ್ರ ಇನ್ನೂ ಗಟ್ಟಿ ಮನಸ್ಸು ಮಾಡಿಲ್ಲ. ಮಾತ್ರವಲ್ಲ ಒಬ್ಬರಾದರೂ ಮಹಿಳೆಗೆ ಕಾರ್ಯಾಧ್ಯಕ್ಷ ಸ್ಥಾನ ನೀಡುವ ಔದಾರ್ಯವನ್ನೂ ತೋರಿಲ್ಲ. ಇದು ಆ ಪಕ್ಷದ ಬಹುತೇಕ ಮಹಿಳಾ ನಾಯಕರ ಒಳ ಮುನಿಸಿಗೆ ಕಾರಣವಾಗಿರುವುದು ಕೆಪಿಸಿಸಿ ಅಧ್ಯಕ್ಷರ ಗಮನಕ್ಕೂ ಬಂದಿದೆ. ಮುಂದಿನ ತಿಂಗಳ ಮಧ್ಯ ಭಾಗದಲ್ಲಿ ಕರ್ನಾಟಕದ ಮುಖಂಡರ ಸಭೆಯನ್ನು ದೆಹಲಿಯಲ್ಲಿ ಹೈಕಮಾಂಡ್ ಕರೆದಿದ್ದು ಒಳ ಜಗಳದಲ್ಲಿ ಮುಳುಗಿರುವ ನಾಯಕರ ನಡುವೆ ತೇಪೆ ಹಚ್ಚುವ ಕೆಲಸ ನಡೆದೀತೆಂಬ ನಿರೀಕ್ಷೆ ಸಣ್ಣ ಪ್ರಮಾಣದಲ್ಲಾದರೂ ಗರಿಗೆದರಿದೆ. ಮಾರ್ಚ್ ಹತ್ತರಂದು ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯ ವಿಧಾನ ಸಭೆಗೆ ನಡೆದಿರುವ /ನಡೆಯುತ್ತಿರುವ ಚುನಾವಣಾ ಫಲಿತಾಂಶ ಹೊರಬೀಳಲಿದೆ. ಅದರ ತರುವಾಯ ಉದ್ದೇಶಿತ ಈ ಸಭೆ ನಡೆಯುವ ಸಾಧ್ಯತೆ ಇದೆ. ಮನಸ್ಸು ಬಂದಾಗಲೆಲ್ಲ ವಿದೇಶಕ್ಕೋ ಮತ್ತೆಲ್ಲಿಗೋ ಯಾರಿಗೂ ಸುಳಿವು ಕೊಡದೆ ಹೋಗಿ ಅದೃಶ್ಯವಾಗುವ "ಕಾಣದಂತೆ ಮಾಯವಾದನು" ಖಯಾಲಿಯ ರಾಹುಲ್ ಗಾಂಧಿ ಸಮಯ ಬಿಡುವನ್ನು ಆಧರಿಸಿ ಸಭೆ ನಡೆಯಲಿದೆ. ಹಿಂದೆ ಆರ್.ವಿ.ದೇಶಪಾಂಡೆ ಕೆಪಿಸಿಸಿ ಅಧ್ಯಕ್ಷರಾಗಿದ್ದ ಸಮಯದಲ್ಲಿ ಡಿಕೆಶಿ ಕಾರ್ಯಾಧ್ಯಕ್ಷರಾಗಿದ್ದರು. ಕಾರ್ಯಾಧ್ಯಕ್ಷರು ಎಷ್ಟೆಲ್ಲ ಬಗೆಯಲ್ಲಿ ಅಧ್ಯಕ್ಷರನ್ನು ಗೋಳು ಹೊಯ್ದುಕೊಂಡರೆನ್ನುವುದನ್ನು ಬೇರೆಯವರು ಮರೆತಿರಬಹುದು ಆದರೆ ದೇಶಪಾಂಡೆ ಮಾತ್ರ ಮರೆತಿರಲಾರರು. ಈಗ ಅದೇ ಸ್ಥಿತಿ ಡಿಕೆಶಿಗೆ ಎದುರಾಗಿದೆ. ಕಾರ್ಯಾಧ್ಯಕ್ಷರನ್ನು ಜೊತೆಗೆ ಕರೆದೊಯ್ಯುವುದು ಎಂದರೆ ಕಲ್ಲನ್ನು ಕಾಲಿಗೆ ಕಟ್ಟಿಕೊಂಡು ಈಜಿದಂತೆ. ಡಿಕೆಶಿ ಒಂದು ಕಾಲದಲ್ಲಿ ದೇಶಪಾಂಡೆ ಪಾಲಿಗೆ ಕಲ್ಲಾಗಿದ್ದವರು. ಈಗ ಅವರ ಕಾಲಿಗೆ ಐದು ಕಲ್ಲುಗಳು ಆತುಕೊಂಡಿವೆ. ಐವರು ಕಾರ್ಯಾಧ್ಯಕ್ಷರಲ್ಲಿ ಕೆಲವರದು ತಂಟೆ ತಕರಾರಿಲ್ಲ. ಅಧ್ಯಕ್ಷರ ಜೊತೆ ಕ್ಯಾಮೆರಾದಲ್ಲಿ ಪೋಸು ಕೊಡುವುದರಲ್ಲಿ ಅವರ ಪೈಪೋಟಿ ನಡೆಯುತ್ತಿರುತ್ತದೆ. ಓಡೋಡುತ್ತ ಬಂದು ಕ್ಯಾಮೆರಾಕ್ಕೆ ಮುಖ ಒಡ್ಡುವ ಅವರನ್ನು ನೋಡುವುದು ನಿಜಕ್ಕೂ ಬ್ರಹ್ಮಾನಂದ! ಆದರೆ ಇನ್ನು ಕೆಲವರು ಅಷ್ಟೆಲ್ಲ ಸುಲಭದಲ್ಲಿ ಡಿಕೆಶಿ ಹೇಳಿದ್ದಕ್ಕೆಲ್ಲ ಗೋಣು ಆಡಿಸುವವರಲ್ಲ.

ಈ ಮಧ್ಯೆ ಬಿ.ಕೆ. ಹರಿಪ್ರಸಾದ್‌ರನ್ನು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕನನ್ನಾಗಿ ಹೈಕಮಾಂಡ್ ನೇಮಿಸಿದೆ. ಹರಿಪ್ರಸಾದ್ (ಈಡಿಗ ಸಮುದಾಯ) ಮತ್ತು ಸಿದ್ದರಾಮಯ್ಯ (ಕುರುಬ ಸಮುದಾಯ) ಇಬ್ಬರೂ ಹಿಂದುಳಿದ ವರ್ಗಕ್ಕೆ ಸೇರಿದವರು. ಪಕ್ಷದಲ್ಲಿ ಹಿಂದುಳಿದ ವರ್ಗದವರಲ್ಲದೆ ಬೇರೆ ಯಾರೂ ಅರ್ಹರಿಲ್ಲವೆ ಎನ್ನುವುದು ಕೇವಲ ಸಿ.ಎಂ. ಇಬ್ರಾಹಿಂ ವಾದ ಮಾತ್ರವಾಗಿಲ್ಲ. ಇನ್ನೂ ಹಲವರು ಆಪ್ತವಾಗಿ ಇದೇ ಅಸಮಾಧಾನವನ್ನು ಹಂಚಿಕೊಳ್ಳುತ್ತಾರೆ. ದಶಕಗಳಿಂದ ದೆಹಲಿಯಲ್ಲೇ ಬೀಡುಬಿಟ್ಟು ಹೈಕಮಾಂಡ್ ಜೊತೆ ಸೇರಿ ಸ್ಥಳೀಯ ರಾಜಕಾರಣದ ಅಸಲಿ ಪಟ್ಟುಗಳನ್ನು ಕರಗತ ಮಾಡಿಕೊಂಡಿರುವ ಹರಿಪ್ರಸಾದ್, ತಮ್ಮ ಮುಂದೆ ಬಹಳ ದೊಡ್ಡ ಗುರಿಯನ್ನು ಇಟ್ಟುಕೊಂಡಿದ್ದಾರೆ. ಇದೀಗ ನಿಯಂತ್ರಣ ಹೀನವಾಗಿ ನಡೆಯುತ್ತಿರುವ ಸಿದ್ದು ಡಿಕೆಶಿ ಜಗಳವನ್ನು ತಾವು ಹೇಗೆ ನಗದು ಮಾಡಿಕೊಳ್ಳಬಹುದೆಂಬ ಅಂದಾಜು ಲೆಕ್ಕಾಚಾರದ ಸುತ್ತ ಅವರಿಟ್ಟುಕೊಂಡಿರುವ ಗುರಿ ಗಿರಕಿ ಹೊಡೆಯುತ್ತಿದೆ. ಚುನಾವಣೆ ಬಳಿಕ ತಾವು ಮುಖ್ಯಮಂತ್ರಿ ಆಗಲೇಬೇಕೆಂಬುದು ಡಿಕೆಶಿ ಛಲ. ತಮಗೆ ಸಿದ್ದರಾಮಯ್ಯ ಅಡ್ಡಗಾಲಾಗಬಹುದೆಂಬ ಆತಂಕ ಅವರಲ್ಲಿದೆ. ಎರಡನೆ ಬಾರಿಗೆ ಸಿಎಂ ಆಗುವ ತವಕದಲ್ಲಿರುವ ಸಿದ್ದರಾಮಯ್ಯ, ಡಿಕೆಶಿ ಓಟಕ್ಕೆ ತಡೆ ಒಡ್ಡುವ ಕೆಲಸ ಶುರು ಮಾಡಿದ್ದಾರೆ ಎನ್ನಲಾಗುತ್ತಿದೆ. ಇಬ್ಬರ ಜಗಳ ಮೂರನೆಯವನಿಗೆ ಲಾಭ ತಂದೇ ತರುತ್ತದೆ ಎಂಬ ಪಂಚತಂತ್ರದ ಕಥೆಯಂತೆ ಹರಿಪ್ರಸಾದ್ ಸಿಎಂ ಸ್ಥಾನದ ಗುರಿ ಹಾಕಿಕೊಂಡಿದ್ದಾರೆ.





ದೆಹಲಿ ಮಟ್ಟದಲ್ಲಿ ಕಾಂಗ್ರೆಸ್‌ನ ಬಹುತೇಕ ಹಿರಿಯ ನಾಯಕರು ಹರಿಪ್ರಸಾದ್ ಅವರ ಖಾಸಾ ಖಾಸಾ ದೋಸ್ತುಗಳಾಗಿರುವುದು ಅವರಿಗೆ ಇರುವ ಬಹುದೊಡ್ಡ ಅಡ್ವಾಂಟೇಜು. ಇಂದಿರಾ ಗಾಂಧಿ, ರಾಜೀವ್ ಗಾಂಧಿ ಕಾಲದಿಂದ ಇವತ್ತಿನ ಸೋನಿಯಾ, ರಾಹುಲ್, ಪ್ರಿಯಾಂಕಾ ಗಾಂಧಿವರೆಗೆ ಆ ಪರಿವಾರದ ನಿಷ್ಠಾವಂತ ಕಾರ್ಯಕರ್ತ ಎಂಬ ಗರಿಮೆ ಹರಿಪ್ರಸಾದ್ ಅವರದು. ಕರ್ನಾಟಕದ ಯಾವುದೇ ಸಂಗತಿ ಹೈಕಮಾಂಡ್‌ವರೆಗೂ ಹೋದರೆ ಹರಿಪ್ರಸಾದ್ ಕೊಡುವ ಅಭಿಪ್ರಾಯಕ್ಕೆ ಹೆಚ್ಚು ತೂಕವಿದೆ. ಎಸ್.ಆರ್.ಪಾಟೀಲರ ಅವಧಿ ತರುವಾಯ ಇಬ್ರಾಹಿಂ ಸೇರಿದಂತೆ ಆ ಪಕ್ಷದ ಹಲವು ಶಾಸಕರು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನಾಕಾಂಕ್ಷಿಗಳಾಗಿ ಟವೆಲ್ ಹಾಕಿದ್ದರು. ಆದರೆ ಅದೃಷ್ಟ ಹರಿಪ್ರಸಾದ್‌ರತ್ತ ವಾಲಿತ್ತು. ಆ ಸಂದರ್ಭದಲ್ಲಿ ಸಿದ್ದರಾಮಯ್ಯ ನಿಲುವಿಗೆ ವಿರುದ್ಧವಾಗಿ ಹರಿಪ್ರಸಾದ್ ಜೊತೆ ನಿಂತಿದ್ದವರು ಡಿಕೆಶಿ. ಆದರೆ ಈಗ ಅದೇ ಡಿಕೆಶಿ ಆಕಾಂಕ್ಷೆಗೆ ಮುಳುವಾಗುವ ಸೂಚನೆ ಅದೇ ಹರಿಪ್ರಸಾದ್ ಕಡೆಯಿಂದ ಕಾಣುತ್ತಿದೆ. ಜನ ಬಿಜೆಪಿ ಬದಲಿಗೆ ಕಾಂಗ್ರೆಸ್‌ಗೆ ಓಟು ಹಾಕುವ ಮನಃಸ್ಥಿತಿಯಲ್ಲಿದ್ದರೂ ಆ ಓಟು ನಿಚ್ಚಳ ಬಹುಮತ ತರುವ ಸಾಧ್ಯತೆ ಕಡಿಮೆ. ಹಾಗಾದಲ್ಲಿ ಮತ್ತೆ ಜೆಡಿಎಸ್ ಮನೆ ಬಾಗಿಲಿಗೆ ಕಾಂಗ್ರೆಸ್ಸು ಹೋಗಬೇಕಾಗಿ ಬರಬಹುದು. ಅಂಥ ಸಂದರ್ಭದಲ್ಲಿ ಜೆಡಿಎಸ್ ನಾಯಕತ್ವ ಕೆಲವು ಷರತ್ತನ್ನು ಒಡ್ಡಬಹುದು. ಅದರಲ್ಲಿ ಮುಖ್ಯವಾದುದು ಯಾರು ಸಿಎಂ ಆಗಬೇಕೆನ್ನುವುದು. ಆಗ ತನ್ನ ಅಭ್ಯರ್ಥಿಯನ್ನು ಜೆಡಿಎಸ್ ಹೆಸರಿಸಬಹುದು. ಕಾಂಗ್ರೆಸ್‌ನಿಂದಲೇ ಆ ಸ್ಥಾನಕ್ಕೆ ಒಪ್ಪುವ ಸಂದರ್ಭ ಎದುರಾದಲ್ಲಿ ಡಿಕೆಶಿಗೆ ವಿರೋಧ ಎದುರಾಗುತ್ತದೆ. ಈ ಇಕ್ಕಟ್ಟಿನಿಂದ ಪಾರಾಗಲು ಡಿಕೆಶಿ ಹಣಿಯಲಿರುವ ತಂತ್ರ ಏನೆನ್ನುವುದು ಕೂಡಾ ಚುನಾವಣಾ ಕದನ ಕುತೂಹಲದ ಸರಕಾಗಿದೆ.



ರಾಜ್ಯದ ಯಾವ ಜಿಲ್ಲೆಯಲ್ಲಾದರೂ ಹರ್ಷನ ಕೊಲೆಂ
ಕಿಲ್ಲಿಂಗ್ ಗಳಾಗುವ ಎಲ್ಲಾ ಲಕ್ಷಣಗಳೂ ಇವೆಯಂತೆ! ಶಿವ
ಶವಯಾತ್ರೆಯ ಗಲಭೆಯನ್ನು ನಿಯಂತ್ರಿಸಲು ಶ್ರಮಿಸಿದ ಪೊ
ಒಂದೆರಡು ಹೆಣ ಬೀಳಿಸಿ ಕೋಮುಗಲಭೆಯ ಲಾಭ ಪಡೆಯ
ರಾಜಕಾರಣಿಗಳು ನೀಡುತ್ತಿರುವ ಪರಿಹಾರದ ಚೆಕ್ಕುಗಳು
ಸಮಾಧಾನಿಸಲು ಸಾಧ್ಯವೇ ಇಲ್ಲ. 'ಹರ್ಷಾ ಅಮರ್ ರ
ಕೂಗುಗಳು, ಹರ್ಷನ ಕುಟುಂಬದ ಹೆಸರಿನಲ್ಲಿ ಆನ್ಲೈನ್ ನ
ಹುತಾತ್ಮನಾಗುವ ಹುಚ್ಚು ಹಿಡಿಸಿ ಮತ್ಯಾರನ್ನೋ ಈ

# ಕೆಟ್ಟ ರಾಜ
# ಇನ್ನೆಷ್ಟು
# ಬಲಿ ಬೆ

● ಪರಶಿವ ಧನಗೂರು

ಈಗ ಸದ್ಯಕ್ಕೆ ಭಾರತದಲ್ಲಿ ಯಾವ ಧರ್ಮಗಳೂ ಅಪಾಯದಲ್ಲಿ ಇಲ್ಲ! ಮನುಷ್ಯತ್ವ ಅಪಾಯದಲ್ಲಿದೆ! ಮನುಷ್ಯರು ಕೊಲೆಯಾಗುತ್ತಿದ್ದಾರೆ! ಧರ್ಮದ ಅಫೀಮು ಕುಡಿದವರ ಕೈಯಲ್ಲಿ ನಡುಬೀದಿಯಲ್ಲಿ ಮನುಷ್ಯತ್ವ ಕೊಲೆಯಾಗುತ್ತಿದೆ! ಅಮಾಯಕರ ಸಮಾದಿಗಳ ಮೇಲೆ ಸರ್ಕಾರ ರೂಪಿಸುವ ಸಂಚು ನಡೆಸುತ್ತಿರುವ ಎಲ್ಲಾ ರಾಜಕೀಯ ಪಕ್ಷಗಳು, ಮುಗ್ಧ ಜನರ ಸಾವಿನಲ್ಲಿ ಲಾಭ ಪಡೆಯಲು ಶವಯಾತ್ರೆಯ ಮೆರವಣಿಗೆಗಳಲ್ಲಿ, ಹಿಂದೂ-ಮುಸ್ಲಿಂ ಹೆಸರಿನಲ್ಲಿ ಧರ್ಮರಾಜಕಾರಣ ಮಾಡುತ್ತಿದ್ದಾರೆ.

ಭ್ರಷ್ಟ ರಾಜಕೀಯ ಪಕ್ಷಗಳ ಪುಡಾರಿಗಳ, ನಕಲಿ ದೇಶಪ್ರೇಮಿ ಸಂಘಟನೆಗಳ ಮುಖಂಡರ ಮಾತು ಕೇಳಿಕೊಂಡು ಧರ್ಮರಕ್ಷಣೆಯ ಭ್ರಮೆಯಲ್ಲಿ ಹತ್ಯಾಕಾಂಡ ನಡೆಸಿ ಅನ್ಯ ಧರ್ಮದ ಮುಗ್ಧರನ್ನು ಕೊಂದವರು ತಾವೂ ಮತ್ತೊಂದು ದಿನ ಭಯೋತ್ಪಾದಕರ ಬಾಂಬಿಗೋ ಮತಾಂಧರ ಕೈಯಲ್ಲೋ ಬಲಿಯಾಗುವಾಗ ಯಾವ ರಾಜಕಾರಣಿಯೂ ಬಂದು ಕಾಪಾಡುವುದಿಲ್ಲವೆಂಬ ಕಟು ಸತ್ಯವನ್ನು ಅರ್ಥ ಮಾಡಿಕೊಳ್ಳದ ಹೊರತು ಈ ಹೆಣದ ರಾಜಕಾರಣ ಭಾರತದಲ್ಲಿ ನಿಲ್ಲುವುದಿಲ್ಲ! ಇನ್ನಾದರೂ ಎಲ್ಲಾ ಧರ್ಮಗಳ ಅಮಾಯಕ ಮುಗ್ಧ ಸಾಮಾನ್ಯ ಜನರು ಉದ್ರೇಕದ, ಉಗ್ರಧಾರ್ಮಿಕ, ಪ್ರಚೋದಕ ಭಾಷಣಗಳಿಗೆ ಬಲಿಯಾಗಿ ಪರಸ್ಪರ ಬಡಿದಾಡಿ ಕೊಂಡು ಸಾಯದೆ ಬದುಕು ಕಟ್ಟಿಕೊಳ್ಳಬೇಕಿದೆ. ದೇಶದ್ರೋಹಿ ಕ್ರತ್ಯಗಳನ್ನು ನಡೆಸುವ ಮತಾಂದರನ್ನು ಮಟ್ಟಹಾಕಲು, ಧಾರ್ಮಿಕ ಭಯೋತ್ಪಾದಕರ ಹುಟ್ಟನಡಗಿಸಲು ದೇಶದಲ್ಲಿ ಇರುವ ಕಾನೂನುಗಳನ್ನು ಸಮಂಜಸವಾಗಿ, ಕಟ್ಟುನಿಟ್ಟಾಗಿ ಜಾರಿಗೆ ತರಬೇಕಿದೆ.



ಭಾರತದ ತ್ರಿವರ್ಣ ಧ್ವಜವನ್ನು ಕಿತ್ತೆಸೆಯಬೇಕೆನ್ನುವವರಿಂದ, ಭಾರತವನ್ನು ಒಂದೇ ಧರ್ಮದಡಿ ತರಬೇಕು ಎನ್ನುವವರಿಂದ, ಇಂಡಿಯಾವನ್ನು ಇಸ್ಲಾಮೀಕರಣ ಮಾಡಬೇಕೆಂದು ಹೊರಟ ಉಗ್ರಗಾಮಿಗಳಿಂದ ಈ ಜಾತ್ಯತೀತ ಭಾರತವನ್ನು ಉಳಿಸಿಕೊಳ್ಳಬೇಕಿದೆ!

ಸರ್ವಧರ್ಮಗಳ ಶಾಂತಿಯ ತೋಟವಾಗಿರುವ ಭಾವೈಕ್ಯತೆಯ ಭಾರತ ಇಂದು ಕೋಮುವಾದಿ ಶಕ್ತಿಗಳ ಕೈಗೆ ಸಿಕ್ಕು, ಮತಾಂಧರ ಸಂಚಿಗೆ ನಲುಗಿ ನರಳುತ್ತಿದೆ. ಅದಕ್ಕಾಗಿಯೇ ಹೀಗೆ ಭಾರತದ ಬೀದಿಯಲ್ಲಿ ಯುವಕರ ಹೆಣಗಳು ಉರುಳುತ್ತಿವೆ. ಕೋಮುಗಲಭೆಯ ಜ್ವಾಲೆಯಲ್ಲಿ ಅಮಾಯಕರ ಮನೆಗಳು ಮನಸುಗಳು ಉರಿಯುತ್ತಿವೆ! ಈಗ ಶಿವಮೊಗ್ಗದ ಬೀದಿಯಲ್ಲಿ ಭೀಕರವಾಗಿ ಕೊಲೆಯಾಗಿ ಹೆಣವಾಗಿರುವ ಹರ್ಷ ಎಂಬ ಹುಡುಗ ಇಂತದೇ ಧಾರ್ಮಿಕ ಮೂಲಭೂತವಾದದ ಸಂಚಿಗೆ ಬಲಿಪಶುವಾದ ಹುಂಬ. ಧರ್ಮದ ಗಂಧಗಾಳಿಯೂ ಗೊತ್ತಿಲ್ಲದ ಮೂರ್ಖರು, ದೇಶಪ್ರೇಮದೆಸರಲ್ಲಿ ಸಾವನ್ನೇ ಓಟುಗಳನ್ನಾಗಿಸುವ ಪಾಖಂಡಿ ರಾಜಕಾರಣಿಗಳು ಸೇರಿಕೊಂಡು, ಇಂತಹ ತುಂಬುಕುಟುಂಬದ ಅಮಾಯಕ ಮುಗ್ಧ ಹುಡುಗರನ್ನು ಧರ್ಮದ ಹೆಸರಿನಲ್ಲಿ ಆಕರ್ಷಿಸಿ, ತಮ್ಮ ಸಿದ್ಧಾಂತಗಳತ್ತ ಸೆಳೆದು ಮತ್ತೊಂದು ಧರ್ಮದ ಜನರ ಮೇಲೆ ಛೂಬಿಟ್ಟು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಇದು ಎಲ್ಲಾ ಧರ್ಮಗಳ ನಾಯಕರೂ ಇತ್ತೀಚೆಗೆ ಮಾಡುತ್ತಿರುವ ಖಂಡನೀಯವಾದ ಕ್ರತ್ಯ. ಆ ಕಾರಣದಿಂದಲೇ ಇಂದು ಸಾವೊಂದನ್ನು ಸಂಭ್ರಮಿಸುವ ಮನಸ್ಥಿತಿ ಮನುಷ್ಯರಲ್ಲಿ ಮೊಳಕೆಯೊಡೆದು ಕುಂತಿದೆ!

## ಪ್ರಚೋದನಕಾರಿ ಹೇಳಿಕೆಗಳು

ಮದುಮಗನಾಗಬೇಕಿದ್ದ ಹರ್ಷನನ್ನು ಕಳೆದುಕೊಂಡು ಆತನ ತಂದೆ ತಾಯಿ, ಕುಟುಂಬ ಎದೆಯೊಡೆದುಕೊಂಡು ಕಣ್ಣೀರಿಡುತ್ತಿದ್ದರೇ, ಆತನ ಕೊಲೆಯನ್ನು ಸಮರ್ಥಿಸಿ ಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಪೋಸ್ಟ್ ಹಾಕಿರುವ 'ಮಂಗಳೂರು ಮುಸ್ಲಿಮ್ಸ್' ಎಂಬ ಫೇಸ್ಬುಕ್ ಪೇಜ್ ನ ಮೊಹಮ್ಮದ್ ಶಫೀಕ್ ಮತ್ತಿತರರ ವಿರುದ್ಧ ದಾಖಲಾಗಿದೆ! 2015ರಲ್ಲಿ ಮುಸ್ಲಿಂ ಧರ್ಮಗುರುಗಳಾದ ಪ್ರವಾದಿ ಮುಹಮ್ಮದ್ ರವರನ್ನು ಹರ್ಷ ನಿಂದಿಸಿದ್ದಕ್ಕೆ ಪ್ರತೀಕಾರವಾಗಿ ಆತನ ಹತ್ಯೆ ಮಾಡಲಾಗಿದೆ! ಎಂದು ಹಿಂದೂ ಹರ್ಷನ ಸಾವನ್ನು ಮುಸ್ಲಿಂ ಸಮುದಾಯದವರು ಸಮರ್ಥಿಸಿಕೊಂಡಿದ್ದಾರೆ! ಅಲ್ಲದೆ ಪ್ರವಾದಿಯವರನ್ನು ನಿಂದಿಸುವ ಯಾರನ್ನೂ ಅವರು ಎಷ್ಟೇ ಪ್ರಭಾವಿಯಾಗಿದ್ದರೂ ಬಿಡುವುದಿಲ್ಲ! ಎಂದು ಫೆಸ್ಬುಕ್ ಪೋಸ್ಟ್ ನಲ್ಲಿ ಹೇಳಲಾಗಿದೆ. ಹಿಂದೂ-ಮುಸ್ಲಿಮರ ನಡುವೆ ದ್ವೇಷವನ್ನು ಹರಡಿ ಹಿಂಸಾಚಾರಕ್ಕೆ ಪ್ರಚೋದಿಸುವ ಉದ್ದೇಶದಿಂದಲೇ ಇಂತಹ ಸ್ಟೇಟ್ಮೆಂಟ್ ಗಳನ್ನು ಪದೇ ಪದೆ




ಹಾಕಲಾಗುತ್ತಿದೆಯೆಂದು ಎಫ್.ಐ.ಆರ್. ನಲ್ಲಿ ಉಲ್ಲೇಖಿಸಲಾಗಿದೆ! ಆದರ
ಪೊಲೀಸರ ಕೈಗೆ ಸೆರೆಸಿಕ್ಕಿರುವ ಹರ್ಷನ ಕೊಲೆಗಡುಕರು ನಾವು ವೈಯಕ್ತಿ
ದ್ವೇಷದಿಂದ ಭಜರಂಗದಳದ ಕಾರ್ಯಕರ್ತ ಹರ್ಷನನ್ನು ಕೊಲೆಮಾಡಿರು
ಉಲ್ಟಾ ಸ್ಟೇಟ್ಮೆಂಟ್ ಕೊಡುತ್ತಿರುವುದಾಗಿ ಮಾಧ್ಯಮಗಳು ವರದಿ ಮಾಡು
ಕೆಲವು ಟಿವಿ ಮಾಧ್ಯಮಗಳಂತೂ ಇದಕ್ಕಾಗಿಯೇ ಕಾದುಕುಳಿತಿದ್ದಂತೆ, ಸು
ತಮಗೆ ಬೇಕಾದಂತೆ ತಿರುಚಿ ರಾಜಕಾರಣಕ್ಕೆ, ಕೋಮುಗಲಭೆಗೆ ಪರಿವರ್ತಿ
ಹರಸಾಹಸ ಪಡುತ್ತಿದ್ದಾರೆ! ಹಿಂದೂ ಸಂಘಟನೆಯ ಕಟ್ಟರ್ ಕಾರ್ಯಕರ್ತ
ಹರ್ಷಹಿಂದೂವಿನ ಕೊಲೆಗೆ ಕಾರಣ ಹಿಜಾಬ್! ಎಂಬ ಜಡ್ಜ್ ಮೆಂಟ್
ಈಗಾಗಲೇ ಟಿವಿಗಳು ನೀಡಿಯಾಗಿದೆ! ಆದರೆ ಕೊಲೆಗಡುಕರು ನಮಗ
ಹರ್ಷನಿಗೂ ಬಹಳ ಹಿಂದಿನಿಂದಲೂ ತೀರದ ವೈಯಕ್ತಿಕ ದ್ವೇಷವಿತ್ತು.
ಶಿವಮೊಗ್ಗದ ಕೋರ್ಟಿನಲ್ಲಿ ಅಟ್ಯಾಕ್-ರೀ ಅಟ್ಯಾಕುಗಳಾಗಿದ್ದವು. ನಮ್ಮನ
ಹೊಡೆಯಲು ಆತ ಹೊಂಚುಹಾಕುತಿದ್ದ. ಹೆದರಿ ನಾವೇ ಅವನನ್ನು ಹ
ಹಾಕಿದ್ದೇವೆ! ಎಂಬರ್ಥದ ಹೇಳಿಕೆಗಳನ್ನು ವಿಚಾರಣೆಯ ವೇಳೆ ಬಾಯ
ಬಿಡುತ್ತಿದ್ದಾರಂತೇ! ಶಿವಮೊಗ್ಗದ ಸೀಗೇಹಟ್ಟಿ ಬಳಿಯ ಕಾಮತ್ ಪೆಟ್ರೋ
ಬಂಕ್ ಬಳಿ ಭಾನುವಾರ ರಾತ್ರಿ ಹರ್ಷ ಕೊಲೆಯಾದ ಗಳಿಗೆಯಿಂದ ಆತ
ಕೊಲೆಯ ಕುರಿತು ನಾನಾರೀತಿಯ ಊಹಾಪೋಹಗಳು ಕೇಳಿಬರುತ್ತಿದ್ದವ
ಕೊಲೆಗೆ ಕೋಮುಬಣ್ಣ-ರಾಜಕೀಯ ಬಣ್ಣ ಬಳಿದು ರಾಜಕೀಯ ಪಕ್ಷಗಳ
ಪರಸ್ಪರ ಕೆಸರೆರಚಿಕೊಂಡು ವಾಗ್ದಾಳಿ ನಡೆಸಿ ಗಾಳಿಯಲ್ಲಿ ಗುಂಡು ನುಗ್ಗಿಸಿ

## ಆರಂಭವಾಗಿದ್ದು ಈ ರಾಷ್ಟ್ರ ಧ್ವಜ ಹೇಳಿಕೆಯಿಂದ

ಯು ಕಿಚ್ಚು ಹೊತ್ತಿ ಉರಿದರೂ ಅಚ್ಚರಿಯೇನಿಲ್ಲ! ರಿವೇಂಜ್
ಮೊಗ್ಗದಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿ, ಅಶ್ರುವಾಯು ಸಿಡಿಸಿ
ಲೀಸರ ಕಾರ್ಯಾಚರಣೆಯಿಂದಾಗಿ ಹರ್ಷನ ಶವಯಾತ್ರೆಯಲ್ಲಿ
ಲು ಹವಣಿಸಿದ್ದ ರಾಜಕೀಯ ಪುಡಾರಿಗಳ ಆಸೆ ನೆರವೇರಲಿಲ್ಲ!
ಹರ್ಷನ ಜೀವಕ್ಕೆ ಬೆಲೆಕಟ್ಟಲು, ಆತನ ತಂದೆ ತಾಯಿಗಳಿಗೆ
ಹೇ!' ಎಂದು ಪ್ರಾರಂಭವಾಗಿರುವ ಹರ್ಷೋದ್ಗಾರದ ಒಣ
ಲ್ಲಿ ನಡೆಯುತ್ತಿರುವ ಚಂದಾ ಚಂದಾ ಎತ್ತುವ ಅಭಿಯಾನಗಳು,
ಬೀದಿಹೆಣವಾಗುವ ಕೆಲಸಕ್ಕೆ ಕೈ ಬೀಸಿ ಕರೆಯದಿರಲೀ..

# ...ಕಾರಣಕ್ಕೆ ಮುಗ್ಧರ ...ೇಕು?





ವಿಧಾನಸಭೆಯ ಮೇಲ್ಮನೆಯ ಕಾಂಗ್ರೆಸ್ ನಾಯಕರಾದ ಹರಿಪ್ರಸಾದ್ ರವರು ಬಿಜೆಪಿಯ ಸಚಿವ ಈಶ್ವರಪ್ಪನವರೇ ತಮ್ಮ 'ರಾಷ್ಟ್ರ ಧ್ವಜ ಪ್ರಕರಣ'ದ ದಿಕ್ಕು ತಪ್ಪಿಸುವ ಸಲುವಾಗಿ ಈ ಕೊಲೆ ಮಾಡಿಸಿರಬಹುದೆಂದು ಅನುಮಾನ ವ್ಯಕ್ತಪಡಿಸಿದ್ದರು! ಪಂಚಾಯಿತ್ ರಾಜ್ ಸಚಿವ ಈಶ್ವರಪ್ಪ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ರವರ ಪ್ರಚೋದನಕಾರಿ ಹೇಳಿಕೆಯಿಂದಲೇ ಮುಸಲ್ಮಾನರು ಹಿಂದೂ ಸಂಘಟನೆಯ ಕಾರ್ಯಕರ್ತ ಹರ್ಷನನ್ನು ಕೊಲೆಮಾಡಿರುವುದಾಗಿ ಹೇಳಿಕೆ ನೀಡಿದ್ದರು! ಈಗಾಗಲೇ ರಾಜ್ಯದಲ್ಲಿ ವಿಧಾನ ಸಭಾ ಚುನಾವಣಾ ಕಾವು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಇಂತಹ ಹೇಳಿಕೆಗಳು ಆರೋಪ, ಪ್ರತ್ಯಾರೋಪಗಳು ಸರ್ವೇ ಸಾಮಾನ್ಯ. ಬಿಜೆಪಿಯವರು ಎಂದಿನಂತೆ ಹಿಂದೂ ಹರ್ಷನ ಸಾವನ್ನು ಮುಸ್ಲಿಂ ಸಮುದಾಯದವರೇ ಮಾಡಿದ್ದರೇ, ಮತಬ್ಯಾಂಕ್ ರಾಜಕೀಯಕ್ಕೆ 'ಹಿಂದೂಗಳ ಹತ್ಯೆ!' ಟೈಟಲ್ ಬಳಸಿಕೊಳ್ಳಲು ಹವಣಿಸುತ್ತಿದೆ. 'ಅಯ್ಯೋ ನಮ್ಮ ಹಿಂದೂ ಹುಲಿ ಹೋಗ್ಬಿಟ್ಟಾ!' ಹರ್ಷ ರಾಷ್ಟ್ರ ಪ್ರೇಮಿ, ಹುತಾತ್ಮ! ಎಂದೆಲ್ಲಾ ಮೊಸಳೇ ಕಣ್ಣೀರು ಸುರಿಸುತ್ತಿರುವ ದೊಡ್ಡ ದೊಡ್ಡ ರಾಜಕಾರಿಣಿಗಳಿಗೇ ತಾವೇ ಅಲ್ಲವೇ ಆತನ ಸಾವಿಗೆ ಪರೋಕ್ಷ ಕಾರಣ ಎಂದೇಕೆ ಅನಿಸುತ್ತಿಲ್ಲ. ಎಸ್.ಎಸ್.ಎಲ್ಸಿ ಡ್ರಾಪ್ ಔಟ್ ಹರ್ಷನ ತಲೆಯಲ್ಲಿ 'ರಾಷ್ಟ್ರೀಯತೆಗೆ ಉತ್ತರ ಗೋಡ್ಸೇ!' ಎಂದು ತುಂಬಿದವರಾರು? ಭಾರತದ ತ್ರಿವರ್ಣ ಧ್ವಜಕ್ಕಿಂತ ಕೇಸರಿ ಧ್ವಜವೇ ಶ್ರೇಷ್ಠವೆಂಬ ದೇಶದ್ರೋಹಿ ಚಿಂತನೆ ಬೆಳೆಸಿದವರಾರು? ಮುಸ್ಲಿಮರ ಬ್ಯಾನರ್ರು, ಬೋರ್ಡುಗಳ ಕೆಳಗೆ ಹಂದಿ ತಲೆಕಡಿದು ನೇತು ಹಾಕುವುದೇ ದೊಡ್ಡ ದೇಶಪ್ರೇಮ! ಎಂದು ಸುಳ್ಳು ಹೇಳಿಕೊಟ್ಟವರಾರು? ನೆಟ್ಟಗೆ ತಂದೆತಾಯಿಗಳ ಜೊತೆಗೆ ಬಾಳಿಬದುಕಬೇಕಾಗಿದ್ದ ಹುಡುಗ ಹಾಳು ಫೇಸ್ಬುಕ್ ಪೋಸ್ಟ್ ಗಳ ಚಟಕ್ಕೆ ಬಿದ್ದು ಬೀದಿಹೆಣವಾಗಿದ್ದು ಯಾವ ಚುನಾವಣಾ ರಾಜಕೀಯ ಪಸಲಿಗೇ? ಇಂಜಿನಿಯರ್ ಒಬ್ಬರ ಬಳಿ ಸಹಾಯಕನಾಗಿದ್ದ ಹರ್ಷ ರಾಷ್ಟ್ರ ವನ್ನು ಪ್ರೀತಿಸುವುದರಲ್ಲಿ ತಪ್ಪೇನಿಲ್ಲ. ಅದು ಆತನ ಕರ್ತವ್ಯ ಕೂಡ. ತನ್ನದೆ ಧರ್ಮವನ್ನು ತಾನು ಸರ್ವಸ್ವತಂತ್ರವಾಗಿ ಮತ್ತೊಬ್ಬರಿಗೆ ತೊಂದರೆಯಾಗದಂತೆ ಆಚರಿಸುವುದು ಆತನ ಆಜನ್ಮ ಸಿದ್ಧ ಹಕ್ಕು. ಆದರೆ ಇಷ್ಟು ಸರಳವಾದ ಧರ್ಮಾಚರಣೆ-ದೇಶಪ್ರೇಮದ ವಿಷಯಗಳು ಒಂದೇ ದೇಶದ, ಒಂದೇ ಬೀದಿಯ ಜನರು ಬಡಿದಾಡಿ ಸಾಯುವಷ್ಟು ಕಗ್ಗಂಟಾಗುತ್ತಿರುವುದೇಕೇ? ಅಕ್ಕಪಕ್ಕದ ಮನೆಯ ಹಿಂದೂ-ಮುಸ್ಲಿಂ ಜನರಲ್ಲಿ ಪರಸ್ಪರ ಜನಾಂಗೀಯ ದ್ವೇಷವನ್ನು ಬಿತ್ತುತ್ತಿರುವವರಾರು? ಕೆಲವು ಮತಾಂಧ ಕೋಮುವಾದಿ ಹಿಂದೂ ಸಂಘಟನೆಗಳು ಹರ್ಷನಂತಹ ಹುಡುಗರ ತಲೆಕೆಡಿಸಿ ಅನ್ಯಕೋಮಿನ ವಿರುದ್ಧ ಎತ್ತಿಕಟ್ಟಿ ಅವರ ಬದುಕನ್ನು ಹಾಳು ಮಾಡುತ್ತಿದ್ದಾರೆ.

## ಪ್ರಚೋದನಕಾರಿ ಭಾಷಣಗಳೇ ಯುವಕರಿಗೆ ಮಾರಕ

ನಕಲಿ ಹಿಂದೂ ಸಂಘಟನೆಗಳ ಕೋಮು ಪ್ರಚೋದನಕಾರಿ ಭಾಷಣ ಕೇಳಿದ ಹರ್ಷನಂತವರು ದೇಶದ್ರೋಹಿ ಭಯೋತ್ಪಾದಕರಿಗೆ, ಮತಾಂಧ ಕೋಮುವಾದಿ ಮುಸ್ಲಿಮರಿಗೆ ಕಾನೂನಿನ ಮೂಲಕ ಬುದ್ಧಿ ಕಲಿಸುವ ಸಾಂವಿಧಾನಿಕ ದಾರಿಯನ್ನು ತೊರೆದು, ಬೀದಿಗಳಲ್ಲಿ ಗಣೇಶನ ಗಲಾಟೆ ಗಳಂತಹ ಹೊಡೆದಾಟ ಗಳಲ್ಲಿ ಭಾಗವಹಿಸಿ, ಲವ್ ಜಿಹಾದ್ ಹೆಸರಿನಲ್ಲಿ ಹಲ್ಲೆ, ಹೋಂಸ್ಟೇ ಮೇಲೆ ದಾಳಿನಡೆಸುತ್ತಾ ಮೈಮೇಲೆ ಪೊಲೀಸ್ ಕೇಸುಗಳನ್ನು ಹೆಟ್ಟಿಸಿಕೊಂಡು ರೌಡಿಸೀಟರ್ ಗಳಾಗಿ ಹೀಗೆ ಬೀದಿಹೆಣವಾದರೇ ಹೆತ್ತವರಿಗೆ ಯಾರು ದಿಕ್ಕು? ಹರ್ಷ ಕೂಡ ಪ್ರೋಗ್ರೆಸಿವ್ ಹಿಂದೂ ಕಾರ್ಯಕರ್ತನಾಗಿದ್ದನೆನ್ನಲಾಗುತ್ತಿದೆ. ಭಜರಂಗದಳವೆಂಬ ತನ್ನ ಸಂಘಟನೆಯ ಸಿದ್ದಾಂತದ ಕಾರಣಕ್ಕೆ ಮತಾಂತರದ ಹೊಡೆದಾಟವೇ ಆಗಲೀ ಗಣೇಶನ ಗಲಾಟೆಯೇ ಆಗಿರಲೀ ಸದಾ ಮುಂದಿರುತ್ತಿದ್ದನಂತೇ! ಮುಸ್ಲಿಮರು ಮಕ್ಕಾ ಮದೀನಕ್ಕೆ ಸಂಬಂಧಿಸಿದಂತೆ ಬ್ಯಾನರ್ ಒಂದನ್ನು ಶಿವಮೊಗ್ಗದ ಬೀದಿಯಲ್ಲಿ ಹಾಕಿದ್ದಾಗ ಇದೇ ಹರ್ಷ ಆ ಬ್ಯಾನರ್ ಕೆಳಗೇ ಹಂದಿ ತಲೆ ನೇತಾಕಿದ್ದನೆಂಬ ಆಪಾದನೆಯೂ ಇದೆ! ಮುಸ್ಲಿಂ ಯುವತಿಯರನ್ನು ಲವ್ ಮಾಡಿ ಕರೆತಂದವರನ್ನು ಮದುವೆ ಮಾಡಿಸಿ ಹಿಂದೂ ಧರ್ಮಕ್ಕೆ ಮತಾಂತರ ಮಾಡುವ ಕೆಲಸವನ್ನು ಮಾಡುತಿದ್ದನಂತೇ! ದುಡಿದು ಮನೆ ಸಾಕಬೇಕಾದ ಹರ್ಷ ನಕಲಿ ಹಿಂದುತ್ವವಾದಿ ಸಂಘಟನೆಗಳ ಸಹವಾಸಕ್ಕೆ ಬಿದ್ದು ಜೈಲುಗಳಲ್ಲಿಯೂ ಕೊಳೆತಿದ್ದಾನೆ! ಸದಾ ಇಸ್ಲಾಂ-ಮುಸ್ಲಿಂ ದ್ವೇಷದಿಂದ ಕುದಿಯುತ್ತಿದ್ದ ಹರ್ಷ 2015 ರಲ್ಲಿ ಪೈಗಂಬರ್ ಗುರುಗಳ ಬಗ್ಗೆ ಅವಹೇಳನಕಾರಿ ಪೋಸ್ಟ್ ಒಂದನ್ನು ಹಾಕಿ ಕೆಲವು ಮುಸ್ಲಿಂ ಸಮುದಾಯದ ಯುವಕರ ವಿರೋಧ ಕಟ್ಟಿಕೊಂಡಿದ್ದನಂತೇ! ಹಾಗಿದ್ದರೇ ಹರ್ಷನಿಗೇ ಏಳು ವರ್ಷದ ಹಿಂದೆಯೇ ಮೂಹೂರ್ತ ಫಿಕ್ಸ್ ಆಗಿತ್ತೇ? ಆತನ ಚಲನವಲನಗಳ ಮೇಲೆ ನಿಗಾ ಇಟ್ಟುಕೊಂಡು ಕಾದಿದ್ದವರು ಯಾರು? ಈಗಾಗಲೇ ಹರ್ಷನ ಮೇಲೆ ಎರಡು ಬಾರಿ ಕೊಲೆಯತ್ನಗಳಾಗಿದ್ದವೆಂದು ಹೇಳಲಾಗಿದೆ. ತಂದೆತಾಯಿಗಳ ಬಳಿ ಹರ್ಷನೇ ತನಗೆ ಕೆಲವರಿಂದ ತೊಂದರೆಯಿದೆ ಎಂದು ಹೇಳಿಕೊಂಡಿದ್ದನಂತೇ! ಈಗ ಹರ್ಷನ ತಂದೆ ತಾಯಿಗಳೇ ತಮ್ಮ ಮಗನ ಕೊಲೆಗೆ ಹತ್ತು ಲಕ್ಷ ಸುಫಾರಿ ನೀಡಿರುವ ಶಂಕೆ ವ್ಯಕ್ತಪಡಿಸಿದ್ದಾರೆ! ಈಗ ದೇಶಾದ್ಯಂತ ಹಿಜಾಬ್ ಗಲಾಟೆ ಭುಗಿಲೆದ್ದಿದೆ. ಈ ಹಿಜಾಬ್ ಗಲಾಟೆಗೂ ಹರ್ಷನಕೊಲೆಗೂ ಸಂಬಂಧ ಕಲ್ಪಿಸಲಾಗಿದೆ. ಹರ್ಷನೇ ಕೇಸರಿ ಶಾಲುಗಳನ್ನು ಹಿಜಾಬ್ ಗೆ ವಿರುದ್ಧವಾಗಿ ಸರ್ಕಾರಿ ಶಾಲೆಗಳಲ್ಲಿ ಹಿಂದೂ ವಿದ್ಯಾರ್ಥಿಗಳಿಗೆ ಹಂಚುತ್ತಿದ್ದ ಕಾರಣ ಈತನನ್ನೇ ಟಾರ್ಗೆಟ್ ಮಾಡಿಕೊಂಡು ಒಂದು ಕೋಮಿನವರು ಹಿಜಾಬ್ ಕಾರಣಕ್ಕಾಗಿಯೇ ಹರ್ಷನನ್ನು ಮುಸ್ಲಿಂ ಹುಡುಗರಿಗೆ ಸುಫಾರಿ ಕೊಟ್ಟು ಕೊಲ್ಲಿಸಿದ್ದಾರೆಂಬ ಗುಮಾನಿಯೆದ್ದಿದೆ.





## ಉದ್ಯೋಗ ನೀಡದೆ ಸಂಘಟನೆಗಳಿಗೆ ಬಳಕೆ

ಇದರಲ್ಲಿ ಸುಳ್ಳು ಸತ್ಯ ಎಷ್ಟಿದೆಯೋ? ಪೊಲೀಸರ ತನಿಖೆಯಿಂದ ಮಾತ್ರ ಸಾವಿನ ಸತ್ಯ ಹೊರಬರಬೇಕಿದೆ. ಇದು ಕೇವಲ ವೈಯಕ್ತಿಕ ದ್ವೇಷವಾಗಿರುವ ಸಾಧ್ಯತೆ ಕಡಿಮೆ ಇದೆ. ಈ ಕೊಲೆಯ ಹಿಂದೆ ಯಾವುದೇ ವ್ಯಕ್ತಿಗಳ ಕೈವಾಡವಿದ್ದರೂ ಅವರನ್ನು ಗಲ್ಲಿಗೇರಿಸಿ. ಯಾವ ಸಂಘಟನೆಗಳ ಕೈವಾಡವಿದ್ದರೂ ನೀಶೇಧಿಷಿ ಎಂದು ವಿರೋಧ ಪಕ್ಷದ ನಾಯಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವ ಹೇಳಿಕೆ ನೀಡಿದ್ದಾರೆ. ಈಗ ಮಗನನ್ನು ಕಳೆದುಕೊಂಡ ಹರ್ಷನ ತಂದೆತಾಯಿಗಳಿಗೆ ನಿಜವಾಗಿಯೂ ಅನ್ಯಾಯವಾಗಿದೆ. ಬಡ ಮಧ್ಯಮ ವರ್ಗದ ಕುಟುಂಬದ ಮಕ್ಕಳು ಯಾರದ್ದೊ ದಾಳಗಳಾಗಿ ಕೋಮು ಹಿಂಸಾಚಾರಕ್ಕೆ ಬಲಿಯಾಗಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ನಿರುದ್ಯೋಗಿ ಯುವಕರಿಗೆ ಸರಿಯಾದ ಉದ್ಯೋಗ ಒದಗಿಸುವ ಕೆಲಸ ಮಾಡದೆ ರಾಜಕೀಯ ಪಕ್ಷಗಳು ಈ ರೀತಿ ಅಡ್ಡದಾರಿಗೆ ನೂಕಿ ದೇಶಪ್ರೇಮದ ಹೆಸರಿನಲ್ಲಿ ಹಿಂಸಾಚಾರಕ್ಕೆ ಪ್ರಚೋದಿಸುವ ಕೆಲಸಮಾಡುವುದು ಎಷ್ಟು ಸರಿ? ಅಭಿವೃದ್ಧಿ ಹೆಸರಿನಲ್ಲಿ ಓಟು ಕೇಳಲಾರದ ರಾಜಕೀಯ ಪಕ್ಷಗಳು ಜನರ ಭಾವನಾತ್ಮಕ ವಿಷಯಗಳನ್ನು, ಧಾರ್ಮಿಕ ಸೂಕ್ಷ್ಮ ವಿಷಯಗಳನ್ನು ಕೆದಕಿ ಸಮಾಜದಲ್ಲಿ ಶಾಂತಿ ಕದಡಿ, ಕೋಮು ಸೌಹಾರ್ದತೆ ಹಾಳುಮಾಡಿ, ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿರುವುದು ಅಕ್ಷಮ್ಯ ಅಪರಾಧ.

● 12ನೇ ಪುಟಕ್ಕೆ...







ಚಾಮರಾಜನಗರ

# ಚಾಮರಾಜನಗರದಲ್ಲಿ ಖಾತೆ ತೆರೆಯಲು ಜೆಡಿಎಸ್ ತಂತ್ರ

● ಶಿವಮಲ್ಲು ಬಿ.



ಈಗಾಗಲೇ ಮೂರು ಪಕ್ಷಗಳು 2023 ರ ಚುನಾವಣೆಗೆ ಸಿದ್ದವಾದಂತೆ ಕಾಣುತ್ತಿದೆ ಇದರ ಫಲವಾಗಿಯೇ ಕಾಂಗ್ರೆಸ್ ಒಂದು ಕಡೆ ಮೇಕೆ ದಾಟು ಎನ್ನುವ ಪಾದಯಾತ್ರೆ ಜಾಥಾಕ್ಕೆ ಮಾರುಹೋಗಿದ್ದರೆ ಬಿಜೆಪಿ ಹಿಂದುತ್ವದ ಆಧಾರದ ಮೇಲೆ ತನ್ನ ರಾಜಕಾರಣ ಮಾಡುತ್ತಿದ್ದರೆ ಸದ್ದಿಲ್ಲದೆ ಜೆಡಿಎಸ್ ಎಲ್ಲಿಲ್ಲಿ ತಮ್ಮ ಖಾತೆಗಳನ್ನು ತೆಗೆಯಬಹುದು ಎನ್ನುವ ಲೆಕ್ಕಾಚಾರದಲ್ಲಿ ತೊಡಗಿದೆ.

ಜೆಡಿಎಸ್ ಈಗಾಗಲೇ ಕಳೆದ ನಾಲ್ಕೈದು ತಿಂಗಳಿನಿಂದಲೂ ಬಿರುಸಿನ ಸಭೆಗಳನ್ನು ನಡೆಸುತ್ತಿದ್ದಾರೆ ಜಿಲ್ಲಾ ಮಟ್ಟದ ನಾಯಕರುಗಳನ್ನು ಕರೆಸಿಕೊಂಡು ಸುಧೀರ್ಘ ಚರ್ಚೆ ಮಾಡುವ ಮೂಲಕ ಆ ಜಿಲ್ಲೆಯ ವಸ್ತುಸ್ಥಿತಿಯ ಬಗ್ಗೆ ಅರಿಯುತ್ತಿದ್ದಾರೆ ಎಲ್ಲಿ ನಾವು ಗೆಲ್ಲಬಹುದು ಎನ್ನುವ ತಂತ್ರಗಾರಿಕೆಗಳನ್ನು ಮಾಡಲು ಸಿದ್ದತೆ ಮಾಡಿಕೊಳ್ಳುತ್ತಿದ್ದಾರೆ

ಹೌದು ಈಗಾಗಲೇ ಜೆಡಿಎಸ್ ಪಕ್ಷ ಸಂಘಟನೆಯನ್ನು ತಳಮಟ್ಟದಲ್ಲ ಮಾಡುವ ಮೂಲಕ ಪಕ್ಷ ಬಲವರ್ಧನೆಗೆ ಅಣಿಹಾಕಿದೆ ಮುಂದಿನ ಚುನಾವಣೆಯಲ್ಲಿ ನಾವೇ ಕಿಂಗ್ ಮೇಕರ್ ಆಗಬೇಕು ಎನ್ನುವ ಛಲ ಆ ಪಕ್ಷದ್ದಾಗಿದೆ ಹಾಗಾಗಿಯೇ ಬಿರುಸಿನ ಚಟುವಟಿಕೆಯಲ್ಲಿ ತೊಡಗಿದೆ.

ಒಂದೆಡೆ ಪಕ್ಷದ ತಳಮಟ್ಟದ ಕಾರ್ಯಕರ್ತರಿಂದ ಆರಂಭವಾಗಿ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿರುವ ನಾಯಕರ ತನಕ ಗುಳೆಹೋಗಲು ಆರಂಭಿಸಿದ್ದಾರೆ. ಆದರೆ ಆ ಬಗ್ಗೆ ಪಕ್ಷದಲ್ಲಿ ಕುಮಾರಸ್ವಾಮಿ ಸೇರಿದಂತೆ ಯಾವುದೇ ನಾಯಕರು ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಬದಲಿಗೆ ಹೊಸ ನಾಯಕರನ್ನು ಹುಟ್ಟು ಹಾಕುವ ತಲಾಸೆಯಲ್ಲಿದ್ದಂತೆ ಕಾಣುತ್ತಿದೆ. ಈಗಾಗಲೇ ಮುಂದಿನ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಶೀಘ್ರವೇ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡುವುದಾಗಿ ಹೇಳಿರುವುದು ನಿಜವೇ? ಅಥವಾ ಅದೊಂದು ರೀತಿಯ ರಾಜಕೀಯ ತಂತ್ರವೇ ಎಂಬ ಕುತೂಹಲ ಜನ ವಲಯದಲ್ಲಿದೆ.

ಇಂಥ ಸಂದರ್ಭದಲ್ಲೇ ಶಿವಮೊಗ್ಗದಲ್ಲಿ ಹಿಂದೂ ಕಾರ್ಯಕರ್ತನ ಹತ್ಯೆ ಮತ್ತೊಂದು ತಿರುವನ್ನು ಪಡೆದುಕೊಂಡಿದೆ ಈ ಮೂಲಕ ಬಿಜೆಪಿ ಸಾವಿನ ಮೇಲೆ ಮೆರವಣಿಗೆ ಮಾಡಲು ಹೊರಟಿದೆ. ಹಿಜಾಬ್ ಮತ್ತು ಕೇಸರಿ ವಿವಾದವನ್ನು ರಾಜಕೀಯವಾಗಿ ಹೇಗೆ ಲಾಭ ಮಾಡಿಕೊಳ್ಳಬಹುದೆಂದು ಕಾಂಗ್ರೆಸ್ ಮತ್ತು ಬಿಜೆಪಿ ಗೊಂದಲಕ್ಕೆ ಬಿದ್ದು ತಲೆಕೆಡಿಸಿಕೊಂಡು ಜನರಿಂದ ಹಿಡಿಶಾಪ ಹಾಕಿಸಿಕೊಳ್ಳುತ್ತಿರುವಾಗಲೇ ಅದರಿಂದ ಸಮತೋಲನೆ ಕಾಪಾಡಿಕೊಂಡು ಪಕ್ಷ ಸಂಘಟನೆಯತ್ತ ಗಮನಹರಿಸಿರುವ ಕುಮಾರಸ್ವಾಮಿ, ಹಳೆ ಮೈಸೂರಿತ್ತ ಅದರಲ್ಲೂ ಚಾಮರಾಜನಗರದತ್ತ ದೃಷ್ಟಿ ನೆಟ್ಟಿದ್ದಾರೆ.



ಕಳೆದ ಬಾರಿಯ ಚುನಾವಣೆಯಲ್ಲಿ ಬಿಎಸ್ ಪಿ ಜತೆ ಮೈತ್ರಿ ಮಾಡಿಕೊಂಡ ಪರಿಣಾಮ ಚಾಮರಾಜನಗರದಲ್ಲಿ ಎನ್. ಮಹೇಶ್ ಮೂಲಕ ಬಿಎಸ್ ಪಿ ಖಾತೆ ತೆರೆಯುವಂತಾಗಿತ್ತು. ಇದರಲ್ಲಿ ಜೆಡಿಎಸ್‌ನ ಪಾತ್ರವೂ ಇತ್ತು. ಆದರೆ ಈಗ ಎನ್. ಮಹೇಶ್ ಬಿಜೆಪಿಯಲ್ಲಿದ್ದಾರೆ.

ಚಾಮರಾಜನಗರದ ಕಾಂಗ್ರೆಸ್ ಭದ್ರಕೋಟೆಗೆ ಬಿಜೆಪಿ ಲಗ್ಗೆಯಿಟ್ಟಿದೆ. ಇದೀಗ ಜೆಡಿಎಸ್ ಪಕ್ಷ ಸಂಘಟನೆ ಮಾಡಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬರಲು ತಯಾರಿ ಶುರು ಮಾಡಿದೆ. ಇದಕ್ಕೆ ಕುಮಾರಸ್ವಾಮಿ ಸಾಥ್ ನೀಡಲಿದ್ದಾರೆ. ಈಗಾಗಲೇ ಚಾಮರಾಜನಗರಕ್ಕೆ ಆಗಮಿಸಿ ಪಕ್ಷದ ಮುಖಂಡರನ್ನು ಭೇಟಿ ಮಾಡಿದ್ದಲ್ಲದೆ, ಚಾಮರಾಜನಗರ ಜೆಡಿಎಸ್ ಜಿಲ್ಲಾಧ್ಯಕ್ಷರಾದ ಎಂ. ಆರ್. ಮಂಜುನಾಥ್ ಸೇರಿದಂತೆ ಕೆಲವು ಮುಖಂಡರನ್ನು ಬೆಂಗಳೂರಿಗೆ ಕರೆಯಿಸಿಕೊಂಡು ಸಮಾಲೋಚನೆ ನಡೆಸಿದ್ದಾರೆ.

ಈ ವೇಳೆ ಚಾಮರಾಜನಗರ ಜೆಡಿಎಸ್ ಜಿಲ್ಲಾಧ್ಯಕ್ಷರಾದ ಎಂ. ಆರ್. ಮಂಜುನಾಥ್ ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಮಾಡಬೇಕಾದರೆ ನೀರಾವರಿ ಯೋಜನೆಗಳ ಅನುಷ್ಠಾನದ ಅಗತ್ಯತೆಯಿದ್ದು, ಅದನ್ನು ಕುಮಾರಸ್ವಾಮಿ ಗಮನಕ್ಕೆ ತಂದಿದ್ದು, ಸರ್ಕಾರದ ಗಮನಸೆಳೆಯುವಂತೆ ಮನವಿ ಮಾಡಿದ್ದಾರೆ ಎನ್ನಲಾಗಿದೆ. ಈ ವೇಳೆ ಮಾತನಾಡಿದ ಎಚ್. ಡಿ. ಕುಮಾರಸ್ವಾಮಿ ಹಿಂದೆ ಚಾಮರಾಜನಗರದಲ್ಲಿ ಕೆಲವೊಂದು ತಪ್ಪು ನಡೆದಿತ್ತು ಇದರಿಂದ ಪಕ್ಷಕ್ಕೆ ಹಿನ್ನಡೆಯಾಗಿದೆ.

ಹನೂರು ಕ್ಷೇತ್ರದಿಂದ ಈ ಬಾರಿ ಜಿಲ್ಲಾಧ್ಯಕ್ಷರಾದ ಎಂ. ಆರ್. ಮಂಜುನಾಥ್‌ಗೆ ಟಿಕೆಟ್ ನೀಡಲಾಗುತ್ತಿದ್ದು, ಅವರನ್ನು ಗೆಲ್ಲಿಸಿಕೊಂಡು ಬರುವಂತೆ ಪಕ್ಷದ ಮುಖಂಡರಿಗೆ ಹೇಳಿದ್ದಲ್ಲದೆ, ಕಳೆದ ಬಾರಿ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವ ವಿಚಾರದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳದಿರುವುದು ಮತ್ತು ಚಾಮರಾಜನಗರಕ್ಕೆ ಆಗಮಿಸಿ ಪ್ರಚಾರ ಮಾಡದಿರುವುದರಿಂದ ಹಿನ್ನಡೆಯಾಗಿದೆ. ಆದರೆ ಇಂತಹ ತಪ್ಪನ್ನು 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಮಾಡುವುದಿಲ್ಲ ಎಂಬ ಭರವಸೆಯನ್ನು ನೀಡಿದ್ದಾರೆ.



ಎಚ್. ಡಿ. ಕುಮಾರಸ್ವಾಮಿ ಭರವಸೆ ಈಗ ಚಾಮರಾಜನಗರ ಜಿಲ್ಲೆಯ ಜೆಡಿಎಸ್‌ನಲ್ಲಿ ಹುಮ್ಮಸ್ಸು ತಂದಿದೆ. 2023ರ ಚುನಾವಣೆ ವೇಳೆಗೆ ಪಕ್ಷವನನ್ನು ಸಂಘಟಿಸುವ ಕಾರ್ಯಕ್ಕೆ ಮುಖಂಡರು ಮುಂದಾಗುತ್ತಿದ್ದಾರೆ. ಆದರೆ ಕಾಂಗ್ರೆಸ್ ಮತ್ತು ಬಿಜೆಪಿಗೆ ಸೆಡ್ಡು ಹೊಡೆದು ಚಾಮರಾಜನಗರದಲ್ಲಿ ಜೆಡಿಎಸ್ ಬೆಳೆಯುತ್ತಾ? ಎಂಬುದನ್ನು ಮಾತ್ರ ಕಾಲವೇ ಹೇಳಬೇಕಾಗಿದೆ. ಕುಮಾರಸ್ವಾಮಿ ಲೆಕ್ಕಾಚಾರಗಳು ಏನೇ ಇರಬಹುದು ಆದರೆ ಚಾಮರಾಜ ನಗರದಲ್ಲಿ ಸದ್ಯ ಜೆಡಿಎಸ್ ಪಕ್ಷದ ಮತಗಳು ಇವೆಯೇ ಎನ್ನುವ ಪ್ರಶ್ನೆಯೂ ಮೂಡಿದೆ ಏಕೆಂದರೆ ಚಾಮರಾಜನಗರ ಒಂದು ಕಾಲದಲ್ಲಿ ಜೆಡಿಎಸ್ ಭದ್ರಕೋಟೆಯಾಗಿತ್ತು ಆದರೆ ಕಾಲಾಂತರದಲ್ಲಿ ಪಕ್ಷದಲ್ಲಿನ ಭಿನ್ನಾಭಿಪ್ರಾಯಗಳು ಮತ್ತು ಕುಟುಂಬ ರಾಜಕಾರಣವೇ ಸರ್ವಸ್ವ ಎಂದುಕೊಂಡಿರುವ ಜೆಡಿಎಸ್ ನಾಯಕರಿಂದ ಮನನೊಂದು ಒಬ್ಬೊಬ್ಬರೆ ಪಕ್ಷದಿಂದ ಕಾಲುಕಿತ್ತಿದ್ದರು. ಈಗಲೂ ಹಲವಾರು ನಾಯಕರು ಅನ್ಯಪಕ್ಷಗಳನ್ನು ಸೇರುತ್ತಿದ್ದಾರೆ ಇನ್ನೂ ಕೆಲವರು ಅತ್ತ ಮುಖಮಾಡಿದ್ದಾರೆ ಇಂಥ ಹೊತ್ತಿನಲ್ಲಿಯೇ ಚಾಮರಾಜ ನಗರದಲ್ಲಿ ಜೆಡಿಎಸ್ ಪಕ್ಷವನ್ನು ಬಲಪಡಿಸುವ ಮೂಲಕ ಖಾತೆ ತೆರೆಯುವ ಪ್ರಯತ್ನವನ್ನು ಮಾಡುತ್ತಿದೆ ಆದರೆ ಅದು ಎಷ್ಟರ ಮಟ್ಟಿಗೆ ಫಲದಾಯಕವಾಗುತ್ತದೆ ಎನ್ನುವುದೇ ಪ್ರಶ್ನೆ.

# ನಟ ಚೇತನ್ ಬಂಧನ; ಇದೆಂಥ ವ್ಯವಸ್ಥೆ?

ಇದೆಂಥಾ ದುರ್ದೈವ ನೋಡಿ ವಾಕ್ ಸ್ವಾತಂತ್ರ್ಯವೇ ಇಲ್ಲದಂತ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ಕಡೆ ಸಚಿವ ಕೆ.ಎಸ್. ಈಶ್ವರಪ್ಪ ಇಡೀ ದೇಶವೇ ಅವಮಾನಿಸುವಂತ ಹೇಳಿಕೆ ನೀಡಿದ್ದರೂ ಅವರ ಹೇಳಿಕೆಗಳನ್ನು ಸಮರ್ಥಿಸಿಕೊಳ್ಳುತ್ತಿರುವ ಬಿಜೆಪಿ ಈಗ ಇದ್ದಕ್ಕಿದ್ದಂತೆ ನಟ ಹಾಗೂ ಸಾಮಾಜಿಕ ಕಾರ್ಯಕರ್ತ ಚೇತನ್ ಅವರನ್ನು ಹೇಳದೆ ಕೇಳದೆ ಬಂದಿಸಿದುರವುದು ನೋಡಿದರೆ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಹೋರಾಟಗಾರರ ಮೇಲೆ ದಬ್ಬಾಳಿಕೆ ಮಾಡಿ ಪೊಲೀಸರು ಬಂಧಿಸುವ ಪ್ರವೃತ್ತಿಗೆ ಹೋಗುತ್ತಿದ್ದಾರೆ ಎಂದರೆ ಎಂಥಾ ಪರಿಸ್ಥಿತಿಯಲ್ಲಿ ನಾವಿದ್ದೇವೆ ಎನ್ನುವ ಪ್ರಶ್ನೆ ಎದುರಾಗಿದೆ.

ಇತ್ತೀಚೆಗಷ್ಟೆ ಪೊಲೀಸ್ ಅಧಿಕಾರಿಯೊಬ್ಬರ ವಿರುದ್ಧ್ ಮಾತನಾಡಿದ್ದ ವಕೀಲ ಜಗದೀಶ್ ಅವರನ್ನು ಪೊಲೀಸರು ಬಂಧಿಸಿದ್ದರು ಈಗ ಚೇತನ್ ಸರದಿ ಹೀಗೆ ಹೋರಾಟಗಾರರನ್ನು ಸರಣಿಯಲ್ಲಿ ಬಂಧಿಸುತ್ತಿದ್ದಾರೆ ಎಂದರೆ ಸಮಾಜದಲ್ಲಿ ವ್ಯಕ್ತಿಗಳು ಬದುಕುವುದೇ ಕಷ್ಟವಾದಂತಾಗಿದೆ.

ಇನ್ನೊಂದು ಕಡೆ ಮುತಾಲಿಕ್ ಹೇಳಿಕೆಗಳು ಕೋಮು ಗಲಭೆಗಳಿಗೆ ಪ್ರಚೋದನೆ ನೀಡುವಂತಾ ಹೇಳಿಕೆಗಳು ಯುವಜನರನ್ನೇ ದಾರಿ ತಪ್ಪಿಸುತ್ತಿವೆ ಅಂತವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದ ಸರ್ಕಾರ ಈಗ ಚೇತನ್ ಅವರನ್ನು



ಬಂಧಿಸಿರುವ ಉದ್ದೇಶವಾದರು ಏನು ಎನ್ನುವುದು ಅರ್ಥವಾಗಬೇಕಿದೆ.

ಎರಡು ವರ್ಷಗಳ ಹಿಂದೆ ಚೇತನ್ ಅತ್ಯಾಚಾರ ಪ್ರಕರಣವೊಂದರ ಬಗ್ಗೆ ನ್ಯಾಯಮೂರ್ತಿಗಳನ್ನು ಪ್ರಶ್ನಿಸಿ ಟ್ವೀಟ್ ಮಾಡಿದ್ದರು. ಅದನ್ನು ಉಲ್ಲೇಖ ಮಾಡಿ ಫೆಬ್ರವರಿ 16 ರಂದು ನ್ಯಾಯಮೂರ್ತಿಗಳ ಹಿಜಾಬ್ ವಿಚಾರಣೆ ಪೀಠದಲ್ಲಿ ಇದ್ದಾಗ ಟೀಕೆ ಮಾಡಿದ್ದರು. ಈ ಹಿನ್ನೆಲೆಯಿಂದಾಗಿ ಚೇತನ್ ಬಂಧನ ಮಾಡಲಾಗಿದೆ ಎನ್ನುವುದು ಪೊಲೀಸರ ವಾದ. ಆದರೆ ಚೇತನ್ ಅವರನ್ನು ಯಾವುದೇ ಮುನ್ಸೂಚನೆ ಇಲ್ಲದೆ ಬಂಧಿಸಲಾಗಿದೆ ಎನ್ನುವುದು ಅವರ ಪತ್ನಿ ಆರೋಪವಾಗಿದೆ ಒಂದು ರೀತಿ ಪೊಲೀಸರು ಕಡ್ನಾಪ್ ರೀತಿಯಲ್ಲಿ ನನ್ನ ಪತಿಯನ್ನು ಕರೆದೊಯ್ದಿದ್ದಾರೆ ಎಂದು ಹೇಳಿದ್ದಾರೆ.

ಇ ಎಲ್ಲಾ ಘಟನೆಗಳನ್ನು ಗಮನಿಸಿದರೆ ಪೊಲೀಸರು ಮತ್ತು ಸರ್ಕಾರ ಉದ್ದೇಶಪೂರ್ವಕವವಾಗಿಯೇ ಬಂಧಿಸಲಾಗಿದೆ ಎನ್ನುವುದು ಮೇಲ್ನೋಟಕ್ಕೆ ಅರ್ಥವಾಗುತ್ತದೆ.

## 16ರಂದು ಎಫ್‌ಐಆರ್ ದಾಖಲು

ನಟ ಚೇತನ್ ಫೆಬ್ರವರಿ 16ರಂದು ಟ್ವೀಟ್ ಮಾಡಿದ್ದು, ಅದರಲ್ಲಿ ಹಿಜಾಬ್ ವಿಚಾರವನ್ನು ಪ್ರಸ್ತಾಪಿಸುತ್ತಾ ಹೈಕೋರ್ಟ್ ನ್ಯಾಯಮೂರ್ತಿಗಳೊಬ್ಬರ ವಿರುದ್ಧ ಅಕ್ಷೇಪಾರ್ಹ ವ್ಯಾಖ್ಯಾನ ಮಾಡಿದ್ದರು ಎನ್ನಲಾಗಿದೆ. ಇದರ ವಿರುದ್ಧ ಶೇಷಾದ್ರಿಪುರಂ ಪೊಲೀಸರು ಸ್ವಯಂ ಪ್ರೇರಿತರಾಗಿ ದೂರು ದಾಖಲಿಸಿಕೊಂಡಿದ್ದರು

ಶೇಷಾದ್ರಿಪುರ ಪೊಲೀಸರ ವಶಕ್ಕೆ ನಟ ಚೇತನ್ ಕುಮಾರ್, ಕಾರಣ ಏನು? ಚೇತನ್ ಅವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಬಳಿಕ ಅವರನ್ನು ಅರೆಸ್ಟ್ ಮಾಡಲಾಗಿದೆ. ಪೊಲೀಸರು ಚೇತನ್ ಅವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದ್ದು ಅವರನ್ನು ನ್ಯಾಯಾಂಗ ವಶಕ್ಕೆ ಆದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಈಗ ಸಾಮಾಜಿಕ ಜಾಲತಾಣದಲ್ಲಿ ಚೇತನ್ ಪರ–ವಿರೋಧ ಚರ್ಚೆ ನಟ ಚೇತನ್ ಬಂಧನದ ಬೆನ್ನಲ್ಲೇ ಸಾಮಾಜಿಕ ಜಾಲತಾಣದಲ್ಲಿ ಈ ಬಂಧನದ ವಿರುದ್ಧವಾಗಿ ಹಾಗೂ ಪರವಾಗಿ ಚರ್ಚೆಗಳು ನಡೆಯುತ್ತಿದೆ. "ನಾವು ಯಾವುದೇ ವಿರೋಧವನ್ನು ಮಾಡಿದರೂ ನಮ್ಮನ್ನು ಭಯೋತ್ಪಾದಕರಂತೆ ಬಿಂಬಿಸುವ ಸಮಾಜ ಈಗ ಇದೆ. ನಮ್ಮ ಭಾರತದಲ್ಲಿ ರಾಜಕಾರಣಿಗಳು ಇನ್ನೂ ಬುದ್ಧಿಯಲ್ಲಿ ಬೆಳೆಯಬೇಕಾಗಿದೆ," ಎಂದಿದ್ದಾರೆ. "ಇವತ್ತು ಚೇತನ್ ಹೇಳದೆ ಕೇಳದೆ ಅರೆಸ್ಟ್ ಆಗಿರೋದು ಏನ್ ತೋರಿಸುತ್ತೆ ಅಂದ್ರೇ...!!, ನಿಮ್ಮನ್ನು ವರ್ಗಗಳನ್ನ ತುಳಿಯೋದಕ್ಕೆ ರಣಹದ್ದುಗಳು ಹೇಗೆಲ್ಲಾ ಹೊಂಚಾಕ್ತಿದಾವೆ ಅನ್ನೋದನ್ನು ತೋರಿಸುತ್ತಿದೆ. ಸಣ್ಣ ಕಾರಣ ಸಿಕ್ರೂ ಮೈ ಕೊಡುವುತಾವೆ!!," ಎಂದು ಕೂಡಾ ಹೇಳಿದ್ದಾರೆ. ಇನ್ನು ಚೇತನ್ ಅಹಿಂಸಾರನ್ನು ಬಿಡುಗಡೆ ಮಾಡಿ ಎಂದು ಕೂಡಾ ಸಾಮಾಜಿಕ ಜಾಲತಾಣದಲ್ಲಿ ಆಗ್ರಹ ಕೇಳಿ ಬಂದಿದೆ.

ಇನ್ನೂ ಕೆಲವರು ಮುತ್ತಾಲಿಕ್‌ರನ್ನು ಮೊದಲು ಬಂಧನ ಮಾಡಿ, ಚೇತನ್‌ಗೆ ಯಾಕೆ ತೊಂದರೆ ಕೊಡುತ್ತಿದ್ದೀರಿ ಎಂದು ಪ್ರಶ್ನೆ ಮಾಡಿದ್ದಾರೆ. "ಚೇತನ್ ಅವರನ್ನು ಅವರನ್ನು ಬಂಧಿಸಿರುವುದು ದಲಿತರನ್ನು ಭಯದಿಂದ ಉಳಿಸಲು ಮಾಡಿದ ಕುತಂತ್ರ," ಎಂದು ನಿರಂಜನ್ ಕುಮಾರ್ ಎಂಬವರು ಹೇಳಿದ್ದಾರೆ.

# ಹಂಪೆಯ ವಿಠ್ಠಲ ದೇವಾಲಯ, ಕಲ್ಲಿನ ರಥ ಮತ್ತು ಸಂಗೀತ ಕಂಬಗಳೂ...

ಪರಿಶೋಧನೆ
ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ





ಹಂಪೆಯ ಅತ್ಯಂತ ಕಲಾತ್ಮಕ ಮತ್ತು ವೈಭವಯುತ ದೇಗುಲವೆಂದರೆ ಅದು ವಿಠಲ ದೇವಾಲಯವೇ ಆಗಿದೆ. ವಿಜಯನಗರ ಕಾಲದ ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪವಲ್ಲದೆ ಸಂಗೀತ, ನೃತ್ಯಗಳಿಗೆ ಕೈಗನ್ನಡಿಯಾಗಿ ನಿಂತಿರುವ ದೇವಾಲಯವಿದು. ಹಂಪೆ ಎಂದಾಕ್ಷಣ ನೋಡಲೇ ಬೇಕಾದದ್ದು ಕಲ್ಲಿನ ರಥ. ಜಗತ್ತಿನ ಗಮನ ಸೆಳೆದು ವಿಶ್ವಪ್ರಸಿದ್ಧಿ ಪಡೆದ ವಾಸ್ತುವಿದು. ಇದು ವಿಜಯನಗರ ಅಥವಾ ಹಂಪೆಯ ಐಕಾನ್ ಎನ್ನುವಂತೆ ಚಿರಪರಿಚಿತವಾಗಿರುವುದು ಗಮನಾರ್ಹ. ಹಾಗೆಯೇ ಹಂಪೆಯ ಇತರ ದೇವಾಲಯಗಳಿಗಿಂತ ಅತ್ಯಂತ ಸುಂದರವಾಗಿ ಮತ್ತು ಸೂಕ್ಷ್ಮ ಕೆತ್ತನೆಗಳನ್ನು ಹೊಂದಿದ ವಿಸ್ತಾರವಾದ ದೇವಾಲಯವಿದು. ಅಲ್ಲದೆ ವಿಭಿನ್ನ ಹಾಗೂ ವಿಶಿಷ್ಟ ಶೈಲಿಯ ಕಂಬಗಳಾದ ಸಂಯುಕ್ತ ಅಥವಾ ಸಂಗೀತ ಕಂಬಗಳನ್ನು ಹೊಂದಿರುವ ದೇವಾಲಯವೂ ಇದೇ ಆಗಿದೆ.

ವಿಠ್ಠಲ ದೇವಾಲಯದ ನಿರ್ಮಾಣ: ಈ ದೇವಾಲಯವು ಕೃಷ್ಣದೇವರಾಯನಿಗೂ ಮುಂಚೆಯೇ ನಿರ್ಮಾಣವಾಗಿತ್ತೆಂಬುದು ವಿದ್ವಾಂಸರ ಅಭಿಮತ. ಆದರೆ ಇದಕ್ಕೆ ದೇವಾಲಯದಲ್ಲಿರುವ ಸುಮಾರು ನಲವತ್ತಕ್ಕೂ ಹೆಚ್ಚು ಶಾಸನಗಳಲ್ಲಿ ಯಾವುದೇ ವಿವರವಿಲ್ಲ. ಇಲ್ಲಿನ ಶಾಸನಗಳಲ್ಲಿ ಕೃಷ್ಣದೇವರಾಯನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲಾದೇವಿಯರು ವಿಠಲ ದೇವರಿಗೆ 1513ರಲ್ಲಿ ಗೋಪುರಗಳನ್ನು ಕಟ್ಟಿಸಿದರೆಂದು ಸ್ಪಷ್ಟಪಡಿಸಿವೆ. ಹಾಗೆಯೇ ದೇವಾಲಯದ ಬಲಬದಿಯ ನೂರುಕಾಲ ಮಂಟಪವನ್ನು 1516ರಲ್ಲಿ ಕೃಷ್ಣದೇವರಾಯನೇ ನಿರ್ಮಿಸಿದನೆಂಬ ಸಂಗತಿಯನ್ನು ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಪ್ರತ್ಯೇಕವಾಗಿ ಸಾರುವ ಮೂರು ಶಾಸನಗಳಿರುವುದು ವಿಶೇಷ. ಅಲ್ಲದೆ ಕೃಷ್ಣದೇವರಾಯ ನೀಡಿದ ಅನೇಕ ದಾನದತ್ತಿ ಶಾಸನಗಳು ಇಲ್ಲಿವೆ. ಅಚ್ಯುತರಾಯನ ಕಾಲದಲ್ಲಿ ಈ ದೇಗುಲದ ಪೂರ್ವ ಮತ್ತು ಉತ್ತರ ಗೋಪುರಗಳಿಗೆ ರಘುವಪ್ಪನಾಯಕ ಎಂಬುವವನು 1538ರಲ್ಲಿ ಸುವರ್ಣ ಕಳಸಗಳನ್ನು ಪ್ರತಿಷ್ಟಾಪಿಸಿದನೆಂದು, 1554ರಲ್ಲಿ ತಿಮ್ಮರಾಜ ಎಂಬುವವನು ಸದಾಶಿವರಾಯನ ಕಾಲದಲ್ಲಿ ಉಯ್ಯಾಲೆ ಮಂಟಪವನ್ನು ಕಟ್ಟಿಸಿದ ವಿವರಗಳಿವೆ. ವಿಠಲ ದೇವಾಲಯದಲ್ಲಿ ದೊರೆತ ಈ ಎಲ್ಲ ಶಾಸನಗಳು ಕೃಷ್ಣದೇವರಾಯ ಮತ್ತು ಅವನ ನಂತರದ ಅರಸರವೇ ಆಗಿವೆ. ದೇವಾಲಯದ ರಚನೆ, ಕಲೆ ಮತ್ತು ವಾಸ್ತುಶಿಲ್ಪವನ್ನು ಪರಿಶೀಲಿಸಿದರೂ ನಮಗೆ ದೊರೆಯುವುದು ಅತ್ಯಂತ ಸುಧಾರಿತ ಮತ್ತು ನಾವಿನ್ಯತೆಯನ್ನು ಮೈಗೂಢಿಸಿಕೊಂಡ ವಿಜಯನಗರ ಶೈಲಿಯೇ ಆಗಿದೆ. ಮಹಾಮಂಟಪದ ಸಂಗೀತ ಕಂಬಗಳು ಮತ್ತು ಕಲ್ಲಿನ ರಥದಂತಹ ವಿಶಿಷ್ಟ ಪ್ರಕಾರಗಳನ್ನು ಪ್ರಯೋಗಿಸಿದ ದೇಗುಲ ಅದು ವಿಠಲ ದೇವಾಲಯವಾಗಿದೆ. ಈ ಎಲ್ಲ ಆಕರ, ಲಕ್ಷಣಗಳ ಹಿನ್ನೆಲೆಯಲ್ಲಿ ವಿಠಲ ದೇವಾಲಯವು 1513ರ ಹೊತ್ತಿಗೆ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣವಾದದ್ದು ದೃಢವಾಗುತ್ತದೆ.

ವಿಠ್ಠಲ ದೇವಾಲಯವನ್ನು ವಿಶಾಲವಾದ ಪ್ರಾಂಗಣದಲ್ಲಿ ಗರ್ಭಗೃಹ, ಪ್ರದಕ್ಷಿಣ ಪಥ, ಅಂತರಾಳ, ನವರಂಗ, ಮಹಾಮಂಟಪಗಳಿಂದ ನಿರ್ಮಿಸಲಾಗಿದೆ. ಎಡಭಾಗದಲ್ಲಿ ಅಮ್ಮನವರ ಗುಡಿ, ಮುಂಭಾಗದಲ್ಲಿ ಗರುಡ ಮಂಟಪವಾದ ಕಲ್ಲಿನ ರಥಗಳಿವೆ. ದೇಗುಲದ ಆವರಣದಲ್ಲಿ ನೂರುಕಾಲ ಮಂಟಪ, ಕಲ್ಯಾಣ ಮಂಟಪ, ಉತ್ಸವ ಮಂಟಪಗಳಿದ್ದು ಸುತ್ತಲೂ ಸಾಲುಮಂಟಪಗಳನ್ನು ಒಳಗೊಂಡ ಪ್ರಾಕಾರಕ್ಕೆ ಮೂರು ದ್ವಾರಗೋಪುರಗಳಿವೆ. ದೇವಾಲಯದ ಮುಂಭಾಗದಲ್ಲಿ ಇಕ್ಕೆಲಗಳಲ್ಲಿ ಸಾಲುಮಂಟಪಗಳನ್ನು ಒಳಗೊಂಡ ವ್ಯಾಪಾರ ಬೀದಿಯಿದೆ. ಇದು ವಿಠಲದೇವರ ರಥಬೀದಿಯೂ ಆಗಿದ್ದಿತು.

ಮಹಾಮಂಟಪ: ಈ ದೇಗುಲದ ಮಹಾಮಂಟಪದಲ್ಲಿ ಕಡೆಯಲಾದ ಕಂಬಗಳು ವಿಜಯನಗರ ಕಾಲದ ವಾಸ್ತು ಪರಂಪರೆಯ ಪ್ರಸಿದ್ಧ ಕಲಾಕೃತಿಗಳಾಗಿವೆ. ಅಖಂಡ ಬಂಡೆಗಲ್ಲಿನಲ್ಲಿ ಕಡೆಯಲಾದ ಈ ಕಂಬಗಳು ವಿಶಿಷ್ಟ ವಿನ್ಯಾಸ, ರಚನೆ ಹಾಗೂ ಕಲಾತ್ಮಕತೆಯನ್ನು ಹೊಂದಿವೆ. ಇವುಗಳನ್ನು ಸಂಯುಕ್ತ ಕಂಬಗಳೆಂದೂ ಕರೆಯುವರು. ಇವುಗಳಲ್ಲಿ ಕೆಲವು ಆನೆ, ಕುದುರೆ, ಸಿಂಹ, ವ್ಯಾಳಗಳು ಜಿಗಿಯುವ ಚಿತ್ರಣಗಳನ್ನೂ ಒಳಗೊಂಡಿವೆ. ಸಂಯುಕ್ತ ಕಂಬಗಳಲ್ಲಿರುವ ಚಿಕ್ಕ ಚಿಕ್ಕ ಅಲಂಕಾರಿಕ ಕಂಬಗಳು ಸಂಗೀತದ ಸಪ್ತಸ್ವರಗಳನ್ನು ಹೊರಹೊಮ್ಮಿಸುವ ವಾದ್ಯಗಳೇ ಆಗಿವೆ. ಸ್ವರಗಳ ಹಿನ್ನೆಲೆಯಲ್ಲಿ ಇವುಗಳನ್ನು ಸಂಗೀತ ಕಂಬಗಳೆಂದೂ ಕರೆಯುವರು. ಇವು ಸಂಗೀತ, ನೃತ್ಯ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ವಿಜಯನಗರ ಕಾಲದಲ್ಲಿ ಅರಸರು ನೀಡಿದ್ದ ಪ್ರೋತ್ಸಾಹದ ಪ್ರತೀಕಗಳೇ ಆಗಿವೆ. ಬೃಹತ್ ಬಂಡೆಗಲ್ಲನ್ನು ಕಂಬವನ್ನಾಗಿ ಪರಿವರ್ತಿಸಿ ಅದರಲ್ಲಿ ಕಾಂಡದ ಮಧ್ಯದಲ್ಲಿ ಚಿಕ್ಕ ಚಿಕ್ಕ ಹತ್ತಾರು ಕಂಬಗಳನ್ನು ಕಡೆದಿರುವರು. ಈ ಚಿಕ್ಕ ಕಂಬಗಳು ಅಖಂಡ ಕಂಬದ ಭಾಗವಾಗಿದ್ದು, ಮಧ್ಯೆ ಟೊಳ್ಳಾದ ಭಾಗವಿರುವುದರಿಂದ ತಾನಾಗಿಯೇ ಶಬ್ದವು ಹೊರಹೊಮ್ಮುತ್ತದೆ. ಆದರೆ ಒಂದೊಂದು ಕಂಬವೂ ಒಂದೊಂದು ಬಗೆಯ ಶಬ್ದವನ್ನು ಉಂಟುಮಾಡುತ್ತವೆ.. ಈ ಬಗೆಯಲ್ಲಿ ವಿಭಿನ್ನ ಸ್ವರವನ್ನು ಹೊರಹೊಮ್ಮಲು ಅಂದಿನ ಶಿಲ್ಪಿ ಅಳವಡಿಸಿದ ವಿಶಿಷ್ಟ ವಾಸ್ತುತಂತ್ರ ಗಮನಾರ್ಹವಾದದ್ದು. ಅದೆಂದರೆ ಕಂಬಗಳ ದಪ್ಪ, ಎತ್ತರ, ಗಾತ್ರ ಹಾಗೂ ಆಕಾರಗಳಲ್ಲಿ ವ್ಯತ್ಯಾಸವನ್ನು ಮಾಡಿರುವುದೇ ಆಗಿದೆ. ಈ ಕಂಬಗಳನ್ನು ವೃತ್ತಾಕಾರ, ಚತುರ್ಮುಖ, ಷಣ್ಮುಖ, ಅಷ್ಟ ಮುಖಗಳಲ್ಲಿ ಕಡೆಯುವುದರ ಜೊತೆಗೆ, ಎತ್ತರದಲ್ಲೂ ಒಂದರಿಂದ ಇನ್ನೊಂದು ಭಿನ್ನವಾಗಿವೆ. ಇದರಿಂದ ಕಂಬಗಳಲ್ಲಿ ಒಂದೊಂದೂ ವಿಭಿನ್ನ ಸ್ವರ ಹೊರಡುತ್ತದೆ. ಹಬ್ಬಹರಿದಿನ, ತೆಪ್ಪೋತ್ಸವ, ರಥೋತ್ಸವ ಮೊದಲಾದ ಸಂದರ್ಭಗಳಲ್ಲಿ ಈ ಮಂಟಪವು ಪ್ರಧಾನ ಪಾತ್ರವನ್ನು ವಹಿಸಿದ್ದಿತು. ಅಲ್ಲದೆ ಸಂಗೀತ, ನೃತ್ಯಾದಿ ಕಾರ್ಯಕ್ರಮಗಳನ್ನು ಇಲ್ಲಿ ಹಮ್ಮಿಕೊಳ್ಳಲಾಗುತ್ತಿತ್ತು. ಅಂದು ವಿಗ್ರಹ ಪೂಜೆಯಂತೆಯೇ ನರ್ತನ ಸೇವೆಯೂ ಸಾಮಾನ್ಯವಾಗಿತ್ತು. ಇದಕ್ಕೆ ಅಂದಿನ ಶಾಸನಗಳಲ್ಲಿ ನೀಡಿರುವ ನಟುವಂಗ ಅಥವಾ ನಾಟ್ಯ ಸೇವೆಯ ಪಾಲು ಪ್ರಮುಖ ಸಾಕ್ಷ್ಯವಾಗಿದೆ. ಅಲ್ಲದೆ ಈ ಕಾರ್ಯಕ್ಕೆಂದೇ ನರ್ತಕಿ ಅಥವಾ ದೇವದಾಸಿಯರನ್ನು ನೇಮಿಸಿ ಅವರಿಗೆ ದೇವಾಲಯದ ಆದಾಯದಲ್ಲಿ ನಟುವಂಗ ಪಾಲನ್ನು ನೀಡಲಾಗುತ್ತಿತ್ತು. ವಿಜಯನಗರ ಕಾಲದಲ್ಲಿ ನೂರಾರು ಜನರು ವೀಕ್ಷಿಸಲು ಅನುವಾಗುವಂತಹ ಮಹಾಮಂಟಪವನ್ನು ಸಂಗೀತ, ನೃತ್ಯಗಳಿಗೆಂದೇ ನಿರ್ಮಿಸಲಾಯಿತು. ಅಲ್ಲದೆ ಅದನ್ನು ಕಲಾತ್ಮಕವಾಗಿ ನಿರ್ಮಿಸುವ ಮೂಲಕ ವಿಜಯನಗರ ಅರಸರು ಸಂಗೀತ ಮತ್ತು ನೃತ್ಯಗಳಿಗೆ ವಿಶೇಷ ಪ್ರೋತ್ಸಾಹವನ್ನು ನೀಡಿದ್ದಾರೆ.

ಕಲ್ಲಿನ ರಥ: ಹಂಪೆಯ ಪ್ರಮುಖ ಆಕರ್ಷಣೆಗಳಲ್ಲಿ ಮುಖ್ಯವಾದ ರಚನೆ ವಿಠಲ ದೇವಾಲಯದಲ್ಲಿರುವ ಕಲ್ಲಿನ ರಥ. ಇದು ಅಂದಿನ ಶಿಲ್ಪಿಯ ಚಾತುರ್ಯವೇ ಸರಿ. ದೇವಾಲಯಗಳಲ್ಲಿ ಮುಖ್ಯ ದೇವತಾ ದೇಗುಲದ ಮುಂಭಾಗದಲ್ಲಿ ವಾಹನ, ವಾಹನ ಮಂಟಪವನ್ನು ನಿರ್ಮಿಸುವುದು ಸಹಜವೇ. ಆದರೆ ವಿಠಲ ದೇವಾಲಯದ ವಿಶೇಷತೆಯೆಂದರೆ ವಿಷ್ಣುವಿನ ವಾಹನವಾದ ಗರುಡನಿಗಾಗಿ ಕಟ್ಟಲಾದ ವಿಶಿಷ್ಠ ಮಂಟಪ ಈ ಕಲ್ಲಿನ ರಥವಾಗಿದೆ. ಇದೊಂದು ಗರುಡ ದೇಗುಲವೇ ಆಗಿದೆ. ವಾಹನ ಮಂಟಪವನ್ನು ಅಲಂಕಾರಿಕ ರಥದಂತೆ ನಿರ್ಮಿಸಿ ಅದಕ್ಕೆ ಇಟ್ಟಿಗೆ, ಗಾರೆ–ಗಚ್ಚುಗಳಿಂದ ಶಿಖರವನ್ನೂ ಕಟ್ಟಿದ್ದುದು ವಿಶೇಷ. ಆದರೆ ಶಿಖರದ ಭಾರದಿಂದ ರಥವು ಜರ್ಜರಿತವಾದ ಕಾರಣ ಅದನ್ನು ತೆಗೆದು ಹಾಕಲಾಗಿದೆ.  ವ್ಯಾಸರಾಯರ ಉಲ್ಲೇಖ: 1513ರ ಶಾಸನದಲ್ಲಿ ವಿಠಲ ದೇವರಿಗೆ ಅನೇಕ ದಾನಗಳನ್ನು ಬಿಟ್ಟಿದ್ದು, ಅದರೊಂದಿಗೆ ವ್ಯಾಸರಾಯರಿಗೂ ದಾನದ ಮೂರು ಪಾಲನ್ನು ನೀಡಿರುವುದು ಗಮನಾರ್ಹ. ಶಾಸನದಲ್ಲಿ ಕೃಷ್ಣದೇವರಾಯ ತನ್ನ "ಗುರುವುಗಳು ವ್ಯಾಸರಾಯರಿಗೆ ಪಾಲು ಮೂರು" ಎಂದೇ ಹೇಳಿದೆ.  ಉತ್ಸವಾಚರಣೆಗಳು: ವಿಠಲ ದೇವಾಲಯದಲ್ಲಿ ನಡೆಯುತ್ತಿದ್ದ ಹಬ್ಬಹರಿದಿನ, ಉತ್ಸವಾಚರಣೆಗಳನ್ನು ಶಾಸನಗಳು ವಿವರವಾಗಿ ಹೇಳಿವೆ. ಉಗಾದಿ, ದೀಪಾವಳಿ, ಮಹಾನವಮಿ, ವಿಜಯದಶಮಿ, ಶೀರಾಮನವಮಿ, ಗೋಕುಲಾಷ್ಟಮಿ, ಮಕರ ಸಂಕ್ರಾಂತಿ, ವಾಮನ ಜಯಂತಿ,  ನರಸಿಂಹ ಜಯಂತಿ ಮೊದಲಾದ ಹಬ್ಬಗಳಂದು ವಿಶೇಷ ಪೂಜಾ ಉತ್ಸವಗಳು ಜರುಗುತ್ತಿದ್ದವು. ಅಲ್ಲದೆ ತೆಪ್ಪೋತ್ಸವ, ರಥೋತ್ಸವಗಳೂ ಜರುಗುತ್ತಿದ್ದು, ರಥ ಅಥವಾ ತೇರಿನ ಶೃಂಗಾರವನ್ನೂ ಸೀರೆ, ಕರೆಗಳಿಂದ ಮಾಡುತ್ತಿದ್ದರು. ಅಲ್ಲದೆ ತೇರು ಬೀದಿಯ ಎದುರು ಮಂಟಪವಾದ ಪರಾಂಕುಶ ಮಂಟಪಕ್ಕೆ ಚಪ್ಪರವನ್ನು ಹಾಕಿ ಶೃಂಗರಿಸುತ್ತಿದ್ದರೆಂದೂ ಬಣ್ಣಿಸಲಾಗಿದೆ. ರಥೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದು, ಉತ್ಸವದಲ್ಲಿ ವಾದ್ಯದವರು ಅದರಲ್ಲೂ ಹೆಣ್ಣುಮೇಳ, ಗಂಡುಮೇಳಗಳು ಭಾಗವಹಿಸುತ್ತಿದ್ದವು. ಅದರಲ್ಲೂ ವಿಶೇಷವಾಗಿ ರಥೋತ್ಸವದ ವೈಭವ ಹೆಚ್ಚಲು ಪಟಾಕಿಗಳನ್ನು ಹೊಡೆಯುತ್ತಿದ್ದರೆಂಬುದು ಶಾಸನಸ್ಥ ಸಂಗತಿ.

# ತೃತೀಯ ರಂಗ ಸದೃಢತೆಗೆ ಸಿದ್ಧತೆ

● 5ನೇ ಪುಟದಿಂದ...

ನಾವು ಅಭಿವೃದ್ಧಿಯ ಸಮಸ್ಯೆಗಳನ್ನು ಸುಧಾರಿಸುವ ಮತ್ತು ಯೋಜನೆಗಳನ್ನು ತ್ವರಿತಗೊಳಿಸುವ ಮತ್ತು ದೇಶದಲ್ಲಿ ರಚನಾತ್ಮಕ ಮತ್ತು ನೀತಿ ಬದಲಾವಣೆಗಳನ್ನು ತರುವ ಬಗ್ಗೆ ವಿಸ್ತೃತ ಚರ್ಚೆಯನ್ನು ಮಾಡಿದ್ದೇವೆ. ನಾವು ಎಲ್ಲಾ ವಿಷಯಗಳ ಬಗ್ಗೆ ಒಪ್ಪಿಕೊಂಡಿದ್ದೇವೆ: ಮುಂಬೈನಲ್ಲಿ ಮಹಾ ಸಿಎಂ ಉದ್ಧವ್ ಠಾಕ್ರೆ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ತೆಲಂಗಾಣ ಸಿಎಂ ಕೆಸಿಆರ್ ಹೇಳಿದರು. **Video:** ಉತ್ತರ ಪ್ರದೇಶದ ಬಿಜೆಪಿ ಮುಖಂಡನ ಕಾಲಿಗೆ ಬಿದ್ದರೇಕೆ ಪ್ರಧಾನಿ ಮೋದಿ? ಗುಜರಾತ: ಉತ್ತರ ಪ್ರದೇಶದ ಬಿಜೆಪಿ ಮುಖಂಡನ ಕಾಲಿಗೆ ಬಿದ್ದರೇಕೆ ಪ್ರಧಾನಿ ಮೋದಿ? ನಮ್ಮ ಹಿಂದುತ್ವ ತಪ್ಪು ರಾಜಕೀಯವನ್ನು ಕಲಿಸುವುದಿಲ್ಲ; ದೇಶವು ನರಕಕ್ಕೆ ಹೋದರೂ ಕೆಲವರು ತಮ್ಮ ಅಜೆಂಡಾಗಳಿಗಾಗಿ ಮಾತ್ರ ಕೆಲಸ ಮಾಡುತ್ತಾರೆ. ನಾವು ನಮ್ಮ ದೇಶವನ್ನು ಸರಿಯಾದ ದಾರಿಯಲ್ಲಿ ತರಬೇಕಾಗಿದೆ; ಪ್ರಧಾನಿ ಯಾರು ಎಂಬುದನ್ನು ನಂತರ ಚರ್ಚಿಸಬಹುದು. ಇಂದಿನಿಂದ ಹಲವು ರಾಜಕೀಯ ನಾಯಕರನ್ನು ಭೇಟಿ ಮಾಡುತ್ತೇವೆ ಎಂದು ಮಹಾರಾಷ್ಟ್ರ ಸಿಎಂ ಉದ್ಧವ್ ಠಾಕ್ರೆ ಹೇಳಿದರು. ಎನ್‌ಸಿಪಿ





ಮುಖ್ಯಸ್ಥರ ಜೊತೆ ಕೆಸಿಆರ್ ಮಾತುಕತೆ: ಮಹಾರಾಷ್ಟ್ರ ಸಿಎಂ ಉದ್ಧವ್ ಠಾಕ್ರೆ ಮತ್ತು ಇತರ ನಾಯಕರನ್ನು ಸಿಎಂ ನಿವಾಸದಲ್ಲಿ ಭೇಟಿಯಾದ ನಂತರ, ತೆಲಂಗಾಣ ಸಿಎಂ ಕೆ ಚಂದ್ರಶೇಖರ್ ರಾವ್ ಅವರು ಮಹಾರಾಷ್ಟ್ರದ ಮುಂಬೈನಲ್ಲಿರುವ ಸಿಲ್ವರ್ ಓಕ್ಸ್ ನಿವಾಸದಲ್ಲಿ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಭೇಟಿಯಾದರು. ಸಿಧು ಕ್ರಮೇಣವಾಗಿ ಪಂಜಾಬ್ ಜನರೊಂದಿಗೆ ಸಂಪರ್ಕ ಕಳೆದುಕೊಳ್ಳುತ್ತಿದ್ದಾರೆ: ಕಾಂಗ್ರೆಸ್ ಸಂಸದಸಿಧು ಕ್ರಮೇಣವಾಗಿ ಪಂಜಾಬ್ ಜನರೊಂದಿಗೆ ಸಂಪರ್ಕ ಕಳೆದುಕೊಳ್ಳುತ್ತಿದ್ದಾರೆ: ಕಾಂಗ್ರೆಸ್ ಸಂಸದ **Telangana CM KCR- Uddhav Thackeray Meeting Updates Watch Video** ಠಾಕ್ರೆ ಮನೆಯಲ್ಲಿ ಈ ಇಬ್ಬರು ಸಿಎಂಗಳ ಭೇಟಿ ಸಂದರ್ಭದಲ್ಲಿ ಉದ್ಧವ್ ಅವರ ಪುತ್ರ ತೇಜಸ್ ಠಾಕ್ರೆ, ಕೈಗಾರಿಕಾ ಸಚಿವ ಸುಭಾಷ್ ದೇಸಾಯಿ, ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವ ಏಕನಾಥ್ ಶಿಂಧೆ, ಸಂಸದ ಸಂಜಯ್ ರಾವುತ್, ಸಂಸದ ಅರವಿಂದ್ ಸಾವಂತ್, ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಆಶಿಶ್ ಕುಮಾರ್ ಸಿಂಗ್ ಉಪಸ್ಥಿತರಿದ್ದರು. ಕೆಸಿಆರ್ ಜೊತೆ ನಟ ರಾಜಕಾರಣಿ ಪ್ರಕಾಶ್ ರಾಜ್ ಕಾಣಿಸಿಕೊಂಡಿದ್ದು ವಿಶೇಷ. ಸಿಎಂ ಠಾಕ್ರೆ ಅವರ ಆಹ್ವಾನದ ನಂತರ, ರಾವ್ ಅವರು ಮಹಾರಾಷ್ಟ್ರ ಸಿಎಂ ಅವರ ಅಧಿಕೃತ ನಿವಾಸ 'ವರ್ಷ'ಕ್ಕೆ ಆಗಮಿಸಿದರು. ಶಿವಸೇನೆಯ ಅಧ್ಯಕ್ಷರೂ ಆಗಿರುವ ಠಾಕ್ರೆ ಇತ್ತೀಚೆಗೆ ರಾವ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಮುಂಬೈಗೆ ಆಹ್ವಾನಿಸಿದ್ದರು. ಈ ಸಭೆಯು ಬಿಜೆಪಿ ವಿರುದ್ಧ ರಾಷ್ಟ್ರಮಟ್ಟದಲ್ಲಿ ರಾಜಕೀಯ ಏಕತೆಯ ಪ್ರಕ್ರಿಯೆಯನ್ನು ಚುರುಕುಗೊಳಿಸಲಿದೆ ಎಂದು ಶಿವಸೇನೆಯ ಮುಖವಾಣಿ 'ಸಾಮ್ನಾ' ಭಾನುವಾರ ಹೇಳಿದೆ.ಬಿಜೆಪಿಯ ಆಪಾದಿತ ಜನವಿರೋಧಿ ನೀತಿಗಳ ವಿರುದ್ಧ ಮತ್ತು ಒಕ್ಕೂಟದ ಮನೋಭಾವವನ್ನು ಎತ್ತಿಹಿಡಿಯಲು ರಾವ್ ಅವರ ಹೋರಾಟಕ್ಕೆ ಠಾಕ್ರೆ ಈ ಹಿಂದೆ "ಸಂಪೂರ್ಣ ಬೆಂಬಲ" ಘೋಷಿಸಿದ್ದರು.



# ಕೆಟ್ಟ ರಾಜಕಾರಣಕ್ಕೆ ಇನ್ನೆಷ್ಟು ಮುಗ್ಧರ ಬಲಿ ಬೇಕು?






● 9ನೇ ಪುಟದಿಂದ...

ನಮ್ಮ ಧರ್ಮವೇ ಶ್ರೇಷ್ಠ ಎಂದು ಜನರನ್ನು ಭ್ರಮಾಲೋಕದಲ್ಲಿ ಮುಳುಗಿಸಿ ಧರ್ಮಧರ್ಮಗಳ ನಡುವೆ ಬಿರುಕು ಮೂಡಿಸುತ್ತಿರುವ ಈ ರಾಜಕೀಯ ಪಕ್ಷಗಳು ಜನರಿಗೆ ಒಳ್ಳೆಯ ಶಿಕ್ಷಣವನ್ನು , ಆರೋಗ್ಯಸೇವೆಯನ್ನು, ಉದ್ಯೋಗವನ್ನು ನೀಡದೆ ಕುಸಿಯುತ್ತಿರುವ ಆರ್ಥಿಕತೆಯನ್ನು ಎತ್ತಿ ಹಿಡಿಯದೇ ಕೇವಲ ಧಾರ್ಮಿಕ ಭಾವನೆಗಳನ್ನು ಕೆರಳಿಸಿ ಜನರನ್ನು ಬೀದಿಗೆ ತಂದು ನಿಲ್ಲಿಸುತಿದ್ದಾರೆ! ದಿನಬಳಕೆಯ ವಸ್ತುಗಳ ಬೆಲೆಯಾಗಲೀ, ಪೆಟ್ರೋಲ್ ಡೀಸೆಲ್ ಗ್ಯಾಸ್ ಬೆಲೆ ಏರಿಕೆ ಯಾಗಲೀ ಜನರು ತಲೆಕೆಡಿಸಿಕೊಳ್ಳುವುದಿಲ್ಲ! ಧರ್ಮದ ಉಳಿವಿಗಾಗಿ ತಮ್ಮದೇ ಖರ್ಚಿನಲ್ಲಿ ಸಾಲಮಾಡಿಕೊಂಡಾದರೂ ಬಡಿದಾಡಲು ಬೀದಿಗಿಳಿಯುವಂತೆ ಜನರನ್ನು ಮಾರ್ಪಾಡು ಮಾಡಲಾಗುತ್ತಿದೆ! ಎಲ್ಲಾ ಧರ್ಮಗಳಲ್ಲೂ ಇರುವ ಮತಾಂದರೂ ತಮ್ಮ ದೇವಾಲಯಗಳ, ಮಸೀದಿಗಳ, ಚರ್ಚ್ ಗಳ ಕಪ್ಪಕಾಣಿಕೆ-ದೇಣಿಗೆ ಹುಂಡಿಕಾಸಿಗಾಗಿ ಜನರನ್ನು ದೇವರು ಧರ್ಮದ ಹೆಸರಿನಲ್ಲಿ ಆಕರ್ಷಿಸಿ ಬಂಡವಾಳ ಮಾಡಿಕೊಂಡು ಬದುಕುತ್ತಿದ್ದಾರೆ. ನಿಮ್ಮ ಧರ್ಮಕ್ಕೆ ಮತ್ತೊಬ್ಬರ ಧರ್ಮದಿಂದ, ನಿಮ್ಮ ದೇವರಿಗೆ ಮತ್ತೊಬ್ಬ ದೇವರಿಂದ ಗಂಡಾಂತರ ಎದುರಾಗಿದೆ! ಎಂದು ಸುಳ್ಳುಗಳನ್ನೆಬ್ಬಿಸಿ, ಅನ್ಯಕೋಮಿನ ಜನರನ್ನು ಪರಸ್ಪರ ಬಡಿದಾಡಿ ಕೊಂಡು ಸಾಯುವಂತೆ ಮಾಡುತ್ತಿರುವ ಎಲ್ಲಾ ಧರ್ಮಗಳ ನಾಯಕರುಗಳ, ನಕಲಿ ದೇಶಭಕ್ತ ಸಂಘಟನೆಗಳ, ಭ್ರಷ್ಟ ರಾಜಕಾರಣಿಗಳ ಮಕ್ಕಳುಗಳ್ಯಾರು ಕೋಮುಗಲಭೆಗಳಲ್ಲಿ, ಧರ್ಮ ಉಳಿಸುವ ಹೋರಾಟದಲ್ಲಿ ಬೀದಿ ಹೆಣವಾಗುವುದಿಲ್ಲ! ಧರ್ಮಕ್ಕಾಗಿ ಪ್ರಾಣ ಕೊಡಬೇಕಾಗಿರುವವರು ಬಡ ಮಧ್ಯಮ ವರ್ಗದ ಕುಟುಂಬದ ಮಕ್ಕಳುಗಳೇ! ಸತ್ಯ ಸಂಗತಿ ಎಂದರೆ ಈಗ ನಿಜವಾಗಿಯೂ ಯಾವ ಧರ್ಮಕ್ಕೂ ಯಾರಿಂದಲೂ ಗಂಡಾಂತರ ಉಂಟಾಗಿಲ್ಲ. ಪ್ರೀತಿ, ಕರುಣೆ ಸ್ನೇಹ, ಬಾತ್ರತ್ವ, ಸಹಬಾಳ್ವೆ, ಸೌಹಾರ್ದತೆ, ಸಮಾನತೆ ಸಾರುವ ಯಾವ ಧರ್ಮವನ್ನು ಯಾವ ಧರ್ಮವೂ ನುಂಗಿಹಾಕಲು ಸಾಧ್ಯವೇ ಇಲ್ಲ! ಕೆಟ್ಟ ಮನಸ್ಥಿತಿಯ ಕ್ರೂರಿಗಳಿಂದ, ಅಸಮಾನತೆ, ಅಸಹಿಷ್ಣುತೆ, ಅಸಹನೆ, ಅಜ್ಞಾನ, ಅಶಾಂತಿ, ಅನಾಗರಿಕತೆ, ಮೂಡನಂಬಿಕೆ ಬಿತ್ತುತ್ತಾ ಇರುವ ಮೂರ್ಖ ಜಾತಿವಾದಿ, ಕೋಮು ವಾದಿಗಳಿಂದ ಕೆಲವು ಧರ್ಮಗಳಿಗೆ ಹಿನ್ನಡೆ ಉಂಟಾಗಿದೆ ಅಷ್ಟೇ. ಹಿಂಸೆಯ ಮೂಲಕ ಧರ್ಮಭೋಧಿಸಲು ಹೊರಟ ಯಾವ ರಾಷ್ಟ್ರವೂ ನೆಮ್ಮದಿಯಾಗಿಲ್ಲ. ಹಿಂಸೆಯನ್ನೆ ತನ್ನ ಧರ್ಮವೆಂದು ಕೊಂಡಿರುವ ಮೂಲಭೂತವಾದಿಗಳನ್ನು ಇತಿಹಾಸ ಉಳಿಸಿ ಕೊಂಡಿಲ್ಲ! ಆದ್ದರಿಂದ ದೇಶದ ಸಮಗ್ರ ಅಭಿವೃದ್ಧಿಗೆ ಭಾರತದಲ್ಲಿರುವ ಎಲ್ಲಾ ಧರ್ಮಗಳ ಜನರ ನಡುವೆ ಸಾಮರಸ್ಯ ಸಹಬಾಳ್ವೆ, ಸಹೋದರತೆಯ ಸಮನ್ವಯತೆಯನ್ನು ಸಾಧಿಸಬೇಕಿದೆ. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ, ನಾವು ಒಂದೆ ದೇಶದೊಳಗಿನ ಜನರು ಜಾತಿಮತ ಧರ್ಮಗಳ ಹೆಸರಿನಲ್ಲಿ ಪರಸ್ಪರ ಕೋಮುಗಲಭೆ ಮಾಡಿಕೊಂಡು ಬಡಿದಾಡಿ, ಕಚ್ಚಾಡಿ ಸಾಯುತ್ತಾ ದೇಶದ ಆಂತರಿಕ ಅಭಿವೃದ್ಧಿಗೆ ನಾವೇ ಕಂಟಕವಾಗಿ, ದೇಶದ ಜನರು ಮತ್ತು ದೇಶ ಈ ಧರ್ಮಗಳ ಕಲಹದಿಂದ ಹೊರಬರಲಾಗದೇ ನರಳುತ್ತಾ ಅಭಿವೃದ್ಧಿಯಲ್ಲಿ



ಕುಂಟುತ್ತಾ ಸಾಗುವ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆಲ್ಲ ಪ್ರಮುಖ ಕಾರಣ. ರಾಜಕಾರಣ. ನಮ್ಮ ದೇಶದ ರಾಜಕಾರಣದಲ್ಲಿ ಹೊಸ ಕ್ರಾಂತಿ ಮೂಡದೆ ಹೋದರೆ ಜನರು ಹೀಗೆಯೇ ಸುದೀರ್ಘವಾಗಿ, ನಿರಂತರವಾಗಿ ಈ ಭ್ರಷ್ಟಾಚಾರ, ಕೋಮುಗಲಭೆ ಗಳಿಂದ ನರಳಿ ನರಳಿ ಸಾಯಬೇಕಾಗುತ್ತದೆ.

## ಕೊಲೆಗೆ ರಾಜಕೀಯ ಪ್ರೇರಣೆ ಇತ್ತೇ?

ಶಿವಮೊಗ್ಗದ ಸೀಗೇಹಟ್ಟಿಯ ಭಜರಂಗಿ ಹರ್ಷನ ಹತ್ಯೆಯ ಹಿಂದೆ ಇರುವ ಕಿಂಗ್ ಪಿನ್ ಗಳು




ಯಾರು? ಕೊಲೆಗೆ ರಾಜಕೀಯ ಹಿನ್ನೆಲೆಯ ಪ್ರೇರಣೆ ಇತ್ತೇ? ಅಥವಾ ಭಯೋತ್ಪಾದಕ ಸಂಘಟನೆಗಳ ಕೈವಾಡ ಇರುವ ಬಗ್ಗೆ ಮಾಹಿತಿ ಇದ್ದರೆ ಪೊಲೀಸರು ಪತ್ತೆ ಹಚ್ಚಬೇಕಿದೆ. ಈಗ ಕೊಲೆಗಡುಕರಾದ ಕಾಸಿಪ್. ನದೀಂ, ಜಿಲಾನಿ, ಆಸಿಫ್ ಉಲ್ಲಾಖಾನ್, ರಿಯಾನ್ ಶರೀಫ್,ನಿಹಾನ್, ಅಪ್ನಾನ್, ಮುಜಾಹಿದ್ದೀನ್, ಸಲ್ಮಾನ್, ಚಿಕ್ಕು ಇವರೆಲ್ಲರೂ ಸ್ಥಳೀಯರೇ ಆಗಿದ್ದು ಇವರಲ್ಲಿ ಕೆಲವರು ಹರ್ಷನ ಮನೆಯ ಬಳಿಯ ಪಕ್ಕದ ಏರಿಯಾದವರೇ ಆಗಿದ್ದಾರೆ. ಆತನಿಗೂ ಚಿರಪರಿಚಿತರೇ. ಬಿಜೆಪಿಯವರು ಕೊಲೆಗಡುಕರಿಗೆ ಕೇರಳದ ಗುಪ್ತಸ್ಥಳದಲ್ಲಿ ಹತ್ಯೆಗೆ ತರಬೇತಿ ನೀಡಲಾಗಿದೆ ಎಂದು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಕೊಲೆಗಾರರು ಕೊಲೆಯ ನಂತರ ಬೆಂಗಳೂರಿನಲ್ಲಿ ಬಂದು ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿ ತಲೆಮರೆಸಿಕೊಂಡಿದ್ದರೆಂಬುದು ಕೊಲೆಯ ಸಂಚಿನ ರೂವಾರಿಗಳು ಕರ್ನಾಟಕದ ಹಲವು ಭಾಗಗಳಲ್ಲಿ ಇದ್ದಾರೆಂಬುದನ್ನು ಮೇಲ್ನೋಟಕ್ಕೆ ತೋರಿಸುತ್ತಿದೆ. ಬಿಜೆಪಿ ಪಕ್ಷ ಈ ಕೊಲೆಯ ಹಿಂದೆ ಪಿ.ಎಫ್.ಐ. ಕ್ಯಾಂಪಸ್ ಫ್ರಂಟ್ ಸಂಘಟನೆಗಳ ಕೈವಾಡ ಇದೆ ಎಂದು ಆರೋಪಿಸುತ್ತಿದ್ದಾರೆ. ಹಿಜಾಬ್ ಗಲಾಟೆಯ ಹಿಂದೆಯೂ ಇದೇ ಸಂಘಟನೆಗಳ ಹೆಸರನ್ನೇ ಉಲ್ಲೇಖಿಸಲಾಗಿತ್ತು! ಹಾಗೆಯೇ ಎಸ್.ಡಿ.ಪಿ.ಐ. ಎಂಬ ರಾಜಕೀಯ ಪಕ್ಷದ ಸಹಕಾರವೂ ಬಜರಂಗೀ ಹರ್ಷನ ಕೊಲೆಯಲ್ಲಿ ಇರುವ ಸಾಧ್ಯತೆಯನ್ನು ಪದೆ ಪದೆ ಪುನರುಚ್ಚರಿಸಿ, ಈ ಮುಸ್ಲಿಂ ಸಂಘಟನೆಗಳನ್ನು ಬ್ಯಾನ್ ಮಾಡುವ ಮಾತುಗಳಾಗುತ್ತಿವೆ! ಈ ಕೇಸರೀ ಆಕ್ಟಿವಿಸ್ಟ್ ಹರ್ಷನಿಗೆ ಇಸ್ಲಾಮಿಕ್ ಟೆರರಿಸ್ಟ್ ಗ್ರೂಪ್ ಗಳಿಂದ ಪ್ರಾಣಬೆದರಿಕೆ(ಪತ್ವಾ)ಇತ್ತು ಎನ್ನಲಾಗಿದೆ! ಈಗ ಬೆಂಗಳೂರಿನ ಒಬ್ಬ ಸಂಸದ ಮತ್ತಿಬ್ಬರು ಹಿಂದೂ ಸಂಘಟನೆಗಳ ಕಾರ್ಯಕರ್ತರೂ(ಸಿದ್ದಾಪುರ ಸುತ್ತಮುತ್ತ ಮಸೀದಿಗಳ ಮೈಕ್ ತೆಗೆಸಿದವರು) ಹಿಟ್ ಲಿಸ್ಟ್ ನಲ್ಲಿರುವ ಶಂಕೆಯಿದೆ. ರಾಜ್ಯದ ಪೊಲೀಸರು ಅವರಿಗೂ ರಕ್ಷಣೆ ಒದಗಿಸಿದ್ದಾರಂತೇ! ಈ ಹಿಟ್ ಲಿಸ್ಟ್ ಪಟ್ಟಿ ತಯಾರಿಸುತ್ತಿರುವ ಸಮಾಜಘಾತುಕ ಶಕ್ತಿಗಳು ಯಾರು? ಈ ರಾಜ್ಯದ ಕಾನೂನು ಸುವ್ಯವಸ್ಥೆಗೆ ಏನಾಗಿದೇ? ಇಂಟೆಲಿಜೆನ್ಸ್ ಫೇಲ್ಯೂರ್ ಆಗಿದೆಯಾ? ರಾಜ್ಯದ ಗ್ರಹಸಚಿವರ ಜಿಲ್ಲೆಯಲ್ಲೇ ವಾರಕ್ಕೆ ನಾಲ್ಕು ಕೊಲೆಗಳಾಗುತ್ತಿವೆ! ಈ ಸಂಘಟಿತ ಅಪರಾಧಿ ಕ್ರತ್ಯವೆಸಗಲು ಸಂಚು ರೂಪಿಸುತ್ತಿರುವ ಸಮಾಜಘಾತುಕ ಶಕ್ತಿಗಳನ್ನು ಮಟ್ಟಹಾಕಲು ಪೊಲೀಸರು ಮತ್ತಷ್ಟು ಚಾಣಾಕ್ಷತೆ ತೋರಿಸಬೇಕು. ಹಿಂದೂ ಭಯೋತ್ಪಾದಕ ಸಂಘಟನೆಗಳು ಮೂಡನಂಬಿಕೆ ವಿರೋಧಿ ಹೋರಾಟಗಾರರನ್ನು, ಪ್ರಗತಿಪರ ಚಿಂತಕರನ್ನು, ಪತ್ರಕರ್ತರು, ಬರಹಗಾರರನ್ನು ಗುರಿಯಾಗಿಸಿಕೊಂಡು ನಿಗೂಢ ತಂಡಕಟ್ಟಿ ಕೊಲೆಮಾಡಿಸುತಿದ್ದಾಗ ಪತ್ರಕರ್ತೆ ಗೌರಿ ಲಂಕೇಶ್ ರವರ ಕೊಲೆ ಪ್ರಕರಣವನ್ನು ನಮ್ಮ ಕರ್ನಾಟಕದ ಪೊಲೀಸರೇ ಬೇದಿಸುವವರೆಗೂ ಯಾರಿಗೂ ತಿಳಿದೇ ಇರಲಿಲ್ಲ. ಹಿಂದೂ ಸಂಘಟನೆಗಳ ಕಾರ್ಯಕರ್ತರೂ ಈಗ ಭಯೋತ್ಪಾದಕ ಕ್ರತ್ಯವೆಸಗಲು ಹಿಂದೆ ಮುಂದೆ ನೋಡುತ್ತಿಲ್ಲವೆಂಬುದು ಮಾಲೆಗಾಂವ್ ಬಾಂಬ್ ಬ್ಲಾಸ್ಟ್ ನಂತರ ಸಾಬೀತಾಗಿದೆ. ಮತ್ತೊಂದೆಡೆ ಕರ್ನಾಟಕದವನೇ ಆದ ಮುಜಾಹಿದ್ದೀನ್ ಸಂಘಟನೆಯ ಭಯೋತ್ಪಾದಕ ಯಾಸಿನ್ ಭಟ್ಕಳ್ ನ ಗ್ಯಾಂಗ್ ಸರಣಿ ಬಾಂಬ್ ಬ್ಲಾಸ್ಟ್ ನಡೆಸಿ ಇತ್ತೀಚೆಗೆ ತಾನೆ ಕೋರ್ಟ್ ತೀರ್ಪು ನೀಡಿ ಶಿಕ್ಷೆ ವಿಧಿಸಿದೆ. ಈ ದೇಶದಲ್ಲಿ ಇಂಡಿಯಾ ಪಾಕಿಸ್ತಾನ ವಿಭಜನೆ ಯಾದಾಗಿನಿಂದಲೂ ಇಲ್ಲಿರುವ ಮುಸ್ಲಿಮರು ಭಾರತದವರೇ ಆಗಿದ್ದರೂ, ಬಲಪಂಥೀಯ ಮನಸ್ಥಿತಿ ಜನರು ಗುಪ್ತವಾಗಿ ಸಂಘಟನೆ ಕಟ್ಟಿಕೊಂಡು ಅವರನ್ನು ದ್ವೇಷಿಸುತ್ತಿರುವುದು ಬಾಬ್ರಿ ಮಸೀದಿ ಧ್ವಂಸ ಪ್ರಕರಣ. ಗುಜರಾತ್ ಹತ್ಯಾಕಾಂಡದಲ್ಲಿ ಸಾಬೀತಾಗಿದೆ. ಇವರ ವಿರುದ್ಧ ಭಾರತದಲ್ಲೇ ಇರುವ ಕೆಲವು ಇಸ್ಲಾಂ ಮೂಲಭೂತವಾದಿ ಸಂಘಟನೆಗಳು, ಮದರಸಾ ಗಳೂ, ಒಳಗೊಳಗೆ ಭಯೋತ್ಪಾದಕರೊಡನೆ ಕೈಜೋಡಿಸಿರುವುದು ಸುಳ್ಳೇನಲ್ಲ. ಭಾರತ ಸ್ವಾತಂತ್ರ ಬಂದಾಗಿನಿಂದಲೂ ಈ ಆಂತರಿಕ ವಿಭಿನ್ನ ಧರ್ಮಾಚರಣೆಯ ವೈರುಧ್ಯಗಳಿಂದ ಒಳಗೊಳಗೆ ಬೇಯುತ್ತಾ ನಲುಗುತ್ತಿದೆ. ಬಾತ್ರತ್ವ, ಸಹಬಾಳ್ವೆ ಬೋಧಿಸಿ ಭಾರತೀಯರು ನಾವೆಲ್ಲರೂ ಒಂದು ಎಂದು ಈ ಗಾಯವನ್ನು ವಾಸಿ ಮಾಡಬೇಕಾದ ರಾಜಕೀಯ ಪಕ್ಷಗಳು ತಮ್ಮ ಒಟಿನ ರಾಜಕಾರಣಕ್ಕಾಗಿಯೇ ಈ ಹಿಂದೂ-ಮುಸ್ಲಿಂ ಆಂತರಿಕ ಕಚ್ಚಾಟಗಳಿಗೆ ತುಪ್ಪಸುರಿಯುತ್ತಾ, ಅಧಿಕಾರದ ಚುಕ್ಕಾಣಿ ಹಿಡಿಯಲು ತಾವೇ ಕೋಮುಗಲಭೆ ಸ್ರಷ್ಟಿಸಿ ಜನರನ್ನು ದೇವರು ಧರ್ಮದ ಹೆಸರಿನಲ್ಲಿ, ಮಂದಿರ-ಮಸೀದಿ ಮತಾಂತರ, ಲವ್ ಜೆಹಾದ್ , ಹಿಜಾಬ್-ಕೇಸರಿ ಶಾಲುಗಳ ಗಲಾಟೆಗಳಲ್ಲಿ ಮುಳುಗೇಳುವಂತೆ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಕೋಮುಗಲಭೆ ಗಳಿಗೆ ಕಾರಣವಾಗುತ್ತಿರುವ ನಿಜವಾದ ಸಂಘಟನೆಗಳನ್ನು ತನಿಖೆ ನಡೆಸಿ ಪತ್ತೆಹಚ್ಚಿ ನಿಷೇಧಿಸಿ ಸೂಕ್ತ ಕ್ರಮ ಕೈಗೊಳ್ಳಲಿ. ಭಜರಂಗದಳದ ಕಾರ್ಯಕರ್ತ ಹರ್ಷನ ಹೆಣವನ್ನು 144 ನಿಷೇದಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ಮಾಡಿಸುವ ಬಿಜೆಪಿ ಸಂಸದರು, ಸಚಿವರು, ಶಾಸಕರ ಉದ್ದೇಶ ವೇನಿತ್ತು? ಶಿವಮೊಗ್ಗದ ಬೀದಿಗಳಲ್ಲಿ ಅಮಾಯಕ ಬೀದಿ ವ್ಯಾಪಾರಿಗಳ ಮೇಲೆ ದಾಳಿಮಾಡಿದ ಉದ್ರಿಕ್ತ ಧರ್ಮಾಂಧರ ಗುಂಪು ಹಾಡು ಹಗಲೇ ಮಚ್ಚು ಲಾಂಗು, ದೊಣ್ಣೆಗಳನ್ನಿಡಿದು ರಸ್ತೆಗಳಲ್ಲಿ ನಿಂತಿದ್ದ ಮೂವತ್ತಕ್ಕೂ ಹೆಚ್ಚಿನ ವಾಹನಗಳನ್ನು ಪುಡಿಮಾಡಿದ್ದಾರೆ. ಹದಿನೈದು ಜನರಿಗೆ ಗಂಭೀರ ಮಾರಣಾಂತಿಕ ಗಾಯಗಳಾಗಿವೆ. ಹಲವು ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ. ಒಂದು ಕೋಮಿನ ಮನೆಗಳಿಗೆ ನುಗ್ಗಿ ಕಲ್ಲು ತೂರಲಾಗಿದೆ. ಇಷ್ಟೆಲ್ಲಾ ನಡೆದಿರುವುದು ಆಡಳಿತ ಪಕ್ಷದ ರಾಜಕೀಯ ನಾಯಕರ ಇಶಾರೆಯ ಮೇರೆಗೆ! ಶಿವಮೊಗ್ಗ ಈಗಲೂ ಯಾವ ಕ್ಷೇತ್ರದಲ್ಲಾದರೂ ಕೋಮುಗಲಭೆ ಯಿಂದ ಹೊತ್ತಿ ಉರಿಯಬಹುದು. ಬೂದಿ ಮುಚ್ಚಿದ ಕೆಂಡದಂತೆ ಇರುವ ಶಿವಮೊಗ್ಗದ ಮುಸ್ಲಿಮರನ್ನು ಕಾಪಾಡಿ ಎಂಬ ಸೇವ್ ಶಿವಮೊಗ್ಗ ಮುಸ್ಲಿಂ ಹ್ಯಾಸ್ ಟ್ಯಾಗ್ ದೇಶದಾದ್ಯಂತ ಟ್ರೆಂಡಿಂಗ್ ನಲ್ಲಿ ಮೂರನೇ ಸ್ಥಾನದಲ್ಲಿದ್ದರೇ, #ಹರ್ಷ ನ ಹೆಸರಿನ ಹ್ಯಾಸ್ ಟ್ಯಾಗ್ ದೇಶದಾದ್ಯಂತ ಎರಡನೇ ಸ್ಥಾನದಲ್ಲಿದೆಯೆಂದರೇ ನೀವೇ ಊಹಿಸಿಕೊಳ್ಳಿ ಕೋಮುಗಲಭೆಯ ಭಯದಲ್ಲಿ ಶಿವಮೊಗ್ಗದ ಜನರು ಜೀವ ಕೈಯಲ್ಲಿಡಿದು ಹೇಗೆ ನಡುಗುತ್ತಿರುವ ಹುದು! ಪೊಲೀಸ್ ಇಲಾಖೆ ಹೊರ ರಾಜ್ಯಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಿಕೊಂಡು ಶಾಂತಿ ಸೌಹಾರ್ದತೆ ಕಾಪಾಡಲು ಟೊಂಕಕಟ್ಟಿ ನಿಂತಿದ್ದಾರೆ. ಒಬ್ಬ ಬೇಜವಾಬ್ದಾರಿ ಸಚಿವ ಈಶ್ವರಪ್ಪನೇ ದೇಶದ ತ್ರಿವರ್ಣ ಧ್ವಜವನ್ನು ಕಿತ್ತು ಕೇಸರಿ ಧ್ವಜವನ್ನು ಕೆಂಪುಕೋಟೆ ಮೇಲೆ ಹಾಕುತ್ತೇವೆಂದು ದೇಶದ್ರೋಹಿ ಸಂದೇಶವನ್ನು ಯಾವ ಅಳುಕಿಲ್ಲದೆ ಕೊಡುತ್ತಾನೆಂದರೇ, ಇದನ್ನು ಕೇಳಿಸಿಕೊಂಡ ಈ ಕೇಸರಿ ಆಕ್ಟಿವಿಸ್ಟ್ ಗಳಿಗೆ ಮುಸ್ಲಿಮರ ಮೇಲೆ ವಿನಾಕಾರಣ ಮುರಿದುಕೊಂಡು ಬೀಳುವಂತೆ ರಣ ವೀಳ್ಯಕೊಟ್ಟಂತಾಗುವುದಿಲ್ಲವೇ? ಹಿಂದೂ ಕಾರ್ಯಕರ್ತರ ಕೊಲೆಗಳು ಇದೇ ಮೊದಲಲ್ಲ. ಹರ್ಷನದೇ ಕೊನೆಯಾಗುತ್ತದೆಂಬ ಗ್ಯಾರಂಟಿಯೇನೂ ಇಲ್ಲ. ಬೆಂಗಳೂರಿನಲ್ಲಿ ಗಣವೇಶ ತೊಟ್ಟು ಪಥಸಂಚಲನ ಮುಗಿಸಿ ಮನೆಗೆ ಹೊರಟಿದ್ದ ರುದ್ರೇಶ್ ನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆಮಾಡಲಾಗಿತ್ತು. ಕರಾವಳಿ ತೀರದ ಊರುಗಳಲ್ಲಿ ಹಿಂದೂ ಮುಸ್ಲಿಂ ಸಂಘಟನೆಗಳ ಸಂಘರ್ಷ ಇಂದು ನೆನ್ನೆಯದಲ್ಲ. ಇಲ್ಲಿ ಹಿಂದೂ ಕಾರ್ಯಕರ್ತರ ಕೊಲೆಗಳೂ ಸಾಕಷ್ಟು ಬಾರಿ ಅನುಮಾನಾಸ್ಪದ ರೀತಿಯಲ್ಲಿ ಆಕ್ಸಿಡೆಂಟ್ ಆಗಿ ಪತ್ತೆಯಾಗಿವೆ!ಪರೇಶ್ ಮೇಸ್ತಾ ಎಂಬ ಹಿಂದೂ ಕಾರ್ಯಕರ್ತನನ್ನು 2017 ರಲ್ಲಿ ನಡೆದಿದ್ದ ಹೊನ್ನಾವರ ಪಟ್ಟಣದ ಕೋಮುಗಲಭೆ ವೇಳೆ ಕೆರೆಯಲ್ಲಿ ಮುಳುಗಿಸಿ ಸಾಯಿಸಲಾಗಿತ್ತು!ಆರ್.ಎಸ್.ಎಸ್. ಕಾರ್ಯಕರ್ತ ಶರತ್ ಮಡಿವಾಳರನ್ನು ಬಿ.ಸಿ.ರೋಡ್ ಸಮೀಪ ಹತ್ಯೆ ಮಾಡಲಾಗಿತ್ತು.ಕಲಬುರಗಿಯ ಅಫಜಲಪುರದ ಮಹಾದೇವ್ ಕಾಳೆ, ಬಳ್ಳಾರಿಯ ರಮೇಶ್ ಬಂಡಿ,ತಿಪಟೂರಿನ ತಿಪ್ಪೇಶ್,ಬೀದರ್ ಜಿಲ್ಲೆಯ ಸುನಿಲ್ ಡೋಂಗ್ರೆ ಹೀಗೆ ಹಲವಾರು ಕಡೆ ರಾಜ್ಯದಲ್ಲಿ ಮುಂಚಿನಿಂದಲೂ ಹಿಂದೂ ಕಾರ್ಯಕರ್ತರ ಕೊಲೆಗಳು ನಡೆಯುತ್ತಲೇ ಇವೆ. ಆದರೆ ಪೊಲೀಸರ ಸೂಕ್ತ ತನಿಖೆಯಿಂದ ಮಾತ್ರ ಕೊಲೆಗಡುಕರಿಗೆ ಕಠಿಣ ಶಿಕ್ಷೆ ಕೊಡಿಸಲು ಸಾಧ್ಯ. ಅದನ್ನು ಬಿಟ್ಟು ರಾಜಕಾರಣಿಗಳು ಅಮಾಯಕರನ್ನು ಗುರಿಯಾಗಿಸಿಕೊಂಡು ಕೋಮುಗಲಭೆ ಗಳನ್ನೆಬ್ಬಿಸಲು ಪ್ರಯತ್ನಿಸುವುದು ಈ ರಾಜ್ಯದ ದುರಂತ.

ರಾಜ್ಯದ ಯಾವ ಜಿಲ್ಲೆಯಲ್ಲಾದರೂ ಹರ್ಷನ ಕೊಲೆಯ ಕಿಚ್ಚು ಹೊತ್ತಿ ಉರಿದರೂ ಅಚ್ಚರಿಯೇನಿಲ್ಲ! ರಿವೇಂಜ್ ಕಿಲ್ಲಿಂಗ್ ಗಳಾಗುವ ಎಲ್ಲಾ ಲಕ್ಷಣಗಳೂ ಇವೆಯಂತೆ! ಶಿವಮೊಗ್ಗದಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿ, ಅಶ್ರುವಾಯು ಸಿಡಿಸಿ ಶವಯಾತ್ರೆಯ ಗಲಭೆಯನ್ನು ನಿಯಂತ್ರಿಸಲು ಶ್ರಮಿಸಿದ ಪೊಲೀಸರ ಕಾರ್ಯಾಚರಣೆಯಿಂದಾಗಿ ಹರ್ಷನ ಶವಯಾತ್ರೆಯಲ್ಲಿ ಒಂದೆರಡು ಹೆಣ ಬೀಳಿಸಿ ಕೋಮುಗಲಭೆಯ ಲಾಭ ಪಡೆಯಲು ಹವಣಿಸಿದ್ದ ರಾಜಕೀಯ ಪುಡಾರಿಗಳ ಆಸೆ ನೆರವೇರಲಿಲ್ಲ! ರಾಜಕಾರಣಿಗಳು ನೀಡುತ್ತಿರುವ ಪರಿಹಾರದ ಚೆಕ್ಕುಗಳು ಹರ್ಷನ ಜೀವಕ್ಕೆ ಬೆಲೆಕಟ್ಟಲು, ಆತನ ತಂದೆ ತಾಯಿಗಳಿಗೆ ಸಮಾಧಾನಿಸಲು ಸಾದ್ಯವೇ ಇಲ್ಲ. 'ಹರ್ಷಾ ಅಮರ್ ರಹೇ!' ಎಂದು ಪ್ರಾರಂಭವಾಗಿರುವ ಹರ್ಷೋದ್ಗಾರದ ಒಣ ಕೂಗುಗಳು, ಹರ್ಷನ ಕುಟುಂಬದ ಹೆಸರಿನಲ್ಲಿ ಆನ್ಲೈನ್ ನಲ್ಲಿ ನಡೆಯುತ್ತಿರುವ ಚಂದಾ ಚಂದಾ ಎತ್ತುವ ಅಭಿಯಾನಗಳು, ಹುತಾತ್ಮನಾಗುವ ಹುಚ್ಚು ಹಿಡಿಸಿ ಮತ್ಯಾರನ್ನೋ ಈ ಬೀದಿಹೆಣವಾಗುವ ಕೆಲಸಕ್ಕೆ ಕೈ ಬೀಸಿ ಕರೆಯದಿರಲೀ..

# ಮರ್ತ್ಯದಾ ಸೋಜಿಗವ ನೋಡೊ ಬಸವಣ್ಣ!

ಸ್ಥಿತಿಬಿಂಬ

ಡಾ.ಶಿವಕುಮಾರ್ ಕಂಪ್ಲಿ



ಹಾಡುವ ಪರಂಪರೆಯ ಮೂಲಕ ಆಧುನಿಕ ಕಾವ್ಯಕ್ಕೆ ಮತ್ತೊಂದು ಬಗೆಯ ಪ್ರೇರಣೆ ಕೊಟ್ಟವರು ತತ್ವಪದಕಾರರು. ಹಾಗೆ ನೋಡಿದರೆ ಶರೀಫರ ರಿವಾಯತ್ ಪದಗಳು ಲಾವಣಿ ಸಂಪ್ರದಾಯಕ್ಕೇ ಸೇರಿದವು.ಆಧುನಿಕ ಕಾವ್ಯಕ್ಕೇ ಭಾಷೆಯ ಬಳಕೆ ಕುರಿತು ಸೂಚನೆ ನೀಡಬಲ್ಲ ತತ್ವಪದಕಾರರು, ಪ್ರಾದೇಶಿಕ ವೈವಿಧ್ಯತೆಯನ್ನು ತಂದವರು.

"ಬಯಲು ಆಲವಿಗೆ ನವಿಲು ಕುಣಿದು ನಿಂತು
ತೈಲವಿಲ್ಲದ ಜ್ಯೋತಿ ಬೆಳಕು ಮದೀನದಿ" ಎನ್ನುವಾಗ

ಇಲ್ಲಿ ಕುಣಿಯುವ ನವಿಲು ಹೊಸ ರೀತಿಯದು ಹೀಗೆ ಹೇಳುವ ಭಾಷೆಯೂ ಕೂಡ ಹೊಸ ಬಗೆಯದು. ಹೊಸ ಕಾಲದ ಅನೇಕ ಮುನ್ಸೂಚನೆಗಳನ್ನು ನೀಡಬಲ್ಲ ಅರಿವು ತತ್ವಪದಕಾರಲ್ಲಿವೆ. ಹಾಗಾಗಿ ತಾವು ನಡೆದಾಡುವ ನೆಲದೊಳಗೇ ಅವರು ಕಿರಸ್ತಾನ ಬಾದಶಹನ್ನು, ವಿಕ್ಟೋರಿಯಾ ರಾಣಿಯನ್ನು, ಇನ್‌ಸ್ಪೆಕ್ಟರ್, ಡಾಕ್ಟರ್, ಸರ್ಕಾರಿ ಮಾಸ್ತರನನ್ನು ಗಮನಿಸುತ್ತಾರೆ; ಗಿರಣಿ ಕುರಿತು ಬಜಾರ್ ಕುರಿತು, ಪ್ರತಿಕ್ರಿಯಿಸುತ್ತಾರೆ.

ಪಲ್ಲಕ್ಕಿ ದಂಡಿಗೆ ಯಾದೆ
ಪತ್ರಿಗೆ ಬುಟ್ಟಿಯಾದೆ
ಎಲ್ಲಮ್ಮನ ಗುಡ್ಡದೊಳಗೆ ಅಡ್ಲಿಗಿನಾದೆ ॥

ತಟ್ಟನೆ ಓದಿದರೂ ಈ ಪದ್ಯದೊಳಗೆ ಎರಡು ಸಮುದಾಯಗಳ ಸಂಕೇತಿಕ ರೂಪಗಳನ್ನ ಕೂಡಿಸುವ, ಜೋಡಿಸುವ ಕೆಲಸ ಕಾಣುತ್ತದೆ. ಇಲ್ಲಿ ಪಲ್ಲಕ್ಕಿಯನ್ನು ಅಡ್ಲಿಗಿಯನ್ನು, ತಿಪ್ಪಿಯನ್ನು, ನಂದಿಕೋಲನ್ನು ಜೋಡಿಸುವ ಪ್ರಕ್ರಿಯೆ ನಮ್ಮಲ್ಲಿ ಅಂದುಕೊಂಡು ಬರುತ್ತಿರುವ 'ಮೇಲು' 'ಕೀಳು' ಸಾಂಕೇತಿಕ ಪರಿಭಾಷೆಯನ್ನು ಒಟ್ಟಾಗಿಸುವ ಪ್ರಯತ್ನದಂತೆ ಕಾಣುತ್ತದೆ.ತತ್ವ ಪದಕಾರರು ಈ ರೀತಿಯಲ್ಲಿ ಎರಡು ಭಿನ್ನ ಸಮುದಾಯಗಳನ್ನೂ ಒಂದು ಗೂಡಿಸುತ್ತಾರೆ.ಅಲ್ಲಾ ಅಲ್ಲಮನನ್ನ ಒಂದೇ ಎಂದು ಬೆಸೆಯುತ್ತಾರೆ.ಏಕ ದೇವ ಏಕ ಧರ್ಮಗಳ ವಿಜೃಂಭಣೆಯ ಪರಂಪರೆಯೊಳಗೆ ಶಾಸನಗಳು ಬಹುದೈವ ಬಹು ಪರಂಪರೆಗಳನ್ನ ಹೊತ್ತು ನಿಂತಂತೆ ತತ್ವಪದಕಾರರು ಎರಡು ಭಿನ್ನ ಧರ್ಮಗಳನ್ನ ಏಕಗೊಳಿಸುತ್ತಾರೆ.



ಕನ್ನಡ ಕಾವ್ಯ ಸಂದರ್ಭದೊಳಗೆ 'ಕಡೆಗಣಿತ' ಮತ್ತು 'ನಿರ್ಲಕ್ಷಿತ' ಸಂಸ್ಕೃತಿಯನ್ನು, ಪ್ರತಿಮೆಗಳನ್ನು ಎತ್ತಿ ಲಕ್ಷಿತವಾದ ಅಂದರೆ ಹಾಲೀ ಚಲಾವಣೆಯೊಳಗಿರುವ ಒಮ್ಮತಕ್ಕೆ ಎಲ್ಲಮ್ಮನನ್ನು, ಸಿದ್ದರಾಮೇಶ್ವರನನ್ನು ತರುವಂತಿದೆಯೋ ಗೊತ್ತಿಲ್ಲ. ಏಕೆಂದರೆ ಇದನ್ನೆ ಸರಿ ಎಂದ ಪಕ್ಷದಲ್ಲಿ ಶರೀಫರು (1819–1891) ಎಲ್ಲಮ್ಮನನ್ನು ಒಪ್ಪಿಕೊಂಡು ದೇವದಾಸಿ ಪದ್ಧತಿಯನ್ನು ಒಪ್ಪಿ ಬಿಡುತ್ತಾರೋ ಎಂಬ ಭಾವ ಮೂಡಿಬಿಡುತ್ತದೆ. ತತ್ವಪದಗಳು ಗತಕಾಲದ ಪರಂಪರೆಯೊಂದಿಗೆ ಹರಿದುಬಂದ ತೋಂಡಿಯ ಪ್ರವಾಹ ಮಾತ್ರವಲ್ಲ, ಅವು ಗತಕಾಲದ ಆಯಾ ಸಂಸ್ಕೃತಿಯೊಳಗೇ ವಿಭಿನ್ನತೆಗಾಗಿ, ವೈವಿಧ್ಯತೆಗಾಗಿ ಹೆಣಗುತ್ತಲೇ ಸಂಕೀರ್ಣ ಅರ್ಥವನ್ನು ಹೊಮ್ಮಿಸುವಂತವು. "ಮಠದ ಪ್ರವಚನಗಳಲ್ಲಿರುವಂತೆ ಇಲ್ಲಿ ಶ್ರೋತೃಗಳಿಲ್ಲ. ಈ ಬಯಲೊಳಗೆ ಎಲ್ಲರೂ ಭಾಗಿಗಳು,ನಿರ್ದಿಷ್ಟ ಕೋಣೆಯೊಳಗೆ ಪವಿತ್ರಗ್ರಂಥಗಳನ್ನು ಓದಿ ಹೇಳುವ ಸಂಸ್ಕೃತಿ ಇದಲ್ಲ. ದೇಗುಲ, ಶಾಸ್ತ್ರ, ಪುರಾಣ, ಪುರೋಹಿತ, ಜಗದ್ಗುರು ಈ ಮುಂತಾದ ವರ್ತುಲಗಳಿಂದ ದೂರ ಉಳಿದ ಮನೆ ಮನೆಯ ಅಂಗಳಕ್ಕೆ ಸಾಗುವ ಬಯಲ ಪರಂಪರೆ ಇವರದು. ಇಲ್ಲಿ ದುಡಿಮೆಯ ನಂತರದ ಪುರುಸೊತ್ತನ್ನು ರಂಜಕಗೊಳಿಸುವ ಮನರಂಜನೆ, ದಣಿವನ್ನು ಹಗುರವಾಗಿಸುವ ಹಾಸ್ಯ, ಮುದುಡಿದ ಮನಸ್ಸನ್ನು ತೆರೆಸುವ ಅರಿವುಗಾಣುವಿಕೆ ಎಲ್ಲವೂ ಮೇಳೈಸಿವೆ, ತತ್ವಪದದ ಸಂಸ್ಕೃತಿ ಹಲವು ಸಾಮಾಜಿಕ ನಿಯೋಗಗಳನ್ನು ನೆರವೇರಿಸುವ ಬಗೆಯದು ಈ ತತ್ವಪದಗಳು ಎಚ್.ಎಸ್.ಶಿವಪ್ರಕಾಶ್ ಕಾಣುವಂತೆಯೇ "ಜಗತ್ತು ಧರ್ಮದ್ವೇಷದ ಕೊಂಡ ಹಾಯುತ್ತಿರುವ ಇವತ್ತಿನ ಸಮಸ್ಯೆಗಳಿಗೆ ತತ್ವಪದಕಾರರ ನಾನತ್ವವು ಒಂದು ಒಳದಾರಿಯನ್ನು ತೋರಬಲ್ಲದೇ" ಎಂಬ ಪ್ರಶ್ನೆಯೂ ಗಮನಾರ್ಹ.

ಪರಂಪರೆಯ ಲಿಖಿತ ಬರಹಗಳಲ್ಲಿ ನಿರ್ಧಾರಿತ ಚೌಕಟ್ಟಿನೊಳಗೇ ಹೊಸತನ ರಾಚನಿಕವಾಗಿ ಮುಂದುವರೆದಿದೆ.ಆಡಳಿತ ಜಗತ್ತುಗಳು ಏನೆಲ್ಲಾ ಬದಲಾವಣೆಗಳನ್ನ ಹೊರಡಿಸುವಾಗಲೂ ಜನಪರಂಪರೆಯ ಈ ಕೇಂದ್ರಗಳಲ್ಲೆಲ್ಲಾ ಅನೇಕ ಒಪ್ಪಿತಗಳೇ ಮತ್ತೆ ಮತ್ತೆ ಮುನ್ನಡೆಯುತ್ತದೆ.ಏಕತ್ವವನ್ನ ಒಡೆಯುವ, ಕೂಡಿಸುವ ಅವುಗಳಿಗಿರಬಹುದಾದ ಒಳದಾರಿಗಳ ಒಳಪ್ರಜ್ಞೆಗಳನ್ನು ಕುರಿತ ಯೋಚನೆಗಳೂ ಅಲ್ಲಿವೆ.

18 ಮತ್ತು 19ನೆಯ ಶತಮಾನದ ಬಹಳಷ್ಟು ತತ್ವಪದಕಾರರು ಬ್ರಿಟೀಷ್ ವಸಾಹತು ನೀತಿಗೆ ತೀವ್ರವಾಗಿ ಮುಖಾಮುಖಿಯಾಗಿಲ್ಲ. ಇದ್ದುದರಲ್ಲೇ ಶಿಶುನಾಳ ಶರೀಫ, ನಾಗಲಿಂಗಯ್ಯ, ಕೈವಾರ ನಾರಾಯಣ ತಾತ ಇವರು ಮಾತ್ರ ಹೆಚ್ಚು ಪ್ರತಿಕ್ರಿಯಿಸಿದ್ದಾರೆ. ಕೂಡಲೂರು ಬಸವಲಿಂಗ ಶರಣ ಮತ್ತು ಕಡಕೋಳ ಮಡಿವಾಳಪ್ಪನವರು ಹಲವು ಮುಂಬರುವ ಅಂತಹ ಸೂಚನೆಯನ್ನು ಕಾಲಜ್ಞಾನದ ರೀತಿ ನೀಡಬಲ್ಲರೇ ಹೊರತು ಅಷ್ಟು ಸೂಕ್ಷ್ಮತೆ ಅವರ ಪದಗಳಿಗಿಲ್ಲ. ಬಹುಶಃ ಹೀಗಾಗಲು ಕಾರಣ ತತ್ವಪದಕಾರರ ದೃಷ್ಟಿ "ನಾನಿತ್ತಲೆಳೆದರೆ ತಾನತ್ತಲೆಳೆವುದು, ಇನ್ನೇ ನಿನ್ನೆನೊ" ಎನ್ನುವಂತಿರಬೇಕು. ಏಕತ್ವದ ವ್ಯವಸ್ಥೆಯೊಂದಿಗೆ ಒಟ್ಟಾಗುವುದಕ್ಕಿಂತ ಅದರಿಂದ ಬಿಡಿಸಿಕೊಂಡು ಜನಮುಖಿಯಾಗುವುದರತ್ತ ಅವರು ಹೆಚ್ಚು ಕಾಳಜಿ ವಹಿಸಿದರು.

ನಾಡ ಮಾತುಗಳ ನೀನಾಡವಲ್ಲೆ
ಬಾಯಿಲ್ಲೇಳವಲ್ಲಿ
ನೀ ನಾಡು ಮಾತಿನೊಳಗೆ ನಾದ್ದೇಳವಲ್ಲೆ
ಮಾತು ಕೇಳವಲ್ಲಿ ॥3

ಈ ಮೂಲಕ ತತ್ವಪದಕಾರರನ್ನು ಎರಡೂ ಬಗೆಯ ದೃಷ್ಟಿಕೋನದಿಂದ ಸಾಧ್ಯವಿದೆ.

ಒಂದು ದೇಶೀಯ ವಸಾಹತು ಶಾಹಿಯ ನೆಲೆಯಿಂದ.ಇನ್ನೊಂದು ವಿದೇಶಿಯ ವಸಾಹತು ಶಾಹಿಯ ನೆಲೆಯಿಂದ

ಇವನ್ನು ಹೀಗೆ ವಿವರಿಸಬಹುದು :

1) ಪಾರಂಪರಿಕ ಗತಿಯಲ್ಲಿ ಒಂದು ಸಂಸ್ಕೃತಿ ಹಲವು ಸಂಸ್ಕೃತಿಗಳನ್ನು ತನ್ನಿಂತಾನೇ ಅರಳಿಕೊಳ್ಳಲು ಅವಕಾಶವಾಗದಂತೆ ಮಾಡಲು ತನ್ನ ರಾಚನಿಕ ಹಾಗೂ ತಾತ್ವಿಕ ಚೌಕಟ್ಟನ್ನು ವಿಸ್ತರಿಸಿಕೊಂಡದ್ದು.

2) ವಿದೇಶಿಯ ಅಥವಾ ಪರಕೀಯ ಸಂಸ್ಕೃತಿಯೊಂದು ಆರ್ಥಿಕವಾಗಿ ಆವರಿಸುತ್ತ ಇಲ್ಲಿನ ಸಂಸ್ಕೃತಿಯನ್ನು ಅನುಕರಣ ಶೀಲ ಮತ್ತು ದೈನ್ಯ ಸ್ಥಿತಿಗಿಳಿಸುವುದರ ವಿರುದ್ಧ ಜನರೂಪಕಗಳನ್ನ ಸಿಡಿಸುವುದು. ಕನ್ನಡ ಭಾಷಿಕ ರಚನೆಯ ನೆಲೆಗಳಲ್ಲಿ ಈ ನೆಲದ ಸಂದರ್ಭದಲ್ಲಿ 'ವೈದಿಕ'ವಾದದ್ದು ಸ್ವದೇಶಿಯ ವಸಾಹತುಶಾಹಿಯಾದರೆ ಬ್ರಿಟೀಷರದು ವಿದೇಶಿಯ ವಸಾಹತುಶಾಹಿ.ಸ್ವದೇಶೀಯ ವಸಹಾತುವನ್ನ ವಚನ ಸಾಹಿತ್ಯ ಮೊದಲು ಅಕ್ಷರ ಯುಗದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ 'ಮೇಲು' ಎಂಬ ಸ್ವದೇಶಿಯ ಭ್ರಮೆಯನ್ನು ಸೀಳಿ ಸನಾತನ ವ್ಯವಸ್ಥೆಯನ್ನು ಬದಲಾಯಿಸುವ ಪ್ರಕ್ರಿಯೆಗೆ ಬುನಾದಿ ಹಾಕಿತು.ಈ ಬೇರ ಬಿಳಿಲಿಡಿದು ಹಲವು ಬಗೆಯಲ್ಲಿ ಬೆಳೆದವರು ತತ್ವಪದಕಾರರು. ರಚನೆಯ ದೃಷ್ಟಿಯಿಂದ ಆನಂತರದ ತತ್ವಪದಕಾರರು ವಚನಕಾರರ ಸಾಮಾಜಿಕ ಪ್ರಜ್ಞೆಯನ್ನೂ ಮೀರಿ ಒಂದು ಹೆಜ್ಜೆ ಮುನ್ನಡೆದಿದ್ದಾರೆ.

ದಿಳ್ಳಿಖಾನರ ಅಳಿವಾದಿನ ಬಂತು ಸುವ್ವಿ
ಬಜಾರ ಬಂದೀತು ವ್ಯಾಜ್ಯ ಉಂಟಾದೀತು ।
ಸೂಜಿ ಹೊನ್ನಿಗೊಂದು ಮಾರೀತು ಸುವ್ವಿ
ಮರ್ತ್ಯದಾ ಸೋಜಿಗವ ನೋಡೊ ಬಸವಣ್ಣ !

ತತ್ವಪದಕಾರರು ಸಾಂಪ್ರದಾಯಿಕ ಜಿಗುಟಿನ ಅಳಿವನ್ನ ಸೂಚಿಸುತ್ತಲೇ 'ಬಜಾರನ್ನ', 'ವ್ಯಾಜ್ಯವನ್ನು', ಒಂದೆಡೆಗೇ ತಂದು ವಿದೇಶಿಯ ಆರ್ಥಿಕ ಆವರಿಕೆಯ ಭೀಕರ ಚಿತ್ರವನ್ನು ಕೊಡುತ್ತಾರೆ. ಅಂತಲೇ ಸೂಜಿ, ಇಲ್ಲಿಯ ಅತ್ಯಂತ ಬೆಲೆಯುಳ್ಳ ಹೊನ್ನಿಗೆ ಸಮವಾಗಿದೆ. 'ಬಜಾರ'ದ ಜೊತೆಗೇ ಕಣ್ಣು ಕಟ್ಟುವ ಪಟ್ಟಣದ ಬೀದಿಗಳು, ಇಡೀ "ದಿಳ್ಳಿಖಾನರ' ಸನಾತನತೆಯನ್ನು ಕಡೆಗಣಿಸುವಷ್ಟು ಸೋಜಿಗ ಒಡ್ಡುತ್ತಿವೆ. ಬ್ರಿಟೀಷ್ ಆಗಮನವನ್ನು ಕುರಿತು ತತ್ವಪದಕಾರರು

1) ಆರ್ಥಿಕ ಶೋಷಣೆಯ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿದ್ದಾರೆ.
2) 'ಗಿರಣಿ ವಿಸ್ತಾರ'ವನ್ನು ಸಂಭ್ರಮವೆಂದು ಕಂಡಿದ್ದಾರೆ.
3) ಯಂತ್ರಗಾರಿಕೆಯಿಂದ ನಾಶವಾಗಲಿರುವ ಇಲ್ಲಿನ ಕುಶಲ ಗುಡಿ ಕೈಗಾರಿಕೆಗಳ ಕುರಿತು ಮಿಡಿದಿದ್ದಾರೆ
4) ಬ್ರಿಟೀಷ್ ಆಡಳಿತದ ಎದುರು ಇಲ್ಲಿನ ಜನರ ರಾಜಕೀಯ ಮತ್ತು ಸಾಮಾಜಿಕ ಅಸಹಾಯಕತೆಯನ್ನು ವಿವರಿಸಿದ್ದಾರೆ.
5) ನಗರೀಕರಣದ ಆರಂಭಿಕ ಬೆರಗಿನ ಜೊತೆಗೇ ಅದು ಆನಂತರ ತರಲಿರುವ ವಿಷಮ ಪರಿಣಾಮವನ್ನು ಕುರಿತು ಕೊರಗಿದ್ದಾರೆ.

ಈ ರೀತಿಯ ಅಭಿಪ್ರಾಯಗಳನ್ನು ಗ್ರಹಿಸುತ್ತಲೇ ನೋಡಿದಾಗ ಆ ಕಾಲದಲ್ಲಾಗಲೇ ದುಡಿಯದ ಜನ ಬಿಂಕದ ಬಂಟರಾಗುತ್ತಿರುವ ಸೂಚನೆಯನ್ನು ಕೊಡಲೂರು ಬಸವಲಿಂಗ ಶರಣರು ಸೂಚಿಸಿದ್ದಾರೆ. ಇಲ್ಲಿ ಗೋಮಾಳದಿಂದ ಮೊದಲ್ಗೊಂಡು ಬಂಜರು ಭೂಮಿಗಳವರೆಗೂ ಗುತ್ತಿಗೆ ನೀಡಲಾಗುತ್ತದೆ ಎಂಬುದನ್ನು ಕೈವಾರ ನಾರಾಯಣ ತಾತಯ್ಯ ಹೇಳುತ್ತಾರೆ. 'ದೊರೆಗಳೆಲ್ಲಾ ಮುರಿದು ಬೀಳುತ್ತಾರೆ, ಶ್ರೇಷ್ಠ ಕ್ರಿಸ್ತಬಾದಶಹ ಪಟ್ಟಕ್ಕೆ ಬರುತ್ತಾನೆ' ಎಂಬುದನ್ನು ಷರೀಫರು ತಿಳಿಸುತ್ತಾರೆ. ಹೀಗಾಗಿ ಇಡೀ ತತ್ವಪದಕಾರರಿಗೆ ಸ್ವೀಕರಣೆ ಮತ್ತು ನಿರಾಕರಣೆಯ ನಡುವೆ ತೀವ್ರ ಎಚ್ಚರವೊಂದು ಇದೆ. ಅವರಿಗೆ ವೈಜ್ಞಾನಿಕತೆ ಕುರಿತು, ಅವರ ಶಿಕ್ಷಣ ಕುರಿತು, ಸೋಜಿಗ–ದಿಗ್ಭ್ರಮೆ–ಒಮ್ಮತಗಳಿರುವುದೇ ವಿನಾ ಬ್ರಿಟೀಷರ ನೆಲೆಗಟ್ಟಿಗೊಳ್ಳುವುದರ ಬಗ್ಗೆ ಅವರಿಗೆ ಸಂಪೂರ್ಣ ಅಸಮ್ಮತಿ ಇದೆ.

ತತ್ವಪದ ಕಾರರು ಗ್ರಹಿಸುವ ಶಿಕ್ಷಣ:ಕೆಲ ಸಮುದಾಯಗಳಿಗೆ ಅದರಲ್ಲೂ ಪುರುಷರಿಗೆ ಮೀಸಲಾದ ಶಿಕ್ಷಣ ವಚನಕಾಲದಲ್ಲಿ ಸ್ತ್ರೀಯರಿಗೂ ದೊರಕತೊಡಗಿತು.ಶರಣರೆನ್ನು ಚೌಕಟ್ಟನ್ನ ಹೊಂದಿದ ಈ ಪರಂಪರೆಯ ನಂತರವೂ ಗುರುದೀಕ್ಷೆ ಗುರು ಪರಂಪರೆಗಳು ಇಲ್ಲೂ ಮುಂದುವರೆದವು.ಆದರೆ ಇಲ್ಲಿ ಜಾತಿ ಮತ್ತು ಧರ್ಮ ತಾರತಮ್ಯಗಳಿರಲ್ಲಿಲ್ಲ ಎಂಬುದು ಹೆಮ್ಮೆಯ ವಿಷಯ.ಜ್ಞಾನವನ್ನ ಸಮುದಾಯ ಮೂಲದಿಂದಲೇ ನೋಡುತಿದ್ದ ತತ್ವಪದಕಾರರಿಗೆ ಆಡಳಿತ ವ್ಯವಸ್ಥೆಯೂ ಅಂತಹ ಸಾರ್ವಜನಿಕ ತಾಣಗಳನ್ನ ತೆರೆದಿದ್ದು ಕಂಡು ಅವರು ಸಂಭ್ರಮ ಪಟ್ಟಿದ್ದಾರೆ.

ಸಾಲಿಯ ನೋಡಿದಿಯಾ ಸರಕಾರದ
ಸಾಲಿ ಸದ್ಗುರುವಿನ ಮಾಲು ಮಂಟಪವಿದು
ಮೇಲು ಕಾಣಿಸುತಿದೆ ಭೂಲೋಕದೊಳು

ತತ್ವಪದಕಾರರು ಅಕ್ಷರದ ಆಗಮನವನ್ನು ಅಯ್ಯನ ಶಾಲೆಗಳಿಗಿಂತಲೂ ಭಿನ್ನವಾಗಿ, ಎಲ್ಲರನ್ನು 'ಏಕ'ರೂಪವಾಗಿ ಕಾಣುವ ಸರಕಾರದ ಶಾಲೆಯನ್ನು 'ಮೇಲಾಗಿ' ನೋಡುತ್ತಾರೆ; 'ಸದ್ಗುರುವಿನ ಮಂಟಪ' ವೆಂದು ಬೆರಗು ಮಾಡುತ್ತಾರೆ. ಹಾಗಾಗಿ ಈ ಬಗೆಯ ಆಧುನಿಕ ಮಾಸ್ತರ ಸಹಜವಾಗಿ ಶಿಕ್ಷಣ ವಿಸ್ತಾರ ಮಾಡುವಂತಾದ ಬಗೆ ಅವರಿಗೆ ಒಂದು ಬಗೆಯ ಆತ್ಮೀಯ ಮೋಜೆನಿಸಿದೆ, ಅಕ್ಕರೆಯ ಸೋಜಿಗವಾಗಿದೆ. ಮಸ್ತಕದ ಓದಿಗಿಂತಲೂ ಪುಸ್ತಕದ ಓದು ದೊಡ್ಡದೇ ಎಂದು ಭಾವಿಸುತ್ತಿದ್ದ ಜನಪರಂಪರೆಯ ನಿಲುವಿನಂತೆಯೇ ಮುಂದೆ ಕೂಡಲೂರು ಬಸವಲಿಂಗ ಶರಣರು "ಹಲವು ದೇಶಗಳ ತಿರುಗಿ ನಾನಾ ಭಾಷೆಯ ಕಲಿತು, ಬಲು ಶಾಣ್ಯಾರಾದವರು ಪಂಡಿತರೇ ?" ಎಂದು ಪ್ರಶ್ನಿಸುತ್ತಾರೆ.

ಕಡಕೋಳು ಮಡಿವಾಳಪ್ಪನವರು,ಶರೀಫರೂ ಇಂತಹ ಹಲವು ನೋಟಗಳನ್ನ ನೀಡಿದ್ದಾರೆ.

1. ಬಲ್ಲಂತ ಜ್ಞಾನಿಗಳು ಬಲ್ಲಷ್ಟು ಹೇಳಿದರೆ
ಅಲ್ಲಂತ ಅನಬಾರದು ಎಲೆ ಮನವೇ
ಸೇರಿದವರ ಮುಂದೆ ಜಾರಿ ಬೀಳದಂತೆ
ಪಾರಾಗಿ ಹೋಗಬೇಕು ಎಲೆ ಮನವೆ
2. ನನ್ನ ಒಳಗೆ ನಾ ತಿಳಕೊಂಡೆ । ನನಗೆ

## ಬದುಕಿನ ತುಣುಕು



ಎಲ್ಲ ಮಿತ್ರರೂ ಮುಪ್ಪಾಗುತ್ತಿದ್ದಾರೆ
ನಿಧಾನಕ್ಕೆ ನಡೆಯುತ್ತಿದ್ದಾರೆ ನನ್ನ ಹಾಗೇ
ಹರೆಯದಲ್ಲಿ ಮಿಂಚುತ್ತಿದ್ದ ಪಟ್ಟುಗಳೆಲ್ಲ
ಈಗ ಮಾಯವಾಗಿವೆ

ಯಾರಿಗೋ ಬೊಜ್ಜು ಬಂದಿದೆ
ಇನ್ಯಾರಿಗೋ ಕೂದಲು ಹಣ್ಣಾಗುತ್ತಿವೆ
ಎಲ್ಲರ ತಲೆಯ ಮೇಲೆ ಜವಾಬ್ದಾರಿ
ಎಲ್ಲರಿಗೂ ಸಣ್ಣ ಪುಟ್ಟ ಅಜಾರಿ

ಯಾರಿಗೋ ದೇಹದ ನೋವು
ಯಾರಿಗೋ ಮನದ ಅಳಲು
ದಿನವಿಡೀ ಓಡುತ್ತಿದ್ದವರು
ಈಗ ನಡೆಯುವಾಗಲೂ
ದಣಿವಾರಿಸಿಕೊಳ್ಳುತ್ತಿದ್ದಾರೆ.

ಯಾರಿಗೂ ಸಮಯವಿಲ್ಲ
ಎಲ್ಲರ ಕಣ್ಣಲ್ಲೂ ನೋವಿನ ಛಾಯೆ

ಎಲ್ಲರಿಗೂ (ನನ್ನ ಸೇರಿ)
ಅಪ್ಪನನ್ನು ಇನ್ನಷ್ಟು ಆರೈಕೆ ಮಾಡಬೇಕಿತ್ತು
ಕೊನೆಯ ದಿನಗಳಲ್ಲಿ ಅಮ್ಮನ ಸೇವೆ
ಮಾಡಬೇಕಿತ್ತು ಆ ಮಿತ್ರನೊಂದಿಗೆ
ಪರಲು ಹರಿದುಕೊಳ್ಳಬಾರದಿತ್ತು ಎಂಬ
ಏನೇನೋ ಹಳವಂಡಗಳುಕಾಡುತ್ತವೆ.

ಅಂತೂ ಇಷ್ಟಾದರೂ ಸಾಧಿಸಿದೆನಲ್ಲ
ಎಂಬ ನೆಮ್ಮದಿಯೂ ಇದೆ
ಹಳೆಯ ಭಾವಚಿತ್ರಗಳ ನೋಡಿ
ಈಗಲೂ ಮನಸ್ಸು ತುಂಬಿ ಬರುತ್ತದೆ

ಈ ಸಮಯವೂ ಎಂಥ ವಿಚಿತ್ರ ನೋಡಿ!
ಹೇಗೆ ಸವೆದು ಹೋಗುತ್ತದೆ
ನಿನ್ನೆಯ ನವಯುವಕ ನನ್ನ ಮಿತ್ರ
ಇಂದು ವೃದ್ಧನಂತೆ ಕಾಣುತ್ತಾನೆ

ಒಂದೊಮ್ಮೆ ಕನಸು ಕಾಣುತ್ತಿದ್ದವರು
ಗತಿಸಿದ ದಿನಗಳಲ್ಲಿ ಕಳೆದು ಹೋಗಿದ್ದಾರೆ
ಆದರೆ ಇದು ಪರಮ ಸತ್ಯ!
ಎಲ್ಲಾ ಮಿತ್ರರೂ ಹಣ್ಣಾಗುತ್ತಿದ್ದಾರೆ.

ಮಿತ್ರರೇ,
ಮುಂದೆ ಸಮಯದ ಲಯ
ಇನ್ನೂ ತೀವ್ರವಾಗಲಿದೆ.
ಈಗ ಉಳಿದ ಬದುಕೇ 'ಬಹುಮಾನ'

ಆದ್ದರಿಂದ,
ಮಾಡುವುದನ್ನು ಮಾಡಿ ಮುಗಿಸಿ
ಕೊಡುವುದನ್ನು ಕೊಟ್ಟು ಮುಗಿಸಿ
ನಿರಾಳ ಮನಸ್ಸಿನಿಂದ ಬದುಕಿ
ಪ್ರತಿಯೊಬ್ಬ ಹಳೆಯ ಮಿತ್ರ
'ಕೊಹಿನೂರ್ ವಜ್ರ'
ಹಳೆಯ ಮಿತ್ರರೊಂದಿಗೆ
ಬದುಕಿನ ಕೊನೆಯ ತುಣುಕು
ನಗುನಗುತ್ತ ಕಳೆಯಿರಿ.



ರವಿನಾಥ್ ಪಟ್ಟಣ ಶಟ್ಟಿ

# ಉಗ್ರಗಾಮಿಗಳ ಅಭಿಪ್ರಾಯ ಬಹುಸಂಖ್ಯಾತರ ಅಭಿಪ್ರಾಯವಾಗಲು ಹೇಗೆ ಸಾಧ್ಯ?

● ಮಾನಸ, ಬೆಂಗಳೂರು

ನರಶಿಂಗನಾಡ್ ಸರಸ್ವತಿ, ಮಹಾಮಂಡಲೇಶ್ವರ, ಧರ್ಮಸಭೆ, ಹರಿದ್ವಾರದಲ್ಲಿ ಅಲ್ಪಸಂಖ್ಯಾತ ಮುಸ್ಲಿಮರ ವಿರುದ್ಧ ನೀಡಿದ ನರಮೇಧದ ಕರೆ, ಗುರುಗ್ರಾಮದಲ್ಲಿ ಹಿಂದುತ್ವವಾದಿ ಗುಂಪುಗಳು ಶುಕ್ರವಾರ ಪ್ರಾರ್ಥನೆ ಸಲ್ಲಿಸಲು ಮುಸ್ಲಿಮರಿಗೆ ಅಡ್ಡಿ ಮತ್ತು ದೆಹಲಿಯಲ್ಲಿ ನಡೆದ ಸಭೆಯಲ್ಲಿ ಹಿಂದೂ ಯುವ ವಾಹಿನಿಯ ಮುಸ್ಲಿಂ ವಿರೋಧಿ ನಿದರ್ಶನವನ್ನು ಅನೇಕರು ಬಳಸಿದ್ದಾರೆ ಹಾಗೂ ಭಾರತದಲ್ಲಿ ಹೆಚ್ಚುತ್ತಿರುವ ಅಸಹಿಷ್ಣುತೆಯ ಸಿದ್ಧಾಂತವನ್ನು ಮುಸ್ಲಿಮರು ಮುಂದಿಡುತ್ತಾರೆ. ಯಾವುದೇ ಸಾಮಾನ್ಯ ಮುಸ್ಲಿಮರ ದೈನಂದಿನ ಜೀವನವು ಅವರು ಈ ಹಠಾತ್ ಉಗ್ರಗಾಮಿ ಸ್ಫೋಟಗಳಿಂದ ಹೆಚ್ಚಾಗಿ ಪ್ರಭಾವಿತರಾಗಿಲ್ಲ ಎಂಬುದನ್ನು ಬಹಿರಂಗಪಡಿಸುತ್ತದೆ. ಒಬ್ಬ ಸಾಮಾನ್ಯ ಹಿಂದೂ ಇತರ ಸಾಮಾನ್ಯ ಮುಸ್ಲಿಮರೊಂದಿಗೆ ಶಾಂತಿಯುತವಾಗಿ ಬದುಕುತ್ತಾನೆ/ಕೆಲಸ ಮಾಡುತ್ತಿದ್ದಾನೆ. ಬಹು ರಾಷ್ಟ್ರೀಯ ಕಂಪನಿಗಳು (ಒಓಳ) ವೃತ್ತಿಪರ ಮುಸಲ್ಮಾನರ ಹೆಚ್ಚಿನ ಪಾಲಿಗೆ ಉದ್ಯೋಗವನ್ನು ಒದಗಿಸುತ್ತವೆ. ಟಾಟಾ ಗ್ರೂಪ್‌ನಂತಹ ಅನೇಕ MNC ತಮ್ಮ ಮುಸ್ಲಿಂ ಉದ್ಯೋಗಿಗಳಿಗೆ ತಮ್ಮ ಕಚೇರಿ ಆವರಣದಲ್ಲಿ ಶುಕ್ರವಾರದ ಪ್ರಾರ್ಥನೆಯನ್ನು ಸಲ್ಲಿಸಲು ಸ್ಥಳಾವಕಾಶವನ್ನು ಒದಗಿಸಿದೆ. ಗುರುಗ್ರಾಮ್ ಪಂಕ್ತಿಯಲ್ಲಿ, ಒಬ್ಬ ಹಿಂದೂ ಮುಂದೆ ಬಂದು ತನ್ನ ಆವರಣದಲ್ಲಿ ಶುಕ್ರವಾರ ಪ್ರಾರ್ಥನೆ ಸಲ್ಲಿಸಲು ಮುಸ್ಲಿಮರಿಗೆ ಜಾಗವನ್ನು ನೀಡಿದನು. ನಮಾಜ್‌ಗೆ ಸಂಬಂಧಿಸಿದ ಸಂಪೂರ್ಣ ಸಾಲು ಕೆಲವೇ ದಿನಗಳಲ್ಲಿ ಸಾಯುವುದನ್ನು ಇದು ಖಾತ್ರಿಪಡಿಸಿತು.



ರಾಜಕೀಯವಾಗಿ ಆವೇಶಭರಿತ ವಾತಾವರಣವಿರುವ ಚುನಾವಣೆಯ ಸಂದರ್ಭದಲ್ಲೂ ಭಾರತದಲ್ಲಿ ಪ್ರಚಲಿತದಲ್ಲಿರುವ ಕೋಮು ಸೌಹಾರ್ದತೆಗೆ ಭಂಗ ಬರುವುದು ಅಪರೂಪ. ಬಹುಪಾಲು ಭಾರತೀಯರು, ತಮ್ಮ ಧಾರ್ಮಿಕ ಸಂಬಂಧವನ್ನು ಲೆಕ್ಕಿಸದೆ, ಧಾರ್ಮಿಕ ಸ್ವಾತಂತ್ರ್ಯವನ್ನು ನಂಬುತ್ತಾರೆ, ಧಾರ್ಮಿಕ ಸಹಿಷ್ಣುತೆಯನ್ನು ಗೌರವಿಸುತ್ತಾರೆ ಮತ್ತು ಎಲ್ಲಾ ನಂಬಿಕೆಗಳಿಗೆ ಗೌರವವು ಮೂಲಭೂತವಾಗಿದೆ ಎಂದು ನಂಬುತ್ತಾರೆ. ಹಿಂದೆ ವಸೀಮ್ ರಿಜ್ವಿ ಮತ್ತು ನರಶಿಂಗನಾಡ್ ಸರಸ್ವತಿ ಎಂದು ಕರೆಯಲ್ಪಡುವ ಜಿತೇಂದ್ರ ನಾರಾಯಣ ಸಿಂಗ್ ತ್ಯಾಗಿ ವಿರುದ್ಧ ತ್ವರಿತ ಕ್ರಮವು ಭಾರತದಲ್ಲಿ ಕಾನೂನಿನ ಆಳ್ವಿಕೆಯು ಸರ್ವೋಚ್ಚವಾಗಿದೆ ಎಂದು ಸಾಬೀತುಪಡಿಸಿದೆ. ತೀವ್ರವಾದ ದೃಷ್ಟಿಕೋನಗಳನ್ನು ವೈಯಕ್ತಿಕ ಸಾಮರ್ಥ್ಯದಲ್ಲಿ ವ್ಯಕ್ತಪಡಿಸಬಹುದು, ಆದಾಗ್ಯೂ, ಉಗ್ರಗಾಮಿ ದೃಷ್ಟಿಕೋನಗಳ ಸಾರ್ವಜನಿಕ ಪ್ರದರ್ಶನವು ಖಂಡಿತವಾಗಿಯೂ ಕಾನೂನು ಕ್ರಮವನ್ನು ಆಕರ್ಷಿಸುತ್ತದೆ. ಕೇವಲ ಮುಸ್ಲಿಮರು ಮಾತ್ರವಲ್ಲ, ಯಾವುದೇ ಧಾರ್ಮಿಕ ಸಂಬಂಧವಿಲ್ಲದೆ ಭಾರತೀಯರು ಧರಮ್ ಸಂಸದ್‌ನಲ್ಲಿ ದ್ವೇಷ ಭಾಷಣದ ನಿದರ್ಶನದ ವಿರುದ್ಧ ಧ್ವನಿ ಎತ್ತಿದ್ದಾರೆ ಮತ್ತು ಕಠಿಣ ಕ್ರಮಕ್ಕಾಗಿ ಒತ್ತಾಯಿಸಲಾಯಿತು ಇದು ಭಾರತದ ನಿಜವಾದ ಸೌಂದರ್ಯವನ್ನು ತೋರಿಸುತ್ತದೆ. ನರಸಿಂಹಾನಂದ ಅವರು ಸುಪ್ರೀಂ ಕೋರ್ಟ್ ವಿರುದ್ಧ ಹೇಳಿಕೆ ನೀಡಿದ್ದಕ್ಕಾಗಿ ನ್ಯಾಯಾಂಗ ನಿಂದನೆ ಪ್ರಕರಣವನ್ನೂ ದಾಖಲಿಸಲಾಗಿದೆ. ಮುಂಬೈ ಪೋಲೀಸರು ಮತ್ತು ದೆಹಲಿ ಪೋಲೀಸ್ ಇಬ್ಬರೂ ಕೂಡಲೇ ಪ್ರತಿಕ್ರಿಯಿಸಿದರು ಮತ್ತು ಮುಸ್ಲಿಂ ಮಹಿಳೆಯರನ್ನು ಅವಮಾನಿಸುವಲ್ಲಿ (ಸುಲ್ಲಿ ವ್ಯವಹಾರಗಳು ಮತ್ತು ಬುಲ್ಲಿ ಬಾಯಿ ಪ್ರಕರಣ) ತೊಡಗಿಸಿಕೊಂಡವರನ್ನು ಬಂಧಿಸಿದರು. ಮುಸ್ಲಿಮರ ವಿರುದ್ಧ ಆಡಳಿತಾತ್ಮಕ ನಿರಾಸಕ್ತಿ ಆರೋಪಿಸುವವರ ಹೇಳಿಕೆಗೆ ಇದು ಮತ್ತೊಮ್ಮೆ ವಿರುದ್ಧವಾಗಿದೆ. ಕೋಮು ಸೌಹಾರ್ದತೆಯನ್ನು ಕಾಪಾಡಲು, ದ್ವೇಷದ ಭಾಷಣಗಳ ಘಟನೆಗಳಿಗೆ ಕಡಿವಾಣ ಹಾಕಬೇಕು ಮತ್ತು ಕಠಿಣವಾಗಿ ವ್ಯವಹರಿಸಬೇಕು. ಇದಲ್ಲದೆ, ನ್ಯಾಯಾಂಗ ಮತ್ತು ಜಾರಿ ಸಂಸ್ಥೆಗಳು ಧಾರ್ಮಿಕ ಸಂಬಂಧಗಳನ್ನು ಲೆಕ್ಕಿಸದೆ ಸಂತ್ರಸ್ತರಿಗೆ ನ್ಯಾಯವನ್ನು ಖಚಿತಪಡಿಸಿಕೊಳ್ಳಬೇಕು. ಸಾಮಾಜಿಕ ಮಟ್ಟದಲ್ಲಿ, ಹಿಂದೂ ಬಹುಸಂಖ್ಯಾತರು ಆಮೂಲಾಗ್ರೀಕರಣವನ್ನು ನಿಯಂತ್ರಣದಲ್ಲಿಡಲು ಮತ್ತು ಕೋಮು ಸೌಹಾರ್ದತೆಯನ್ನು ಕಾಪಾಡಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವ ಕಾರ್ಯದಲ್ಲಿದ್ದಾರೆ. ಭಾರತದಂತಹ ಬಹು ಧಾರ್ಮಿಕ, ಬಹು ಸಾಂಸ್ಕೃತಿಕ ದೇಶವು ಏಕತೆ ಮತ್ತು ಸಮಗ್ರತೆಯನ್ನು ಖಚಿತಪಡಿಸಿಕೊಳ್ಳಲು ಕೋಮು ಸೌಹಾರ್ದತೆಯನ್ನು ಕಾಪಾಡಿಕೊಳ್ಳಬೇಕು, ಭಾರತವು ಎರಡು ಶತ್ರುಗಳನ್ನು ಏಕಕಾಲದಲ್ಲಿ ಎದುರಿಸಬೇಕಾಗುತ್ತದೆ: ಚೀನಾ ಮತ್ತು ಪಾಕಿಸ್ತಾನ. ಏಕೀಕೃತ ಭಾರತವು ಅವರಿಬ್ಬರನ್ನೂ ಏಕಕಾಲದಲ್ಲಿ ಹೋರಾಡುವ ಸಾಮರ್ಥ್ಯವನ್ನು ಹೊಂದಿದೆ, ಆದಾಗ್ಯೂ, ವಿಭಜಿತ ರಾಷ್ಟ್ರವು ಅದನ್ನು ಒಳಗಿನಿಂದ ಎಚ್ಚರಗೊಳಿಸುತ್ತದೆ ಮತ್ತು ಶತ್ರು ಶಕ್ತಿಗಳು ಇದರ ಲಾಭವನ್ನು ಪಡೆಯುವುದು ಖಚಿತ.

# ಚಳಿಗಾಲದ ಒಲಿಂಪಿಕ್ಸ್‌ಗೆ ತೆರೆಬಿದ್ದರೂ ವಿವಾದಗಳು ಮಾತ್ರ ಜೀವಂತ



● ಮಲ್ಲಿಕಾರ್ಜುನ ಹಿರೇಮಠ್

ಬೀಜಿಂಗ್‌ನಲ್ಲಿ ನಡೆದ ಚಳಿಗಾಲದ ಕ್ರೀಡಾ ವೈಭವ ಮುಕ್ತಾಯಗೊಂಡಿದ್ದು  ಕೆಲ ಆರೋಪಗಳಿಗೂ ಕಾರಣವಾಗಿದೆ.ಕಾರ್ಯಕ್ರಮಗಳು ವೈವಿಧ್ಯಮಯವಾಗಿದ್ದರೂ ಅಲ್ಲಿನ  ವ್ಯವಸ್ಥೆಗಳ ಬಗ್ಗೆ ಕ್ರೀಡಾಪಟುಗಳು ಅಸಮಾಧಾನಗೊಂಡಿದ್ದಾರೆ.

ಫೆ 4 ರಿಂದ ಆರಂಭವಾದ ಈ ಚಳಿಗಾಲದ ಕ್ರೀಡೆಗಳು ಕಳೆದ ಭಾನುವಾರ ತೆರೆ ಬಿದ್ದಿತು. ಕ್ರೀಡಾ ವೈಭವ ಮೆರೆದ ಮತ್ತು ಮೈಲುಗಲ್ಲುಗಳು ಸ್ಥಾಪನೆಯಾದ ಒಲಿಂಪಿಕ್ಸ್‌ನಲ್ಲಿ ರಷ್ಯಾದ ಡೋಪಿಂಗ್ ಪ್ರಕರಣ ಕಪ್ಪುಚುಕ್ಕೆಯಾಗಿ ಪರಿಣಮಿಸಿತು.

ಎಯ್ಲೀನ್ ಗೂ ಅವರಂಥ ಹೊಸ ತಾರೆಗಳ ಉದಯಕ್ಕೆ ಕಾರಣವಾದ ಒಲಿಂಪಿಕ್ಸ್‌ನಲ್ಲಿ 15 ವರ್ಷದ ಫಿಗರ್ ಸ್ಕೇಟರ್ ಕಮಿಲ ವಲೀವಾ ಡೋಪಿಂಗ್ ವಿವಾದಕ್ಕೆ ಕಾರಣರಾಗಿದ್ದಾರೆ. ಕೋವಿಡ್–19ರ ಆತಂಕದಿಂದಾಗಿ ಬಯೊ ಬಬಲ್‌ನಲ್ಲಿ ಕಳೆದರೂ ಕ್ರೀಡಾಪಟುಗಳು ಅತ್ಯುತ್ತಮ ಸಾಮರ್ಥ್ಯ ಪ್ರದರ್ಶಿಸಿದರು.'ಬರ್ಡ್ಸ್ ನೆಸ್ಟ್' ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಪಾಲ್ಗೊಂಡಿದ್ದರು

ಪ್ರೇಕ್ಷಕರು ಅಂತರ ಕಾಯ್ದುಕೊಂಡು ಕುಳಿತು ಕಾರ್ಯಕ್ರಮ ವೀಕ್ಷಿಸಿದರು.ಮಂಜಿನ ಆವರಣದ ಕಾರ್ಯಕ್ರಮವು ಪ್ರೇಕ್ಷಕರನ್ನು ಮುದಗೊಳಿಸಿತು. ಅಮೆರಿಕದ 22ರ ಹರೆಯದ ಅಥ್ಲೀಟ್ ನಥಾನ್ ಚೆನ್ ಅವರು ಎರಡು ಬಾರಿಯ ಚಾಂಪಿಯಹ್ ಜಪಾನ್‌ನ ಯುಜುರು ಹನ್ಯು ಅವರನ್ನು ಹಿಂದಿಕ್ಕಿ ಚಿನ್ನ ಗೆದ್ದಿದ್ದರು.ಅಮೆರಿಕದ ಸ್ನೋಬೋರ್ಡ್ ಅಥ್ಲೀಟ್ 35 ವರ್ಷದ ಶಾನ್ ವೈಟ್ ಕೂಡ ಗಮನಾರ್ಹ ಸಾಧನೆ ಮಾಡಿದ್ದರು.

ಬೀಜಿಂಗ್ ನಗರದಲ್ಲಿ ಕೊರೋನಾವೈರಸ್ ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೇ ಇದ್ದು, ವೈರಸ್ ಹರಡುವ ಭೀತಿಯಲ್ಲಿಯೇ ಕ್ರೀಡಾ ಕೂಟವನ್ನು ಆಯೋಜನೆ ಮಾಡಲಾಗಿದೆ. ಹೀಗೆ ಬೀಜಿಂಗ್ ನಗರದಲ್ಲಿ ಆರಂಭವಾದ ಚಳಿಗಾಲದ ಒಲಿಂಪಿಕ್ಸ್ ಕ್ರೀಡಾಕೂಟ ಆರಂಭಕ್ಕೂ ಮುನ್ನವೇ ಸಾಕಷ್ಟು ಟೀಕೆ ಹಾಗೂ ವಿವಾದಗಳಿಗೆ ಕಾರಣವಾಗಿತ್ತು. ವಿವಿಧ ದೇಶಗಳ ಭಾಗವಹಿಸುವಿಕೆಯ ವಿಚಾರವಾಗಿ ವಿವಾದಕ್ಕೆ ಕಾರಣವಾಗಿದ್ದ ಈ ಚಳಿಗಾಲದ ಒಲಿಂಪಿಕ್ಸ್ ಇದೀಗ ಸಾಕಷ್ಟು ವಿವಾದಗಳನ್ನು ಸೃಷ್ಟಿಸುತ್ತಿದೆ. ಹೌದು, ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ವಿವಿಧ ದೇಶಗಳಿಂದ ಬೀಜಿಂಗ್ ನಗರಕ್ಕೆ ಆಗಮಿಸಿರುವ ಹಲವಾರು ಕ್ರೀಡಾಪಟುಗಳಿಗೆ ಪ್ರತ್ಯೇಕ ಕೋಣೆಗಳನ್ನು ನೀಡಿ ಬಯೋ ಬಬಲ್ ವ್ಯವಸ್ಥೆಯನ್ನು ಮಾಡಲಾಗಿತ್ತು ಆದರೆ ಆಯೋಜಕರು ಉತ್ತಮ ಆಹಾರದ ಸರಬರಾಜನ್ನು ಮಾಡಲಿಲ್ಲ ಎಂಬ ಆರೋಪಗಳು ಕ್ರೀಡಾಪಟುಗಳು ಕ್ರೀಡಾಪಟುಗಳಿಂದ ಕೇಳಿಬಂದವು.

ರಷ್ಯಾದ ವಲೇರಿಯಾ ವಾಟ್ನೆಟ್ಸೊವಾ ಎಂಬ ಕ್ರೀಡಾಪಟು  ಈ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದು ತಾನು ಬಯೋ ಬಬಲ್ ವ್ಯವಸ್ಥೆಯಲ್ಲಿ ಉಳಿದುಕೊಂಡಿರುವ ಕೊಠಡಿ ಹಾಗೂ ತನಗೆ ಸಿಗುತ್ತಿರುವ ಆಹಾರದ ವಿರುದ್ಧ ಸಾಮಾಜಿಕ ಜಾಲತಾಣದ ಮೂಲಕ ಕಿಡಿಕಾರಿದ್ದಳು. ತೀರಾ ಸಣ್ಣ ಜಾಗವಿರುವ ಕೊಠಡಿಗಳನ್ನು ಕ್ರೀಡಾಪಟುಗಳಿಗೆ ನೀಡಲಾಗಿತ್ತು ಕ್ರೀಡಾಕೂಟಕ್ಕಾಗಿ ಅಗತ್ಯವಿರುವ ವ್ಯಾಯಾಮ ಮಾಡಲು ಕೂಡ ಜಾಗ ಸಾಕಾಗುತ್ತಿಲ್ಲ, ಚಿಕ್ಕ ಕೊಠಡಿಯಲ್ಲಿ ವ್ಯಾಯಾಮ ಮಾಡಲು ಪ್ರಯತ್ನಿಸಿ ಕೈಕಾಲು ನೋವಾಗಿದೆ ಎಂದು ದೊಡ್ಡ ಮಟ್ಟದ ಆರೋಪ ಮಾಡಿದ್ದಾಳೆ. ಅಷ್ಟೇ ಅಲ್ಲದೆ ಮುಂದಿನ ಮೂರ್ನಾಲ್ಕು ದಿನಗಳಿಗೆ ಸಾಕಾಗುವಷ್ಟು ಆಹಾರವನ್ನು ಮೊದಲೇ ಒದಗಿಸುತ್ತಿರುವುದರಿಂದ ತಾಜಾ ಆಹಾರ ಸಿಗುತ್ತಿಲ್ಲ ಎಂದು ಅವರು ಆಕ್ರೋಶ ಹೊರಹಾಕಿದ್ದರು. ರಾತ್ರಿಯಿಡೀ ಕಣ್ಣೀರು ಹಾಕಿದ್ದೇನೆ ಎಂದು ಟ್ವೀಟ್‌ನಲ್ಲಿಬರೆದುಕೊಂಡಿದ್ದಾಳೆ. ಪೋಲಿಷ್ ಸ್ಪೀಡ್ ಸ್ಕೇಟರ್ ನಟಾಲಿಯಾ ಮಾಲಿಸ್ಜೆವ್ಸ್ಕಾ ವಿಂಟರ್ ಒಲಿಂಪಿಕ್ಸ್ ಅಧಿಕಾರಿಗಳ ದುರ್ವರ್ತನೆಯನ್ನು ಬಿಚ್ಚಿಟ್ಟಿದ್ದಾರೆ. ಕೊವಿಕ್ ಪರೀಕ್ಷೆ ನಡೆಸುವ ವೇಳೆ ಪದೇ ಪದೇ ತನ್ನ ಕೊಠಡಿಯನ್ನು ಬದಲಾಯಿಸಿದ್ದು ಮಾತ್ರವಲ್ಲದೆ ತನಗೆ ಕೊರೊನಾ ಸೋಂಕು ಇಲ್ಲ ಎಂಬುದು ಪರೀಕ್ಷೆಯಲ್ಲಿ ತಿಳಿದ ಕೂಡಲೇ ಬೆಳಗಿನ ಜಾವ 3 ಗಂಟೆಗೆ ತನ್ನನ್ನು ಹಾಸಿಗೆಯಿಂದ ಎಳೆದು ಒಲಿಂಪಿಕ್ಸ್ ಗ್ರಾಮಕ್ಕೆ ಕೊಂಡೊಯ್ದರು ಎಂದು ಆರೋಪಿಸಿದ್ದಾರೆ. ಹೀಗೆ ಸರಿಯಾದ ನಿದ್ರೆ, ಊಟದ ವ್ಯವಸ್ಥೆ ಮತ್ತು ಕೊಠಡಿ ವ್ಯವಸ್ಥೆ ಇಲ್ಲದೇ ಕ್ರೀಡಾಪಟುಗಳಿಗೆ ಹಿಂಸಾತ್ಮಕ ಪರಿಸ್ಥಿತಿ ಉಂಟಾಗಿದೆ ಎಂದು ಹಲವಾರು ಕ್ರೀಡಾಪಟುಗಳು ಆರೋಪ ಮಾಡಿದ್ದಾರೆ. ಇನ್ನು ಬೀಜಿಂಗ್‌ನಲ್ಲಿರುವ 'ಬರ್ಡ್ಸ್ ನೆಸ್ಟ್' ಎಂದು ಖ್ಯಾತವಾಗಿರುವ ನ್ಯಾಶನಲ್ ಸ್ಟೇಡಿಯಂನಲ್ಲಿ ಈ ವಿಂಟರ್ ಒಲಿಂಪಿಕ್ಸ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭ ನಡೆಯಿತು. ಈ ಕ್ರೀಡಾಂಗಣ 2008ರ ಬೋಹಿಂಗ್ ಒಲಿಂಪಿಕ್ಸ್‌ನ ಉದ್ಘಾಟನಾ ಹಾಗೂ ಸಮಾರೋಪ ಸಮಾರಂಭಕ್ಕೆ ಸಾಕ್ಷಿಯಾಗಿತ್ತು. ಆದರೆ ಈ ಬಾರಿ ಈ ಕ್ರೀಡಾಂಗಣದಲ್ಲಿ ಯಾವುದೇ ಸ್ಪರ್ಧೆಗಳು ಕೂಡ ಈ ಕ್ರೀಡಾಂಗಣದಲ್ಲ ನಡೆಯುವುದಿಲ್ಲ. ಹಾಗೂ ಈ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಭಾರತದ ಪರವಾಗಿ ಓರ್ವ ಕ್ರೀಡಾಪಟು ಮಾತ್ರವೇ ಭಾಗವಹಿಸಿದ್ದರು ಎಂಬುದು ಗಮನಾರ್ಹ. 31ರ ಹರೆಯದ ಕಾಶ್ಮೀರ ಮೂಲದ ಆರಿಫ್ ಖಾನ್ ಈ ಚಳಿಗಾದ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ  ಏಕೈಕ ಭಾರತೀಯ ಕ್ರೀಡಾಪಟುವಾಗಿದ್ದರು ಈ ಮೂಲಕ ಕಾಶ್ಮೀರ ಹಾಗೂ ಭಾರತದ ಹೆಮ್ಮೆಗೆ ಕಾರಣವಾಗಿದ್ದರು.


ಒಟ್ಟಾರೆ ಈ  ಚಳಿಗಾಲದ ಓಲಂಪಿಕ್ ಕ್ರೀಡಾಕೂಟ ಹಲವಾರು ವಿವಾದಗಳ ಮಧ್ಯೆ ನಡೆದು ಈಗ ತೆರೆ ಬಿದ್ದಿದೆ ಅದೆ ಬೀಜಿಂಗ್‌ನಲ್ಲಿ ಆದ ಆ ಅವ್ಯವಸ್ಥೆಯ ವಿರುದ್ಧ ಕ್ರೀಡಾಪಟುಗಳು ತಮ್ಮ ಆಕ್ರೋಶಗಳನ್ನು ವ್ಯಕ್ತಪಡಿಸಿದ್ದಾರೆ.

# ನಿರ್ದೇಶನ, ಸಾಹಿತ್ಯ ರಚನೆ, ಅಭಿನಯ ಕ್ಷೇತ್ರಗಳ ಸಾಧಕ ಜಿ.ವಿ.ಅಯ್ಯರ್

ತೆರೆಮರೆ


ಕನ್ನಡ ಚಿತ್ರ ಇತಿಹಾಸ

ಭಾಗ-66



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ವಿಶ್ವದ ಪ್ರಥಮ ಸಂಸ್ಕೃತಚಿತ್ರ ರೂಪಿಸಿದ ಗಣಪತಿಅಯ್ಯರ್ ವೆಂಕರಮಣಅಯ್ಯರ್ 1917ರ ಸೆಪ್ಟೆಂಬರ್ 3ರಂದು ಜನಿಸಿದರು.ಓದಿಗೆ ವಿರಾಮ ಹಾಕಿ ಹತ್ತನೆ ವಯಸ್ಸಿನಲ್ಲಿ ಮನೆ ಬಿಟ್ಟುಗುಬ್ಬಿ ಕಂಪನಿಗೆ ಬಂದರೆಅಲ್ಲಿದೊರೆತದ್ದು ಪರಿಚಾರಕನ ಕೆಲಸ.ಮೂರು ವರ್ಷ ಈ ಕಾಯಕ.ಬಿಡುವಿನ ವೇಳೆಯಲ್ಲಿ ಪರದೆ ಬರೆಯುವಕಲಾವಿದನ ಬಳಿ ನಿಂತು ಕುಳಿತು ನೋಡಿಕುಂಚಕಲೆಯನ್ನುಕರಗತ ಮಾಡಿಕೊಂಡರು.ಪೋಸ್ಟರ್ ಬರೆಯುವ ಉಪ ವೃತ್ತಿ ಕೊಂಚ ದಿವಸ. ಚಲನಚಿತ್ರದಲ್ಲಿ ಅವಕಾಶ ಅರಸಿ ಪುಣೆಗೆ ಬಂದರೆಅಲ್ಲಿದೊರೆತದ್ದು ಹೋಟೆಲ್ ಮಾಣಿ ಕೆಲಸ. 1932ರಲ್ಲಿ ನಂಜನಗೂಡಿಗೆ ಹಿಂದಿರುಗಿದರು. ಯಂತ್ರಕಟ್ಟುವತಂತ್ರ ವಿದ್ಯೆ, ಬಡಗಿ ಕೆಲಸ ಮುಂತಾದ ಹೊಸ ವೃತ್ತಿಗಳಲ್ಲಿ ತೊಡಗಿಕೊಂಡರು.ವಾರಾನ್ನದ ಮೂಲಕ ಜೀವನ ಮಾಡಿಕೊಂಡಿದ್ದ ವೆಂಕಟರಮಣತನ್ನ 15ನೆಯ ವಯಸ್ಸಿನಲ್ಲಿ ಪುನಃ ಗುಬ್ಬಿ ಕಂಪನಿ ಸೇರಿದರು.



18ನೆಯ ವಯಸ್ಸಿನಲ್ಲಿ ಜಿ.ವಿ.ಅಯ್ಯರ್ ಮೇಲೆ ಕೈಲಾಸಂ ನಾಟಕಗಳು ಪ್ರಭಾವ ಬೀರಿದವು. ಬಾಲಕೃಷ್ಣ ಅವರೊಂದಿಗೆ 'ಬೇಡರಕಣ್ಣಪ್ಪ' ನಾಟಕ ರಚಿಸಿದರು.'ಅಡ್ಡದಾರಿ' ನಾಟಕ ಬರೆದರು.ಈ ನಾಟಕಗಳು ಗುಬ್ಬಿಕಂಪನಿಯಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡವು. ವೀರಣ್ಣನವರು 'ಜೀವನ ನಾಟಕ' (1940) ಚಲನಚಿತ್ರ ಮಾಡಿದಾಗಅಯ್ಯರ್‌ಗೆ ಸಣ್ಣ ಪಾತ್ರದೊರೆಯಿತು. ಕನ್ನಡದ ಮೊದಲ ಮಹಿಳಾ ನಿರ್ಮಾಣದಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಎಂ.ವಿ.ರಾಜಮ್ಮ ತಯಾರಿಸಿದ 'ರಾಧಾರಮಣ' (1942) ಚಿತ್ರದಲ್ಲಿ ಜಿ.ವಿ.ಅಯ್ಯರ್ ಅಭಿನಯಿಸಿದರು. ಈ ಚಿತ್ರದಲ್ಲಿಅಯ್ಯರ್‌ಗೆ ಕೇಶೀದೈತ್ಯನ ಪಾತ್ರ.ಈ ಚಿತ್ರಕ್ಕಾಗಿಅಯ್ಯರ್‌ಎರಡು ಹಾಡುಗಳನ್ನು ರಚಿಸಿದರು.ಪುನಃ ಜೀವನದಲ್ಲಿತಿರುವು.ವಿವಾಹ ಮಾಡಿಕೊಂಡಅಯ್ಯರ್‌ರಂಗಭೂಮಿ, ಚಿತ್ರರಂಗಕ್ಕೆ ವಿದಾಯ ಹೇಳಿ ಕಾನ್ಪುರಕ್ಕೆ ತೆರಳಿದರು. ಅಲ್ಲಿಕಚೇರಿಯೊಂದರಲ್ಲಿಗುಮಾಸ್ತೆ, ಬೆರಳಚ್ಚುಗಾರನ ಕೆಲಸ ಮಾಡಿದರು.ಸ್ವಲ್ಪ ದಿನ ಮಾತ್ರ.

ರಾಜಕುಮಾರ್‌ಅಭಿನಯದ ಮೊದಲ ಚಿತ್ರ 'ಬೇಡರಕಣ್ಣಪ್ಪ' ಅಯ್ಯರಿಗೆತಿರುವು ನೀಡಿದಚಿತ್ರ. ನಂತರ 'ಸೋದರಿ' ಚಿತ್ರಕ್ಕಾಗಿ ಸಾಹಿತ್ಯ, ಗೀತೆಗಳನ್ನು ರಚಿಸಿ ಅಭಿನಯಿಸಿದರು. ಚಲನಚಿತ್ರಗಳಲ್ಲಿ ಅವಕಾಶ ಸಿಗದೆ ಹೋದಾಗ ರಾಜಕುಮಾರ್, ಬಾಲಕೃಷ್ಣ, ನರಸಿಂಹರಾಜು ಅವರೊಂದಿಗೆ ಸೇರಿಕೊಂಡು ನಾಟಕ ಕಂಪನಿ ಕಟ್ಟಿ, ಹಲವಾರು ನಾಟಕಗಳನ್ನು ಪ್ರದರ್ಶಿಸಿದರು.ಜಿ.ವಿ.ಅಯ್ಯರ್ ನಿರ್ದೇಶನದ ಮೊದಲ ಚಿತ್ರ 'ಭೂದಾನ' (1962). ಕಥೆ, ಚಿತ್ರಕಥೆ, ಸಂಭಾಷಣೆ, ಹಾಡುಗಳನ್ನು ಅಯ್ಯರ್ ರಚಿಸಿದರು.'ತಾಯಿ ಕರುಳು'ಅಯ್ಯರ್ ಸ್ವಂತ ನಿರ್ಮಾಣದ ಮೊದಲ ಚಿತ್ರ.1963ರಲ್ಲಿ 'ರಾಯರಮಗಳು', 'ಬಂಗಾರಿ' ಚಿತ್ರಗಳನ್ನು ನಿರ್ಮಿಸಿ, ನಿರ್ದೇಶಿಸಿದರು.ಪೋಸ್ಟ್‌ಮಾಸ್ಟರ್ (1964), ಕಿಲಾಡಿರಂಗ (1966), ರಾಜಶೇಖರ್ (1967), ಮೈಸೂರುಟಾಂಗ (1968), ನಾನೇ ಭಾಗ್ಯವತಿ (1968) ಚಿತ್ರಗಳನ್ನು ನಿರ್ದೇಶಿಸಿದರು.

ತರಾಸುಕಾದಂಬರಿ 'ಹಂಸಗೀತೆ' (1976) ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದರು. ವಿಶ್ವದ ಪ್ರಥಮ ಸಂಸ್ಕೃತಚಿತ್ರ 'ಆದಿಶಂಕರಾಚಾರ್ಯ' (1980) ಹೊಸ ಸಾಹಸ. ತಮಿಳಿನ 'ರಾಮಾನುಜಾಚಾರ್ಯ' (1988), ಸಂಸ್ಕೃತದ 'ಭಗವದ್ಗೀತೆ' (1993) ಕನ್ನಡದ 'ಮಧ್ವಾಚಾರ್ಯ' ಚಿತ್ರಗಳನ್ನು ನಿರ್ದೇಶಿಸಿದರು. 'ವಿವೇಕಾನಂದ' ಇವರ ಮೂಸೆಯಲ್ಲಿ ಅರಳಿದ ಮತ್ತೊಂದುಉತ್ತಮ ಪ್ರಯೋಗ.ಜಿ.ವಿ.ಅಯ್ಯರ್ ನೂರಾರುಉತ್ಕೃಷ್ಟ ಗೀತೆಗಳನ್ನು ಚಲನಚಿತ್ರಗಳಿಗಾಗಿ ರಚಿಸಿದ್ದಾರೆ. ಅಯ್ಯರ್ ನಿರ್ಮಾಣದ 'ವಂಶವೃಕ್ಷ' ರಾಜ್ಯ ಸರ್ಕಾರದಿಂದ




1970-71ರ ಸಾಲಿನ ಪ್ರಥಮ ಅತ್ಯುತ್ತಮಚಿತ್ರ ಪ್ರಶಸ್ತಿಗೆ ಪಾತ್ರವಾಯಿತು.'ಹಂಸಗೀತೆ' 1975-76ರಲ್ಲಿ ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ ಗಳಿಸಿತು.'ಮಧ್ವಾಚಾರ್ಯ' 1986-87ರ ತೃತೀಯಅತ್ಯುತ್ತಮಚಿತ್ರ ಪ್ರಶಸ್ತಿ ಪಡೆದುಕೊಂಡಿತು.'ವಂಶವೃಕ್ಷ' ಕೇಂದ್ರ ಪ್ರಶಸ್ತಿಗೂ ಪಾತ್ರವಾಯಿತು.'ಆದಿ ಶಂಕರಾಚಾರ್ಯ' ಮತ್ತು 'ಭಗವದ್ಗೀತೆ' ಸಂಸ್ಕೃತ ಚಿತ್ರಗಳಿಗೆ ಕೇಂದ್ರ ಸರ್ಕಾರಉತ್ಕೃಷ್ಟ 'ಸ್ವರ್ಣ ಕಮಲ' ನೀಡಿತು.'ಮಧ್ವಾಚಾರ್ಯ' ಚಿತ್ರಕ್ಕೆಕೇಂದ್ರ ಸರ್ಕಾರಅತ್ಯುತ್ತಮನಿರ್ದೇಶಕ ಪ್ರಶ್ತಿ ನೀಡಿತು.'ಹಂಸಗೀತೆ' ಟಾಷ್ಕೆಂಟ್‌ಚಿತ್ರೋತ್ಸವದಲ್ಲಿ ಪಾಲ್ಗೊಂಡಿತು. ಸರ್ಕಾರ 1987-88ರಲ್ಲಿ ಪುಟ್ಟಣ್ಣಕಣಗಾಲ್ ಪ್ರಶಸ್ತಿ ನೀಡಿ ಗೌರವಿಸಿದೆ. ತಮ್ಮಇಡೀಜೀವನವನ್ನು ಬರಿಗಾಲಲ್ಲಿ ಸವೆಸಿದ ಅಯ್ಯರ್ ಪಾದರಕ್ಷೆ ತೊಟ್ಟವರಲ್ಲ. ಮೈಸೂರು ರಸ್ತೆಯ ರಾಮೋಹಳ್ಳಿ ಬಳಿ ಭಾರದ್ವಾಜಆಶ್ರಮ ನಿರ್ಮಿಸಿ ಅಲ್ಲಿ ಸರಳ ಜೀವನ ನಡೆಸಿದರು.'ರಾಮಾಯಣ' ಚಿತ್ರಕ್ಕಾಗಿ ರಾವಣ ಪಾತ್ರಧಾರಿಯನ್ನುಅರಸಲು ಮುಂಬೈಗೆ ಹೊರಟ ಇವರನ್ನು (21 ಡಿಸೆಂಬರ್ 2003) ವಿಧಿ ಸೆಳೆದುಕೊಂಡಿತು.

## ನಿಮ್ಮ ಮಾತು




### ಗುಣಮಟ್ಟದ ಪತ್ರಿಕೆ

ಈ ವಾರದ ಕೆಂಧೂಳಿ ಕಣವಿ ಅವರ ಲೇಖನವನ್ನು ಮುಖಪುಟದಲ್ಲಿ ಪ್ರಕಟಿಸುವ ಮೂಲಕ ಸಾಹಿತ್ಯದ ಬಗ್ಗೆ ಹೆಚ್ಚು ಒಲವು ಮೂಡಿಸಿದೆ. ಇತ್ತೀಚಿಗೆ ಬರುತ್ತಿರುವ ಕೆಲವೇ ಕೆಲವು ವಾರಪತ್ರಿಕೆಗಳಲ್ಲಿಯೂ ಇಂತ ಯಾವುದೇ ಸದಬಿರುಚಿಯ ಲೇಖನಗಳಾಗಲಿ ಒಂದು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಬರುತ್ತಿಲ್ಲ. ಆದರೆ ಕೆಂಧೂಳಿ ಆ ನಿಟ್ಟಿನಲ್ಲಿ ಕರ್ನಾಟಕದ ಜನತೆಗೆ ಒಂದು ಗುಣಮಟ್ಟದ ಪತ್ರಿಕೆ ಬರುತ್ತಿದೆ ಎನ್ನುವುದೇ ಸಮಾಧಾನದ ಸಂಗತಿ. ಯಾಕೆಂದರೆ ಓದುವ ಯಾವುದೇ ಪತ್ರಿಕೆಗಳು ಇಂದು ಬರುತ್ತಿಲ್ಲ ಆದರೆ ಕೆಂಧೂಳಿ ಎಲ್ಲಾ ಲೇಖನಗಳನ್ನು ಓದಿಸುತ್ತದೆ ಎನ್ನುವುದು ಬಹುಮುಖ್ಯವಾಗಿದೆ. ಅದರಲ್ಲೂ ಡಿ.ಉಮಾಪತಿ, ಬಾಸ್ಕರ್ ರಾವ್, ಅ.ನಾ ಪ್ರಹ್ಲಾದ್ ರಾವ್, ಮತ್ತು ಸನತ್ ಕುಮಾರ್ ಬೆಳಗಲಿ ಅಂತ ಹಿರಿಯ ಪತ್ರಕರ್ತರ ಲೇಖನಗಳು ನಿಜಕ್ಕೂ ಅದ್ಭುತವಾಗಿರುತ್ತವೆ ಅವರೆಲ್ಲರೂ ಒಂದು ಸೈದ್ಧಾಂತಿಕ ಹಿನ್ನೆಲಯಲ್ಲಿಯೇ ಬರೆಯುತ್ತಾರೆ ಹಾಗಾಗಿಯೇ ನಿಮ್ಮ ಪತ್ರಿಕೆಗೆ ಒಂದು ಕ್ರೆಡಿಬಲಿಡಿ ಎಂದು ನಂಬಿದ್ದೇನೆ . ಏನೇ ಅಗಲಿ ನಿಮ್ಮ ಪತ್ರಿಕೆಗೆ ಭವಿಷ್ಯ ಇದೆ ಇದೇ ಹಾದಿಯಲ್ಲಿ ಸಾಗಿದರೆ ಮುಂದೊಂದು ದಿನ ಲಂಕೇಶ್,ಹಾಯ್ ಬೆಂಗಳೂರು ಪತ್ರಿಕೆಗಳಂತೆ ಮಿಂಚಬಲ್ಲಿರಿ ಎಂದುಕೊಂಡಿದ್ದೇನೆ. ನಿಮ್ಮವ...

● ಹರಿಪ್ರಸಾದ್ ಹಿರಿಮನೆ ಚಿಕ್ಕಮಗಳೂರು.

### ಪತ್ರಿಕೆ ಮತ್ತಷ್ಟು ಬೆಳೆಯಲಿ

ಕೆಂಧೂಳಿ 'ಹೊಸಗನ್ನಡ ಕಾವ್ಯಕ್ಕೆ ಹೊಸಬೆಳಕು ಕೊಟ್ಟ ಕಣವಿ' ಎಂಬ ಮುಖಪುಟ ಎಲ್ಲರನ್ನು ಗಮನಸೆಳೆಯುತ್ತಿದೆ. ಪತ್ರಿಕೆನೋಡಿದಾಕ್ಷಣ ಕೊಂಡುಕೊಳ್ಳಬೇಕು ಎನಿಸಿತು ಹಾಗಾಗಿ ಪತ್ರಿಕೆ ಕೊಂಡು ಓದಿದಾಗ ಒಂದು ಸಮಾಧಾನ ಆಯಿತು ಏಕೆಂದರೆ ರಾಜ್ಯದಲ್ಲಿ ಸದ್ಯ ಯಾವುದೇ ಪತ್ರಿಕೆಗಳು ಇಲ್ಲದ ಈ ಸಂದರ್ಭದಲ್ಲಿ ಇಂತದ್ದೊಂದು ಪತ್ರಿಕೆ ಬರುತ್ತಿದೆ ಎನ್ನುವುದು ನನಗೆ ಹೆಮ್ಮೆಎನಿಸಿತು. ಅದರಲ್ಲೂಹಿರಿಯ ಪತ್ರಕರ್ತರಾದ ಡಿ. ಉಮಾಪತಿ ಅವರ ಅಂಕಣ ನನಗೆ ಬಹಳಷ್ಟು ಇಷ್ಟವಾಯಿತು ಅಲ್ಲದೆ ಮನಮಿಡಿತ ಎಷ್ಟೊಂದು ಅರ್ಥಗರ್ಬಿತವಾಗಿ ಬರೆದ್ದೀರಿ ಎನ್ನುವುದು ನನಗೆ ಅಚ್ಚರಿ ಮೂಡಿಸಿತು. ಇನ್ನೂ ಪೊಲೀಸ್ ವ್ಯವಸ್ಥೆಯ ಕೆಟ್ಟ ಸ್ಥಿತಿಗೆ ಹೊಣೆ ಯಾರು? ಎನ್ನುವ ಪರಶಿವ ಧನಗೂರು ಅವರ ಲೇಖನವೂ ಕೂಡ ಅತ್ಯಂತ ಮಾರ್ಮಿಕವಾಗಿದೆ . ಸನತ್ ಕುಮಾರ್ ಬೆಳಗಲಿ ಅವರ ಉತ್ತರ ಪ್ರದೇಶಧ ಚುನಾವಣೆಯ ಸ್ತಿತಿಯ ಬಗ್ಗೆ ಬರೆದಿರುವ ಲೇಖನವೂ ಚನ್ನಾಗಿ ಮೂಡಿ ಬಂದಿದೆ ಹಲವಾರು ಹಿರಿಯರು ಪತ್ರಿಕೆಗೆ ಬರೆಯುತ್ತಿರುವುದು ನೋಡಿ ಖುಷಿಯಾಯಿತು. ಪತ್ರಿಕೆ ಬೆಳಯಲಿ ಎಂದು ಆಶಿಸುತ್ತೇನೆ.

● ಸಿದ್ದಲಿಂಗ ಪಟ್ಟಣಶೆಟ್ಟಿ ಯಲಗೂರು

### ಪತ್ರಿಕೆಗೆ ಭವಿಷ್ಯವಿದೆ

ನಿಮ್ಮ ಪತ್ರಿಕೆ ಕೆಂಧೂಳಿ ವಾರ ವಾರವೂ ಅದ್ಭುತವಾಗಿ ಮೂಡಿ ಬರುತ್ತಿದೆ. ಅದರಲ್ಲೂ ಈ ವಾರ ಕಣವಿ ಅವರ ಬಗ್ಗೆ ಬರೆದ ಕವರ್ ಪೇಜ್ ಆರ್ಟಿಕಲ್ ಅತ್ಯಂತ ಕಾವ್ಯಾತ್ಮಕವಾಗಿಯೇ ಮೂಡಿಬಂದಿದೆ .ಪತ್ರಿಕೋದ್ಯಮದ ಬದ್ದತೆಇರುವವರು ಇಂತ ಗುಣಮಟ್ಟದ ಪತ್ರಿಕೆ ಮಾಡಲು ಸಾಧ್ಯ ಎನ್ನುವುದು ನಿಮ್ಮ ಪತ್ರಿಕೆಯಿಂದ ಸಾಭೀತಾಗಿದೆ. ಪ್ರತಿ ವಾರವೂ ಒಂದಲ್ಲಾ ಒಂದು ವಿಶೇಷ ಸುದ್ದಿಗಳು ಉತ್ತಮವಾಗಿರುತ್ತವೆ ಯಾವುದೆ ಪ್ರಚೋದನಕಾರಿಯಲ್ಲದೆ ಯಾರದೇ ವಿರುದ್ಧ ಯಾರ ಪರವೂ ಅಲ್ಲದೆ ಒಂದು ಸಿದ್ಧಾಂತದಲ್ಲ ಪತ್ರಿಕೆ ತರುತ್ತಿದ್ದೀರಾ ಎನ್ನುವುದು ನನ್ನ ಅಭಿಪ್ರಾಯ . ಏಕೆಂದರೆ ನಾನು ಒಂದು ವರ್ಷದಿಂದಲೂ ನಿಮ್ಮ ಪತ್ರಿಕೆಯನ್ನು ಓದುತ್ತಿದ್ದೇನೆ ಪ್ರತಿವಾರವೂ ಗಮನಿಸುತ್ತಿದೇನೆ ಒಬ್ಬರನ್ನು ಹೊಗಳಿ ಬರೆದಿದ್ದನ್ನು ನಾನು ಕಂಡಿಲ್ಲ. ಅಲ್ಲದೆ ಈ ವಾರ ನಿಮ್ಮ ಪತ್ರಿಕೆಯ ವಾರ್ಷಿಕೋತ್ಸವ ಮತ್ತು ಮನಮಿಡಿತ ಕೃತಿ ಲೋಕಾರ್ಪಣೆ ಆಗಿರುವುದು ಸಂತಸ ಮೂಡಿಸಿತು ಆ ಸುದ್ದಿಯನ್ನು ಪ್ರಕಟಿಸಿದ್ದೀರಾ. ಏನೇ ಇರಲಿ ಪತ್ರಿಕೆಯನ್ನು ಹಾಗೆಯೇ ಕಾಪಾಡಿಕೊಂಡು ಹೋಗಿ ನಿಮ್ಮ ಪತ್ರಿಕೆಗೆ ಒಳ್ಳೆಯ ಭವಿಷ್ಯ ಇದೆ. ಒಳ್ಳೆಯದಾಗಲಿ ಆಲ್‌ದಿ ಬೆಸ್ಟ್. ನಿಮ್ಮ ಪ್ರೀತಿಯ

● ಸುನಿಲ್‌ಕುಮಾರ್ ಮೈಗೇರಿ ಧಾರವಾಡ

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109



# ನಿರಂಜನ್ ಸುಧೀಂದ್ರ ಹೊಸ ಚಿತ್ರ ಹಂಟರ್

ಸ್ಯಾಂಡಲ್‌ವುಡ್ ಖ್ಯಾತ ನಟ ಉಪೇಂದ್ರ ಅಣ್ಣನ ಮಗ ನಿರಂಜನ್ ಸುಧೀಂದ್ರ ಹಲವಾರು ಸಿನಿಮಾಗಳಿಗೆ ಸಹಿಹಾಕಿದ್ದಾರೆ. ಹಂಟರ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇದಕ್ಕೆ ಮೊನ್ನೆ ಚಾಮರಾಜಪೇಟೆಯ ಕಲಾವಿದರ ಸಂಘದಲ್ಲಿ ನಡೆದ ಮಹೋರ್ತದಲ್ಲಿ ಉಪೇಂದ್ರ ಹಾಗೂ ಪ್ರಿಯಾಂಕ ಉಪೇಂದ್ರ ಈ ಸಿನಿಮಾಕ್ಕೆ ಚಾಲನೆ ನೀಡಿದ್ದಾರೆ.

ಇದೇ ವೇಳೆ ಚಿತ್ರದ ಫಸ್ಟ್ ಲುಕ್ ಟೀಸರ್ ಅನ್ನು ಉಪೇಂದ್ರ ಬಿಡುಗಡೆ ಮಾಡಿದರು. 'ನಿರಂಜನ್ ಚಿಕ್ಕ ವಯಸ್ಸಿನಲ್ಲೇ ನಟ. ನನ್ನ 'ಎ' ಚಿತ್ರದಲ್ಲಿ ಒಂದು ಮಗು ಮಲಗಿರುವ ದೃಶ್ಯವಿದೆ. ಆ ಮಗು ನಮ್ಮ ನಿರಂಜನ್. ಆನಂತರ ನಾಟಕ, ಸಿನಿಮಾ ಇದರ ಮೇಲೆ ಅವನ ಆಸಕ್ತಿ ಬೆಳೆಯಿತು' ಎಂದರು ಉಪೇಂದ್ರ.'ಇದು ನಮ್ಮ ಸಂಸ್ಥೆಯ ಮೂರನೇ ಚಿತ್ರ. 'ಪರಿ' ಹಾಗೂ 'ಸೀಜರ್' ಹಿಂದಿನ ಚಿತ್ರಗಳು. 'ಸೀಜರ್' ಚಿತ್ರ ನಿರ್ದೇಶನ ಮಾಡಿದ್ದ ವಿನಯ್ ಕೃಷ್ಣ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ನಿರಂಜನ್ ಅವರಿಗೆ ನಾಯಕನಿಗಿರಬೇಕಾದ ಎಲ್ಲಾ ಗುಣಗಳಿವೆ. ಮುಂದೊಂದು ದಿನ ಅವರು ಬಾಲಿವುಡ್‌ನಲ್ಲೂ ಮಿಂಚಲಿದ್ದಾರೆ' ಎಂದು ನಿರ್ಮಾಪಕ ತ್ರಿವಿಕ್ರಮ ಸಾಪಲ್ಯ ಹೇಳಿದರು

'ಕೇರಳದ ಸೌಮ್ಯ ಮೆನನ್ ಈ ಚಿತ್ರದ ನಾಯಕಿ. ಆಕೆಗೆ ಕನ್ನಡದಲ್ಲಿ ಇದು ಮೊದಲ ಚಿತ್ರ. ಪ್ರಕಾಶ್ ರಾಜ್, ನಾಜರ್, ಸುಮನ್, ಸಾಧುಲೋಕಿಲ ಮುಂತಾದ ಹೆಸರಾಂತ ಕಲಾವಿದರು ನಮ್ಮ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಚಂದನ್ ಶೆಟ್ಟಿ ಈ ಚಿತ್ರದ ಸಂಗೀತ ನಿರ್ದೇಶಕ. ಮಹೇಶ್ ಛಾಯಾಗ್ರಹಣ, ಕೆ.ಜಿ.ಎಫ್. ಖ್ಯಾತಿಯ ಶ್ರೀಕಾಂತ್ ಅವರ ಸಂಕಲನ ಈ ಚಿತ್ರಕ್ಕಿದೆ' ಎಂದು ನಿರ್ದೇಶಕ ವಿನಯ್ ಕೃಷ್ಣ ತಂಡದ ಪರಿಚಯ ಮಾಡಿದರು.'ನಾನು ಇಲ್ಲಿಯವರೆಗೆ ನಾಯಕನಾಗಿ ನಟಿಸಿರುವ ಯಾವುದೇ ಚಿತ್ರ ತೆರೆಕಂಡಿಲ್ಲ. ಆದರೂ ನನ್ನ ಮೇಲೆ ನಂಬಿಕೆಯಿಟ್ಟು ಅವಕಾಶ ನೀಡಿರುವ ನಿರ್ಮಾಪಕ ತ್ರಿವಿಕ್ರಮ ಅವರಿಗೆ ನಾನು ಆಭಾರಿ. ಈ ಚಿತ್ರದಲ್ಲಿ ಮಾಸ್ ಲುಕ್‌ನಲ್ಲಿ ನಾನು ಕಾಣಿಸಿಕೊಳ್ಳುತ್ತಿದ್ದೇನೆ. ಆದಷ್ಟು ಬೇಗ ಚಿತ್ರೀಕರಣ ಪೂರ್ಣಗೊಳ್ಳಲಿದೆ' ಎಂದರು ನಿರಂಜನ್ ಸುಧೀಂದ್ರ.



# 'ತನುಜಾ' ಚಿತ್ರಕ್ಕೆ ಬಣ್ಣಹಚ್ಚಿದ ಬಿಎಸ್‌ವೈ

ಈ ಹಿಂದೆ ಅವರೇ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ತನುಜಾ ಎಂಬ ಹೆಣ್ಣುಮಗಳು ಕೋವಿಡ್ ಕಾರಣದಿಂದ ನೀಟ್ ಪರೀಕ್ಷೆ ಬರೆಯಲಾಗದೆ ತನ್ನ ಅಸಹಾಯಕತೆಯನ್ನು ತೋಡಿಕೊಂಡಿದ್ದ ಸಂದರ್ಭದಲ್ಲಿ ಪತ್ರಕರ್ತ ವಿಶ್ವೇಶ್ವರ ಭಟ್ ಹಾಗೂ ಪ್ರದೀಪ್ ಈಶ್ವರ್ ಅವರ ಸಹಕಾರದಿಂದ ಪರೀಕ್ಷೆ ಬರೆದು ನೀಟ್ ಪಾಸಾಗಿದ್ದು ಇಡೀ ದೇಶದ ಗಮನ ಸೆಳೆದಿತ್ತು.

ಪರೀಕ್ಷೆ ಬರೆಯಲು ಸುಮಾರು 350ಕಿಮೀ ದೂರ ಪ್ರಯಾಣ ಮಾಡಿ ಬಂದು ಪರೀಕ್ಷೆ ಬರೆದಿದ್ದೆ ರೋಚಕತೆಯಿಂದ ಕೂಡಿದ್ದು, ಎಲ್ಲರ ಕುತೂಹಲ ಕೆರಳಿಸಿತು ಇದನ್ನೇ ಒನ್‌ಲೈನ್ ಸ್ಟೋರಿ ಆಗಿಸಿಕೊಂಡು ಸಾಮಾಜಿಕ ಕಳಕಳಿಯುಳ್ಳ ರಾಜ್ಯಪ್ರಶಸ್ತಿ ವಿಜೇತ ಹರೀಶ್ ಎಂ.ಡಿ ಹಳ್ಳಿಯವರು ಚಿತ್ರ ನಿರ್ದೇಶನ ಮಾಡುತ್ತಿದ್ದಾರೆ. ಇದೀಗ ಮಾಜಿ ಸಿಎಂ ಆಗಮನದಿಂದ ಚಿತ್ರತಂಡಕ್ಕೆ ದೊಡ್ಡ ಗೆಲುವಾಗಿದ್ದು ಖುದ್ದು ಅಂದಿನ ಮುಖ್ಯಮಂತ್ರಿಗಳಾಗಿದ್ದ ಯಡಿಯೂರಪ್ಪ ಅವರ ಪಾತ್ರಕ್ಕೆ ಬಣ್ಣಹಚ್ಚಿದ್ದು ವಿಶೇಷವಾಗಿದೆ. 'ತನುಜಾ' ಚಿತ್ರ ನೈಜ ಘಟನೆಯಾಧಾರಿತ ವಾಗಿದ್ದು ಶಿವಮೊಗ್ಗದ ಹಾಗೂ ಬೆಂಗಳೂರಿನ ಹಲವೆಡೆ ಚಿತ್ರೀಕರಣಗೊಂಡಿದೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು ಚಿತ್ರದಲ್ಲಿ ಅಭಿನಯಿಸಿದ್ದ ಸಪ್ತ ಪಾವೂರು ಈ ಚಿತ್ರದ ಮುಖ್ಯಪಾತ್ರದಲ್ಲಿ ಅಭಿನಯಿಸುತ್ತಿದ್ದು ತಾರಾಗಣದಲ್ಲಿ ಬಿ.ಎಸ್ ಯಡಿಯೂರಪ್ಪ, ವಿಶ್ವೇಶ್ವರಯ್ಯ ಭಟ್, ಡಾ.ಕೆ ಸುಧಾಕರ್, ರಾಜೇಶ್ ನಟರಂಗ, ಕೈಲಾಶ್, ಸಂಧ್ಯಾ ಅರಕೆರೆ, ಬೇಬಿ ಶ್ರೀ, ಅಭಿನಯಿಸುತ್ತಿದ್ದು, ಪ್ರದ್ಯೋತನ ಸಂಗೀತ ನಿರ್ದೇಶನ ಹಾಗೂ ರವೀಂದ್ರನಾಥ್ ಅವರ ಛಾಯಾಗ್ರಹಣ, ಉಮೇಶ್ ಆರ್.ಬಿ ಸಂಕಲನವಿದ್ದು ಆರ್ ಚಂದ್ರಶೇಖರ್ ಪ್ರಸಾದ್ ಹಾಗೂ ಜೆ.ಎಂ ಪ್ರಹ್ಲಾದ್ ಸಂಭಾಷಣೆ ಬರೆದಿದ್ದು ನಿರ್ದೇಶಕ ಹರೀಶ್ ಎಂ.ಡಿ ಹಳ್ಳಿ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ.

# ನೀರಿನ ಸಮಸ್ಯೆ ಕುರಿತ ಮಕ್ಕಳ ಚಿತ್ರ 'ಬೆಟ್ಟದ ದಾರಿ'

ಉತ್ತರಕರ್ನಾಟಕ ಕೆಲವು ಭಾಗಗಳಲ್ಲಿ ನೀರಿನ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಸರ್ಕಾರದಿಂದ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದರೂ ರಾಜಕೀಯದ ಕೆಸರಾಟದಿಂದ ಮುಂದೇ ಹೋಗುತ್ತಿಲ್ಲ. ಇದನ್ನು ಹೇಳಲು ಕಾರಣವಿದೆ. 'ಬೆಟ್ಟದ ದಾರಿ' ಎನ್ನುವ ಮಕ್ಕಳ ಸಿನಿಮಾದ ಕತೆಯು ನೀರಿನದ್ದೆ ಆಗಿದೆ. ಕಾಲ್ಪನಿಕ ಬರದ ಊರಿನಲ್ಲಿ ನೀರು ಸಿಗದೆ ಜನರು ಪರದಾಡುತ್ತಿರುತ್ತಾರೆ. ಇದಕ್ಕೆ ಅಲ್ಲಿನ ಮುಖಂಡರು, ಶಾಸಕರು ಪ್ರಯತ್ನಪಟ್ಟರೂ ಪರಿಹಾರ ಸಿಗುವುದಿಲ್ಲ. ಕೊನೆಗೆ ಸ್ಥಳೀಯ ಮಕ್ಕಳು ಸೇರಿಕೊಂಡು ಚಾಣಾಕ್ಷತನದಿಂದ ಇದಕ್ಕೆ ಪರಿಹಾರ ಕಂಡುಹಿಡಿದು ಜನರು ನಿರಾಳರಾಗುವಂತೆ ಮಾಡುತ್ತಾರೆ. ಚಿಣ್ಣರುಗಳು ಇದನ್ನು ಹೇಗೆ ನಿಭಾಯಿಸುತ್ತಾರೆ ಎಂಬುದು ಒಂದು ಏಳೆಯ ಸಾರಾಂಶವಾಗಿದೆ. ರಚನೆ,ಚಿತ್ರಕತೆ, ಸಂಭಾಷಣೆ ಬರೆದಿರುವ ಮಾ.ಚಂದ್ರು ಆಕ್ಷನ್ ಕಟ್ ಹೇಳಿದ್ದಾರೆ. ಮೂಕಹಕ್ಕಿ ನಿರ್ಮಾಣ ಮಾಡಿದ್ದ ಚಂದ್ರಕಲಾ.ಟಿ.ಆರ್ ಸಹೋದರ ಮಂಜುನಾಥ್.ಹೆಚ್.ನಾಯಕ್ ಅವರೊಂದಿಗೆ ಜಂಟಿಯಾಗಿ ಬಂಡವಾಳ ಹೂಡಿದ್ದಾರೆ.

ಮಾ.ನಿಶಾಂತ್.ಟಿ.ರಾಠೋಡ್, ಅಲೋಕ್, ವಿಘ್ನೇಶ್‌ಭರಮಸಾಗರ, ಸೋಮನಾಥ, ಶಾಶ್ವತಿ ಸೇರಿದಂತೆ ಹದಿನಾಲ್ಕು ಮಕ್ಕಳು, ಇವರುಗಳೊಂದಿಗೆ ಹಿರಿ ಕಲಾವಿದರಾದ ರಮೇಶ್‌ಭಟ್, ಬ್ಯಾಂಕ್‌ಜನಾರ್ಧನ್, ಉಮೇಶ್ ಉಳಿದಂತೆ ಮೈಸೂರುಮಲ್ಲೇಶ್, ರಿಕ್ಕಿ, ಮಂಜುಳಾರೆಡ್ಡಿ, ಅಂಜಲಿ,ಆನಂದ್ ಮುಂತಾದವರು ನಟಿಸಿದಾರೆ. ಡಾ.ವಿ.ನಾಗೇಂದ್ರಪ್ರಸಾದ್, ಕೆ.ಕಲ್ಯಾಣ್ ಮತ್ತು ಪತ್ರಕರ್ತ ವಿಜಯಭರಮಸಾಗರ ವಿರಚಿತ ಒಟ್ಟು ನಾಲ್ಕು ಗೀತೆಗಳಿಗೆ ವೀರ್‌ಸಮರ್ಥ್ ಸಂಗೀತ ಸಂಯೋಜನೆ ಇದೆ. ಛಾಯಗ್ರಹಣ ನಂದಕುಮಾರ್, ಸಂಕಲನ ಅರ್ಜುನ್, ನೃತ್ಯ ಕಂಬಿರಾಜ್ ಅವರದಾಗಿದೆ. ಬಿಜಾಪುರ, ಕುಂದಾಪುರದ ಕಮಲಶಿಲೆ ಗುಹೆಯಲ್ಲಿ ಒಟ್ಟು 32 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಹೀರಾಲಾಲ್ ಮೂವೀಸ್ ಮುಖಾಂತರ ಸಿದ್ದಗೊಂಡಿರುವ ಸಿನಿಮಾವು ವಿತರಕ ವಿಜಯ್ ಮುಖಾಂತರ ಅತಿ ಶೀಘ್ರದಲ್ಲೆ ತೆರೆ ಕಾಣಲಿದೆ.





# ವಿಭಿನ್ನ ಪ್ರಯತ್ನದ ಸ್ಟೆಬಿಲಿಟಿ ಚಿತ್ರ

ಮಾಹಿತಿ ತಂತ್ರಜ್ಞಾನ ಮತ್ತು ದೇಶದ ಕುಖ್ಯಾತ ಅಪರಾಧಿಯೊಬ್ಬನ ಬೆನ್ನು ಬಿದ್ದಿರುವ ಕಥೆಯೊಂದನ್ನು ಸ್ನೇಹಿತರೆಲ್ಲರೂ ಸೇರಿಕೊಂಡು ತೆಗೆದಿರುವ 'ಸ್ಟೆಬಿಲಿಟಿ' ಚಿತ್ರಕ್ಕೆ ತೆರೆ ಕಾಣುವ ಮುನ್ನವೇ ಹತ್ತು ಪ್ರಶಸ್ತಿಗಳು ಬಂದಿವೆ. ಇಂತ ಚಿತ್ರವೊಂದು ಈಗ ತೆರೆಗೆ ಸಿದ್ದವಾಗಿದೆ. ವಿಜ್ಞಾನ ಹಿನ್ನೆಲೆಯ ಕಥೆಯ ಚಿತ್ರ ಇದು. ಈ ತಂಡದವರೆಲ್ಲರೂ ಉದ್ಯೋಗದಲ್ಲಿದ್ದುಕೊಂಡು ವಾರಾಂತ್ಯಗಳಲ್ಲಿ ಚಿತ್ರೀಕರಿಸಿದ್ದಾರೆ. 24 ವಾರಗಳಲ್ಲಿ ಚಿತ್ರೀಕರಣ ಮುಗಿದಿದೆ. ವಿಶೇಷವೆಂದರೆ ಈ ಚಿತ್ರಕ್ಕೆ ಆಗಿದ್ದು ಕೇವಲ 5 ಲಕ್ಷ ವೆಚ್ಚ. 110 ನಿಮಿಷಗಳ ಚಿತ್ರವಿದು.ಕಿರುಚಿತ್ರಗಳನ್ನು ಮಾಡುತ್ತಲೇ ಅನುಭವ ಪಡೆದು, ಹವ್ಯಾಸಿ ತಂತ್ರಜ್ಞರನ್ನು ಬಳಸಿಕೊಂಡಿದ್ದಾರೆ. ನಟನೆ, ಸಂಕಲನ ಎಲ್ಲವನ್ನೂ ಒಂದೇ ತಂಡದವರು ಮಾಡಿದ್ದಾರೆ. ಈ ಪ್ರಯತ್ನದ ಫಲವಾಗಿ ಈ ಚಿತ್ರ ರಾಜ್ಯದಾದ್ಯಂತ ತೆರೆ ಕಾಣುತ್ತಿದೆ. ಚಿತ್ರದ ನಾಯಕ ಕಶ್ಯಪ್ ಭಾಸ್ಕರ್.ಬೆಂಗಳೂರು, ಹಾಸನ, ಹುಬ್ಬಳ್ಳಿ ಮತ್ತು ಕೊಕ್ಕಡದಲ್ಲಿ ಚಿತ್ರೀಕರಣ ನಡೆದಿದೆರಾ ಏಜೆಂಟನೊಬ್ಬ ದೇಶದ ಕುಖ್ಯಾತ ಅಪರಾಧಿಯೊಬ್ಬನ ಬೆನ್ನು ಬಿದ್ದಿರುವ ಕಥೆ.'ಯಾವುದೇ ಲಾಭದ ನಿರೀಕ್ಷೆ ಇಲ್ಲದೆ, ನಟನೆ, ಪರಿಕರಗಳು, ಪ್ರಸಾದನ, ಬೆಳಕು, ಊಟೋಪಚಾರ ಎಲ್ಲವನ್ನೂ ನಾವೇ ಸಿದ್ಧಪಡಿಸಿಕೊಂಡು ಚಿತ್ರೀಕರಣ ನಡೆಸಿದ್ದೇವೆ ಎಂದು ಚಿತ್ರದ ನಾಯಕ ಕಶ್ಯಪ್ ಮಾಹಿತಿ ನೀಡಿದ್ದಾರೆ. ನಮಗಂತೂ ಚಿತ್ರದ ಮೇಲೆ ವಿಶ್ವಾಸವಿದೆ. ಜನ ಸ್ವೀಕರಿಸಿ ಪ್ರೋತ್ಸಾಹಿಸುತ್ತಾರೆ ಎಂಬ ನಂಬಿಕೆ ಇದೆ ಎಂದರು ನಿರ್ದೇಶಕ ಗೌತಮ್ ಕಾನಡೆ.ಸಂದೀಪ್ ಟಿ.ಸಿ., ಲಕ್ಷ್ಮೀ ಅಂಬುಗ, ಶ್ರೀನಿಧಿ ತಳಕ್, ಎಸ್. ಎನ್. ಸೇತುರಾಂ, ಸಂತೋಷ್ ಕರ್ಕಿ ತಾರಾಗಣದಲ್ಲಿದ್ದಾರೆ. ಈ ಚಿತ್ರಕ್ಕೆ ಇಂಡೋ ಸಿಂಗಾಪುರ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ, ಗೋಲ್ಡನ್ ಸ್ಪಾರೋ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ, ಇಂಡೋ- ಫ್ರೆಂಚ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ, ಗೋವಾ ಚಲನಚಿತ್ರ ಪ್ರಶಸ್ತಿ, ಉರುವತ್ತಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿದಂತೆ ಒಟ್ಟು 10 ಚಿತ್ರೋತ್ಸವಗಳ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿದೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108

Printed at : Brundavan printers, 88/1 1st cross, sameerpura road, Kg nagara Bengaluru-560019

Mob: +91 99161 91222. email: kendhooli18@gmail.com

The Editor is Responsible for selection of news under the PRB Act